Hunting was one of the judicious duties - *Rājadharma* (duty of a king towards his subjects) as well as a favourite sport and pastime. Accordingly hunting vicious wild animals was done to protect standing crops and the citizens as well as to demonstrate their physical prowess. It was also an excellent time to inspect the forest, to check on robbers and to bring peace to the forest folks. This essence of *rajadharma* was honoured during the *Vasantotsava* of the Vijayanagara *Karṇāṭa* Period, in the form of a festival of hunting, called *Mṛgayotsava*.

Virupākṣa Vasantotsava campu mentions that Śiva's (as *Virupākṣa* in Hampi) hunt takes place during *Vasantotsava*. Śiva is hailed as the best of huntmen in *Śatarudriya* (शतरुद्रिय means extolling one hundred ways of glorifying Rudra):

नमो मृगयुभ्यः श्वनिभ्यश्च वो नमो

namo mṛigayubhyah ṣvanibhyaṣcha vo namo ||

Meaning: Prostration to Thee who art the hunters and the huntsmen; prostration to Thee who art the hounds and the keepers of hounds (The Satarudriya - Daily Invocations, p.37).

There are two occasions mentioned in the *śaivāgamās* and *vaiṣnavāgamās* when the idol leaves the temple precincts in procession or *utsava*[1]; that was specifically mentioned in medieval inscriptions. These are *Avabhṛtha* and *Mṛgayotsava*, or ablution in a nearby pond or river. On the last day of a nine- or ten-day festival, people are expected to visit a *tīrtha* for a special festival bath; the *Mṛgayotsava* is scheduled for the day prior. Vijayanagara's *Vasantotsava* had

[1] The central event of the traditional Hindu temple celebration (the *utsava*) is a procession of the *utsava* idols. *Cala* (moveable) and *Achala* (immovable) *murthi*'s or idols of gods and goddesses are the two-fold nature of images consecrated in the temples. The moveable idols are made of metal. The immovable images or *mula-vigrahās* or *dhruvabērās*, are made of stone and permanently fixed in the central shrine or Garbhagriha. The *utsava murthi*, or movable idols, are carried out in processions for the public to receive *darśana*; they resemble *Kṣatriyās* during the procession. (mAnasa-taraMgiNI, 2013).

both of the essential components of the important annual celebration. Ahobala's account of the *Mṛgayotsava* mentions that it will be possible to see the God himself during the Great Hunt Festival - The *Mṛgayotsava* day is depicted as a time of year when the god personally visits his devotees and blesses them (Sudyka, 2019, p. 287).

Fig.25: Hunting scene of Tiger on yāli, Bhuvaraha Swami temple, Sri Mushnam

Fig. 26: Hunting scene in *Yāḷi,* Varadaraja Perumal temple - Kanchipuram

Fig. 27: Varadaraja Perumal temple, Kanchipuram

Mṛgayotsava or *Mrigayātra* or hunting festival had become a striking aspect of the *mahotsava* or grand celebration that appears to have started becoming popular by the medieval periods. This had a military component as well. The deity's idol is carried in this procession on a horse, along with his trident, *Pināka* bow and *Pāśupatāstra*. The sounds of conchs and the beating of the *Bheri* and *Paṭaha* drums by people who follow the procession create a rhythm, giving the impression that an army is preparing for an invasion, a cavalry raid or a hunt. An

account from the time of the Vijayanagara ruler Bukkadeva's reign indicates that this aspect was undoubtedly serious (Manasatarangini, 2013).

2. **Playing with colors during *Vasantotsava***

The main events of the *Vasantotsava* celebration included singing, dancing, consuming wine and people playing with coloured water. Common people and nobles interacted freely and joyously throughout this celebration. In several texts, splashing one another with coloured powder, water or mud is described as a way to relax social boundaries. The Spring Festival generally exudes an air of uninhibited pleasure, and the *Vasantotsava* is no exception. There's song, music and colour all across the city. This celebration is portrayed as having a lot of courtesan sporting and involvement. The throwing of coloured water is described as a distinct springtime activity termed '*Udakaksvedika*' in *Kāmasūtra* and *Śrínga krīda* in Jayamangala's commentary. Continuing the trend of increasingly detailed depictions of this practice, Somesvara in the 9th CE describes it as "*Secana krīda*," or dousing each other with fragrant and colorful water using syringes (*Śrīngas*) (Anderson, 1985, p.43, 46).

Around 1420/1421 CE, an Italian merchant, explorer, and writer named Niccolò de' Conti travelled to Vijayanagara, which he named "Bizenegalia" says the following about the celebrations: "There are also three other festival days, during which they sprinkle all passers-by, even the king and queen themselves, with saffron water, placed for that purpose by the way-side. This is received by all with much laughter (Saletore, 1934, p.396)."

Fig. 28, 29 &30: Sculptures of women celebrating the festivals with colours, Chennakesava temple, Sompalle

The *Vasantamanṭapa* of the Chennakesava temple, Sompalle depicts images of dancing, music and water spraying (Fig.28, 29 &30)[1]. Women celebrate the arrival of spring by dancing while holding sticks or water squirts. Women are observed wearing variously styled outfits and sporting buns in their hair. It's a beautiful picture to witness, with women actively filling water syringes with colored water from the pots to toss at each other while musicians play the drum and blowpipes.

3. Drinking Wine during *Vasantotsava*

Ratnāvaḷi, Sarasvatīkanṭābharaṇa and Bhāvaprakāśa, mention wine drinking in the context of the Spring Festival. *Ratnāvaḷi* gives the following description of the fertility ritual where wine drinking was essential (Anderson, 1985, p.75).

"The trees yonder appear to be drunk with the wine offered at the Spring Festival. The mouthful of wine sprinkled at the root of the Bakula trees seems now to be flavoured with thick dripping blossoms by the Bakula trees and the Campaka flowers bloom even while the moon-like faces of young damsels are flushed with wine; while the bees give back in harmony and thus seem to imitate the music of the anklets ringing loud as the delicate feet are raised against the Aśoka trees". The Sompalle temple has sculptures of men and women holding little jars of wine, suggesting that the sculptors reinterpreted these ancient ceremonies and traditions.

Fig. 31 & 32: Drinking wine during *Vasantotsava* celebration, Chennakesava temple, Sompalle

[1] A significant feature of the Narasimha svāmi temple in Ahobilam, Kurnool district of Andhrapradesh, has its sculpture depiction of the *Vasantotsava* celebrations. This temple is replete with depictions of people squirting each other with colored water (statement based on oral documentation from Dr. Manorama B N).

4. *Dohada* ceremony

Fig.33 **Fig.34** **Fig.35**

Śālabhañjikās **of Arunachaleswarar temple, Tiruvannamalai and Bhuvaraha Swami temple, Sri Mushnam**

In sculptural art, the Woman-and-Tree motif is considered auspicious. (Fig.33 to 38). In Vijayanagara art, *Latā-Sundari*, a theme similar to *Śālabhañjikā*, adorns the walls and pillars with images of maidens bending a tree limb (*Śala*, *Aśoka*, mango, etc.) Shorea Robusta, often known as *Śāla* is a tall tree. In general, a tree is also referred to by this word. *Bhañjikā* comes from the root '*bhanj'* meaning "break," or shatter." The word *Śālabhañjikā* means a portrait sculpture, a game or a rite (Desai, 2010, p.). These decorative motifs are carved on the inner

door jambs of the temples. These sculptures symbolize maidens connected to festivals like *Aśokabhañjikā* and *Śālabhañjikā*. In some places, the figure is seen standing atop *Makara* (Crocodile Or a mystic animal). The *Śālabhañjikā* symbolizes auspiciousness and sculptors employed this to represent the *Dohada* ceremony, which was carried out by a young girl to fertilize trees. The numerous *Śālabhañjikā* sculptures seen in Vijayanagara temples are symbolic of the *Dohada* fertility ceremony, which is also connected to the *Vasantotsava*. The ancient Sanskrit literature features this motif often. Poets like Kālidāsa, Rājaśekhara, Harṣa, Bilhaṇa, and Bāṇa describe *Dohada* ceremony.

Dohada translates to a pregnant woman's desires. In this context, *Dohada* refers to a tree's fondness for direct or indirect contact with a woman, such as touching (*sparśa*), embracing (*āliṅgana*) or kicking and stroking with the foot (*pādaghāta*). Thus, by a kind of ritual that is unique to each tree, women can trigger their flowering. A woman can, for example, make the *Tilaka* bud with just a glance, while the *Campaka*, *Nameru*, and *Karṇikāra* yield to her laughter, the *Nameru* to her voice and the *Kurabaka* to her embrace. While the *Bakula* blossoms when a young maiden sprinkles wine from her mouth, in the case of *Priyaṅgu*, the most desired thing is to touch the creeper; the *Mandāra* tree requires pleasant conversation, and the *Cūṭa* tree is content to simply feel human breath upon itself, sing, and dance. It's stated that certain women could make a tree bloom even when it wasn't in season (Jakubczak, 2017, p.81).

Fig.36 & 37: Jambukeswarar temple, Thiruvanaikaval

Fig.38: Varadaraja Perumal temple, Kanchipuram

5. Ascetics visit to Vijayanagar during *Vasantotsava*

The *Kāpālikās* – the *śaiva* ascetics observed a year that was full of festivals. They made it a rule to meet twice a year specifically to enjoy pleasures with full freedom. These were the *Vasantotsava* and the *Kaumudimahotsava* (Venetia, 2010). A record of *Tantrics* practicing seasonal orgies on *Vasantotsava* is also seen mentioned (Desai, 1975, p. 119). The sculpture below depicts the naked mendicants.

Fig.39: Ascetic, *Chennakesava* temple, Sompalle

Fig.40: Bhuvaraha Bhuvaraha Swami temple, Śrimūṣṇam

Srirangam temple: Sculptures of *Vasantotsava* at one place

It's noteworthy to mention that the pillars facing the exterior or the pillars forming the outer lining of the *manṭapa* of Srirangam temple have sculpture panels depicting all activities and rituals associated with *Vasantotsava* close to each other (fig 41 to 49).

Fig.41: Kolāṭa frieze with hunter's dance

Fig.42:Kolāṭa frieze with ensemble

Fig.43: playing with water squirt

Fig.44: Dance and music with ensemble

Fig 45: Panel of Kolāṭa

Fig.46: Hunting scene

Fig.47: Kāma and Rati

Fig.48: *Śālabhañjikā*

Fig.49: Carrying Wine or Colours + 3D projection of animals (Elephant and Bull)

Conclusion

Vasantotsava was a multifaceted and extravagant celebration that involved people from all social classes, and the sculptures at the Vijayanagara *Karṇāṭa* temples depict each of these elements. The history of Vijayanagara and a multitude of sculptures that depict various activities provide a solid comprehension of textual and visual techniques that were practiced during those times with a variety of themes, including dances, hunting scenes, royal scenes, martial themes and celebrations. Most of all the temples have similar motifs, which highlights the sculptor's perception while creating their works with a common realistic theme. These ritualistic celebrations played a significant role since it was a firm belief that thriving festivals would promote fertility, establish the existence of divine powers in the realm and strengthen the *Dharma*.

Bibliography

Acharya, S. (2017, January 31). वैदिकी कालगणना- १: आर्तवमाघमासात् वैदिको वत्सरारम्भः *Indiafacts*. https://www.indiafacts.org.in/vedic-system-of-chronology/

Amarasimha. (1937). *Amara Kosha*. Master Khelarilal and sons. http://archive.org/details/AmaraKosha

Anderson, L. (1985). *A Study of Indian Spring Festivals from Ancient and Medieval Sanskrit Texts*. McMaster University.

Anderson, L. (1988). The Indian Spring Festival (vasantotsava): One or Many ? *Annals of the Bhandarkar Oriental Research Institute*, *69*(1/4), 63–76.

Apte, V. S. (1890). *The practical Sanskrit-English dictionary*. Shiralkar,. http://archive.org/details/ldpd_7285627_000

Benton, C. (2005). *God of desire: Tales of Kamadeva in Sanskrit story literature*. Albany : State University of New York Press. http://archive.org/details/godofdesiretales0000bent

Desai, D. (1975). *Erotic Sculpture of India—A Socio—Cultural Study*. Tata McGraw - Hill Publishing Co. New Delhi.

Desai, D. D. (n.d.). *Shalabhanjika: Woman-and-Tree in Art and Literature*. Retrieved May 11, 2024, from https://www.academia.edu/34913031/Shalabhanjika_Woman_and_Tree_in_Art_and_Literature

Devanacharya. (1991). *Sangeeta Muktavali*. Sarasvati Mahal Library. https://dn790008.ca.archive.org/0/items/sangeetha-muktavali-of-devanacharya-series-no.-322-thanjavur-sarasvati-mahal-series/Sangeetha%20Muktavali%20Of%20Devanacharya%20Series%20No.%20322%20-%20Thanjavur%20Sarasvati%20Mahal%20Series.pdf

Ghosh, S. (2021). Ragamala paintings—Varied images from the Deccan. *International Journal of Engineering, Management and Humanities Vol. 2, Issue 2*. https://www.academia.edu/50147680/Ragamala_paintings_varied_images_from_the_Deccan

Guy, J. (2020). *'A ruler and his courtesans celebrating Vasantotsava: Courtly and divine love in a Nayaka kalamkari', The Metropolitan Museum of Art Symposia Sultans of the South Arts of India's Deccan Courts, 1323-1687 Edited by Navina Najat Haidar and Marika Sardar The Metropolitan Museum of Art, New York, 2011: 162-75.* (pp. 162-75.). https://www.researchgate.net/publication/342247611_%27A_ruler_and_his_courtesans_celebrating_Vasantotsava_courtly_and_divine_love_in_a_Nayaka_kalamkari%27_The_Metropolitan_Museum_of_Art_Symposia_Sultans_of_the_South_Arts_of_India%27s_Deccan_Courts_1323-1687#pf2

Jakubczak, M. (2017). *The woman-and-tree motif in the ancient and contemporary India* (Vol. 19). International Association for Aesthetics.

J.L.Shastri. (1950). *Siva Purana—English Translation—Part 1 of 4*. http://archive.org/details/SivaPuranaJ.L.ShastriPart1

Kale, M. R. (1967). *The Ritu Samhara Of Kalidasa* (2nd ed.). Motilal Banarasidas. http://archive.org/details/TheRituSamharaOfKalidasaM.R.Kale

mAnasa-taraMgiNI. (2013, January 20). Some notes on the shaiva temple celebrations and an excursus on the fishing, diving and hunting festivals of rudra. *mAnasa-taraMgiNI*. https://manasataramgini.wordpress.com/2013/01/20/some-notes-on-the-shaiva-temple-celebrations-and-an-excursus-on-the-fishing-diving-and-hunting-festivals-of-rudra/

Mani, V. (1975). *Puranic encyclopaedia: A comprehensive dictionary with special reference to the epic and Puranic literature*. Delhi : Motilal Banarsidass. http://archive.org/details/puranicencyclopa00maniuoft

Manorama, B. N. (2023). *Devālaya Shilpagaḷa Nāṭyāyamānate*. Noopura Bhramari.

Manorama, B. N. (2023). *The contemporaries of Ancient Uparupaka Tradition traced in Coastal Karnataka's Yakshagana and Post Midieval Literature.* In the journal on Uparupakas in Indian Performing Arts (1st ed., p. 228). New Delhi : Bharatiya Vidya Bhavan.

Mitra, V. L. (1999). *Yoga Vasistha Maharamayana* (Vol. 4). Low Price Publications. https://archive.org/details/yoga-vasishtha-maharamayana/mode/2up?view=theater

Nandikeshwara. (2016). *Bharatarnava*. The Thanjavur Maharaja Serfojis Sarasvati Mahal Library Publications. http://archive.org/details/bharatarnava-of-nandikeshwara-series-no.-74-thanjavur-sarasvati-mahal-series

Narayanan, S., & Mohan, S. (2016). *Gita Govinda of Jayadeva*. Ambika Aksharavali.

Raghavan, V. (1960). *Nrtta Ratnavali of Jayasenapati*. University Of Madras. http://archive.org/details/nrttaratnavaliofjayasenapatiraghavanv.universityofmadras

Raghavan, V. (1978). *Bhoja's Śṛngāra Prakāsa*. https://dn790000.ca.archive.org/0/items/bhojassringaraprakasaraghavanv.1978/Bhoja's%20Sringara%20Prakasa%20%20Raghavan%20V.%201978.pdf

Raghavan, V. (1993). *Sanskrit Drama—Its aesthetics and Production*.

Ramachandra, Tulasi. (n.d.). *ಪದಗತಿ – ಪಾದಗತಿ*. Kanaja website. Govt of Karnataka.

https://kanaja.karnataka.gov.in/%E0%B2%AA%E0%B2%A6%E0%B2%97%E0%B2%A4%E0%B2%BF-%E0%B2%AA%E0%B2%BE%E0%B2%A6%E0%B2%97%E0%B2%A4%E0%B2%BF/

S Krishnaswami Ayyangar. (1919). *Sources of Vijayanagar History*. University of Madras. https://www.tamildigitallibrary.in/admin/assets/book/TVA_BOK_0047958/TVA_BOK_0047958_Sources_of_Vijayanagar_history_1919.pdf

Saletore, B. a. (1934). *Social And Political Life In The Vijayanagara Empire Vol.ii*. http://archive.org/details/in.ernet.dli.2015.530019

Sathyanarayana, R. (1998). *Nartananirnaya* (Vol. 3). IGNCA & Motilal Banarsidass Publishers Pvt. Ltd.

Setty, S. B. (2023, January 17). *A forgotten link between Chinese Spring Festival and Vasanta Ritu*. https://satish.com.in/20230117/

Sharma, D. P. (1927). *Shrimadvalmiki Ramayana (kishkindha Kand—V)*. http://archive.org/details/in.ernet.dli.2015.345482

Shastri, K. panta. (2004). *योग वासिष्ठ:* (Vol. 4). Achyuta grantamala karyalaya. https://archive.org/details/ag-1_20210526_202105/AG-4_new/mode/2up?view=theater

Siddharta, S. (2009). *Saraswatikantabharanam of Raja Bhoja* (Vol. 3). IGNCA & Motilal Banarsidass Publishers Pvt. Ltd. https://dn790003.ca.archive.org/0/items/saraswatikanthibharanabhojaonpoeticsed.sundarisiddharthavol3ignca_557_Z/Saraswati%20Kanthibharana%20Bhoja%20on%20Poetics%20Ed.%20Sundari%20Siddhartha%20Vol%203%20IGNCA.pdf

Sriharsha. (1919). *Ratnavali*. S Ray & Co.,. https://dn790006.ca.archive.org/0/items/in.ernet.dli.2015.514013/2015.514013.Ratnavali.pdf

Sudyka, L. (2019). *Virūpākṣa-vasantotsava-campū of Ahobala or What Can Happen During the Hunting Festival*. *XXI*, 20.

The Satarudriya—Daily Invocations. (n.d.). Retrieved May 11, 2024, from https://www.swami-krishnananda.org/invoc/in_sata.html

Venetia, A. (2010, April 17). The Ashoka. *Sanskrit Literature*. https://venetiaansell.wordpress.com/2010/04/17/the-ashoka/

venkatvanaja. (2017). *22 ,23 ,24 ,25 SLOKAS OF AMARAKOSAM –*. https://vanajaweb.wordpress.com/2017/09/11/22-23-24-25-slokas-of-amarakosam/

Acknowledgment

I wish to express my profound gratitude to Dr. Manorama B N, Principal Investigator, Noopura Bhramari, IKS Center, for the insightful suggestions, editing and pointers in completing this paper. I will always be appreciative of her help in this respect. I sincerely thank Dr. Dwaritha Viswanatha and Dr. Shalini P Vittal for being ever supportive, Śrī Vishnuprasad N for his help during the field study and Śrī Vishwanath S, for providing some of the pictures for this paper. My heartfelt thanks to Smt. Nagaranjitha, for her invaluable assistance in editing and proofreading.

Author's Details

Smt. A R ROHINI

Smt. Rohini A R received her early training in Bharatanatyam under the illustrious Guru – Dr Hema Govindrajan and later continued her training in the disciplines of Shastra and Abhinaya under the eminent Guru Karnataka Kalashree, Shantala Awardee, Guru B Bhanumati and is currently guided by Guru Smt Sheela Chandrashekar. She graduated from Annamalai University in Chidambaram with a Master of Fine Arts in Bharatanatyam. She has been receiving training from Guru Vidushi H Geetha, as her senior disciple in Carnatic music and from Vid. N Narayana Swamy in nattuvangam. She has performed on numerous national and international stages and teaches Bharatanatyam to young students at her dance school 'Kala Surabhi'. She has served for a brief term as a guest faculty at Christ University's MA (Dance) department. She has completed her internship programs on Indian architecture, sculpture and dance literature – '*Nṛtya Śilpa Yātre* – 1' and '*Śāstra Ranga'*. Currently, she is pursuing her fellowship at Noopura Bhramari – IKS Centre on temple sculptures – '*Nṛtya Śilpa Yātre* – 2' under the guidance of highly esteemed scholar Dr. Manorama B N, Principal Investigator, Noopura Bhramari.

ಮಧ್ಯಯುಗೀನ ಕಾಲದ ದಶರೂಪಕಗಳ ಸಾಧ್ಯತೆಗಳಾಗಿ ಅಮಾತ್ಯ ವತ್ಸರಾಜನ ರೂಪಕಗಳು

- **ಡಾ. ಪ್ರತಿಭಾ ಸತ್ಯನಾರಾಯಣ,** ಬೆಂಗಳೂರು.

ಪ್ರವೇಶಿಕೆ

ಪ್ರಾಚೀನ ಕಾಲದ ರಂಗಭೂಮಿಯಲ್ಲಿ ಸಾಂಪ್ರದಾಯಿಕ ಕಥಾವಸ್ತುವುಳ್ಳ ದಶರೂಪಕಗಳು ಜನಪ್ರಿಯವಾಗಿದ್ದವು ಮತ್ತು ಕವಿಗಳು ಅವನ್ನು ಬರೆಯುತ್ತಿದ್ದರು. ಭರತನು ತನ್ನ ನಾಟ್ಯಶಾಸ್ತ್ರದ ಹದಿನೆಂಟನೇ ಅಧ್ಯಾಯವನ್ನು ದಶರೂಪಕಗಳಿಗೆಂದೇ ಮೀಸಲಿಟ್ಟಿದ್ದಾನೆ.

नाटकं सप्रकरणमङ्को व्यायोग एव च | भाणः समवकारश्च वीथी प्रहसनं डिमः

ईहामृगश्च विज्ञेया दशेमे नाट्यलक्षणे | (18–2,3)

ಹತ್ತು ರೂಪಕ ಪ್ರಕಾರಗಳ ಅಂದರೆ– ನಾಟಕ, ಪ್ರಕರಣ, ಅಂಕ, ವ್ಯಾಯೋಗ, ಭಾಣ, ಸಮವಕಾರ, ವೀಥಿ, ಪ್ರಹಸನ, ಡಿಮ, ಈಹಾಮೃಗ ಎಂದು ನಾಮೋಲ್ಲೇಖನವನ್ನು ಮಾಡಿ, ಮುಂದೆ ಸವಿಸ್ತಾರವಾಗಿ ಅವನ್ನು ವಿವರಿಸಿದ್ದಾನೆ.

ಈ ಹತ್ತು ರೂಪಕಗಳ ತುಲನಾತ್ಮಕ ಸಮೀಕ್ಷೆಯಿಂದ ನಾಟಕ ಮತ್ತು ಪ್ರಕರಣವನ್ನು ರೂಪಕಗಳಲ್ಲಿ ಎರಡು ಮುಖ್ಯ ಕವಲುಗಳೆಂದು ಪರಿಗಣಿಸಬಹುದು (ಉಪಾಧ್ಯಾಯ, 1980, 61). ನಾಟಕ, ಅಂಕ, ವ್ಯಾಯೋಗ, ಸಮವಕಾರ, ಡಿಮ ಮತ್ತು ಈಹಾಮೃಗದಲ್ಲಿ ದೈವ ಅಥವಾ ಉತ್ತಮ ಸಮಾಜದ ಪಾತ್ರಗಳಿವೆ. ಇಲ್ಲಿ ಧೀರನಾದ ನಾಯಕನಿದ್ದು, ರಾಜರು ಅಥವಾ ದೇವರ ಕಥೆಗಳನ್ನು ಕಾಣಬಹುದು. ಬಾಣ, ವೀಥಿ, ಪ್ರಹಸನಗಳು ಸಾಮಾನ್ಯಜನರ ಜೀವನವನ್ನು ಪ್ರತಿನಿಧಿಸುತ್ತವೆ. ಇವುಗಳಿಗೆ ಪ್ರಕರಣವೆಂಬ ರೂಪಕವೇ ಪ್ರೇರಕವಾಗಿವೆ. ಅಂದರೆ ನಾಟಕ ಮತ್ತು ಅದರ ಪ್ರೇರಿತ ರೂಪಕಗಳು ದೈವೀ ಪಾತ್ರಗಳನ್ನು ಮತ್ತು ಶೌರ್ಯಪ್ರಧಾನ ಘಟನೆಗಳನ್ನು ಇತಿವೃತ್ತದಲ್ಲಿ ಹೊಂದಿದ್ದರೆ, ಪ್ರಕರಣ ಮತ್ತು ಅದರ ಪ್ರೇರಿತ ರೂಪಕಗಳು ಸಮಾಜದ ಸಾಮಾನ್ಯರ ಜೀವನವನ್ನು ಇತಿವೃತ್ತವಾಗಿ ಹೊಂದಿರುತ್ತದೆ. ಪ್ರಕರಣದಲ್ಲಿ ಹತ್ತು ಅಂಕಗಳಿರಬಹುದು. ಇದರಿಂದ ಪ್ರೇರಿತವಾದ ರೂಪಕಪ್ರಕಾರಗಳಲ್ಲಿ ಹೆಚ್ಚೆಂದರೆ ಒಂದು ಅಂಕವು ಇರಬಹುದು. ಭಾಷೆಯಾಗಿ ಸಂಸ್ಕೃತ ಮತ್ತು ಪ್ರಾಕೃತ ಎಲ್ಲಾ

ರೂಪಕಪ್ರಕಾರಗಳಲ್ಲಿಯೂ ಕಂಡುಬರುತ್ತದೆ. ಹೀಗಿದ್ದೂ ದಶರೂಪಕಗಳಲ್ಲಿ ನಾಟಕಗಳೇ ಹೆಚ್ಚಾಗಿದ್ದು, ಉಳಿದ ಪ್ರಕಾರದ ರೂಪಕಗಳು ಕಡಿಮೆ ಸಂಖ್ಯೆಯಲ್ಲಿ ಬರೆಯಲ್ಪಟ್ಟಿವೆ. ನಾಲ್ಕು ರೀತಿಯ ನಾಯಕರು[1], ಅನೇಕ ನಾಯಿಕಾ ಪ್ರಕಾರಗಳು[2], ಐದು ಅರ್ಥಪ್ರಕೃತಿಗಳು[3], ಐದು ಅವಸ್ಥೆಗಳು[4] ಮತ್ತು ಐದು ಸಂಧಿಗಳನ್ನು[5] ಹೊಂದಿರುವ ಪರಿಪೂರ್ಣವಾದ ನಾಟಕ ಬರೆಯಲು ಸುಲಭ. ಪ್ರಕರಣ, ವ್ಯಾಯೋಗ, ಭಾಣ ಮತ್ತು ಪ್ರಹಸನಗಳೂ ಮನೋರಂಜನಭರಿತವಾಗಿದ್ದ ಕಾರಣ ಅವೂ ತೀರಾ ವಿರಳವಲ್ಲ. ಅವನ್ನು ಮುಂದೆ ಬಂದ ಅನೇಕ ಕವಿಗಳು ಅನುಸರಿಸಿ, ಬಗೆಬಗೆಯ ರೂಪಕಪ್ರಕಾರಗಳನ್ನು ಬರೆದಿದ್ದಾರೆ. ಇಂತಹ ನಾಟಕಕಾರರಲ್ಲಿ, ಅಮಾತ್ಯ ವತ್ಸರಾಜನು ಪ್ರಮುಖನು.

ಕವಿ ಮತ್ತು ಕೃತಿಗಳು

ಚಾಲುಕ್ಯರ ರಾಜನಾದ ಕಾಲಿಂಜರದ ಪರಮರ್ದಿದೇವನ (1163–1203) ಅಮಾತ್ಯನಾದ ವತ್ಸರಾಜನು ಸಂಸ್ಕೃತ ಸಾಹಿತ್ಯಪ್ರಪಂಚದಲ್ಲೇ ಆರು ವಿಭಿನ್ನ ರೀತಿಯ ರೂಪಕಗಳನ್ನು ಬರೆದು ಅದ್ವಿತೀಯನಾಗಿದ್ದಾನೆ. ಹಾಗೆಂದು ವತ್ಸರಾಜನು ನಾಟಕ ಮತ್ತು ಪ್ರಕರಣ ಎಂಬ ಎರಡು ವಿಭಾಗಗಳನ್ನೂ ಬರೆದಿಲ್ಲ. ಹಾಗಿದ್ದೂ ಭಾಸನನ್ನು ಬಿಟ್ಟರೆ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ರೂಪಕಗಳನ್ನು ಬರೆದಾತ ವತ್ಸರಾಜನೇ ಸರಿ. ಕೇವಲ ನಾಟ್ಯಶಾಸ್ತ್ರದ ಲಕ್ಷಣದಲ್ಲೇ ಕಾಣುವ ಸಮವಕಾರ ಎಂಬ ರೂಪಕಪ್ರಕಾರವನ್ನು ನಿದರ್ಶಿಸಲು ಉದಾಹರಣೆಯ ರೂಪದಲ್ಲಿ 'ಸಮುದ್ರಮಥನ' ಎಂಬ ರೂಪಕವನ್ನು ಬರೆದಿದ್ದಾನೆ ವತ್ಸರಾಜ. ಶಿವನು ತ್ರಿಪುರಗಳನ್ನು ಧ್ವಂಸ ಮಾಡುವ ಕಥೆ ಉಳ್ಳ ತ್ರಿಪುರದಾಹ ಎಂಬ ಡಿಮವು ಇದ್ದಿತೆಂದು ನಾಟ್ಯಶಾಸ್ತ್ರ ಮತ್ತು ದಶರೂಪಕದಲ್ಲಿ ಸೂಚಿಸಲಾಗಿದೆ. ಇದನ್ನು ಮೊದಲ ಬಾರಿ ವತ್ಸರಾಜನು ಬರೆದ ನಂತರ, ವೆಂಕಟವರ್ಯನು 'ಕೃಷ್ಣ ವಿಜಯ' ಮತ್ತು ರಾಮಕವಿಗಳು 'ಮನ್ಮಥೋನ್ಮಂಥನ' ಎಂಬ ಡಿಮಗಳನ್ನು ರಚಿಸಿದ್ದಾರೆ. ಹಾಗಾಗಿ ಮುಂದೆ ಬಂದ ಅನೇಕ ನಾಟಕಕಾರರಿಗೆ ವತ್ಸರಾಜನು ಅನುಕರಣೀಯನಾಗಿದ್ದಾನೆ.

---

1 ಧೀರೋದ್ದಾತ, ಧೀರೋದ್ಧತ, ಧೀರಲಲಿತ, ಧೀರಶಾಂತ – ಎಂಬುದಾಗಿ ನಾಯಕರು ಮುಖ್ಯವಾಗಿ ನಾಲ್ಕು ಪ್ರಕಾರದವರಾಗಿದ್ದು, ಶೃಂಗಾರದಲ್ಲಿ ಅವರನ್ನು ಪುನಃ ದಕ್ಷಿಣ, ಧೃಷ್ಟ, ಅನುಕೂಲ, ಶಠ ಎಂಬ ಭೇದಗಳನ್ನು ಮಾಡಿ, ಕೊನೆಗೆ ಅವರಲ್ಲಿ ಉತ್ತಮ, ಮಧ್ಯಮ, ಅಧಮ ಎಂಬ ಭಾವಗಳನ್ನು ಗಮನಿಸಿ, 48 ಪ್ರಕಾರಗಳನ್ನು ಮಾಡಬಹುದು. (ಸಾಹಿತ್ಯ ದರ್ಪಣ, 3, 38).

2 अथ नायिका त्रिभेदा स्वान्या साधारणा स्त्रीति ।
नायकसामान्यगुणैर्भवति यथासम्भवैर्युक्ता ॥ (सा. द. तृतीयपरिच्छेदः, ५६ श्लोक)
ನಾಯಕಿಯು ತ್ಯಾಗ ಇತ್ಯಾದಿ ಗುಣಗಳನ್ನು ನಾಯಕನಂತೆ ಹೊಂದಿರುತ್ತಾಳೆ. ಅವಳನ್ನು ಸ್ವಸ್ತ್ರೀ, ಅನ್ಯಸ್ತ್ರೀ ಮತ್ತು ಸಾಧಾರಣಸ್ತ್ರೀ ಎಂದು ವಿಭಾಗಿಸಬಹುದು. ಸ್ವೀಯಾ ಎಂದರೆ, ಪತಿವ್ರತೆಯಾದ ಹೆಂಡತಿ. ಆ ಪ್ರಕಾರದಲ್ಲಿಯೇ ಅವಳ ಶೃಂಗಾರ ಚೇಷ್ಟೆಗಳನ್ನು ಗಮನಿಸಿ ಮುಗ್ಧಾ, ಮಧ್ಯಾ, ಪ್ರಗಲ್ಭಾ ಎಂದು ಮೂರು ರೀತಿ ವಿಭಾಗವನ್ನು ಮಾಡಬಹುದು. ಮಧ್ಯಾ ಮತ್ತು ಧೀರಾ ವಿಭಾಗಗಳಲ್ಲಿ ಪುನಃ ಧೀರಾ, ಅಧೀರಾ, ಧೀರಾಧೀರಾ ಎಂದು ಆರು ವಿಭಾಗ. ಅವರಲ್ಲಿ, ಪತಿಯ ಮೇಲಿನ ಪ್ರೇಮವನ್ನು ಆಧರಿಸಿ ಜ್ಯೇಷ್ಠ, ಕನಿಷ್ಠ ಎಂಬ ಎರಡು ವಿಭಾಗಗಳು ಇವೆ. ಪರಕೀಯಸ್ತ್ರೀಯಲ್ಲಿ ಪರೋಢಾ, ಕನ್ಯಾ ಎಂಬ ಭಾಗಗಳು. ವೇಶ್ಯಾ ಎಂಬುದು ಮತ್ತೊಂದು ಪ್ರಕಾರ. ಇದಲ್ಲದೆ ನಾಯಿಕೆಯ ಅವಸ್ಥೆಗಳನ್ನು ಗಮನಿಸಿ, ಸ್ವಾಧೀನಭರ್ತೃಕಾ ಇತ್ಯಾದಿ ಎಂಟು ಭೇದಗಳುಂಟು. ಸ್ತ್ರೀಯರ ಸೌಂದರ್ಯವನ್ನು ಆಧರಿಸಿ ಉತ್ತಮಾ, ಮಧ್ಯಮಾ ಮತ್ತು ಅಧಮಾ ಎಂಬ ಭೇದಗಳು. ದಿವ್ಯಾದಿವ್ಯಾ ಎಂಬ ಭೇದಗಳೂ ಇವೆ. ಸಾಹಿತ್ಯದರ್ಪಣದ ಪ್ರಕಾರ ಇವೆಲ್ಲ ಭೇದಗಳನ್ನು ಪರಸ್ಪರ ಅನ್ವಯಿಸಿ ಸೇರಿಸುತ್ತಾ ಹೋದಂತೆ 380 ಪ್ರಕಾರದ ನಾಯಿಕೆಯರು ಆಗುತ್ತಾರೆ.

3 ಕಥಾವಿಸ್ತರೀಕರಣದ ದೃಷ್ಟಿಯಿಂದ ವಸ್ತುವಿನಲ್ಲಿ ಐದು ಅಂಶಗಳು ಕಂಡುಬರುತ್ತವೆ. ಅವು ಬೀಜ, ಬಿಂದು, ಪತಾಕ, ಪ್ರಕರೀ ಮತ್ತು ಕಾರ್ಯ.

4 ನಾಯಕನ ಕಾರ್ಯದೃಷ್ಟಿಯಿಂದ ವಸ್ತುವಿನಲ್ಲಿ ಐದು ಸ್ಥಿತಿಗಳಿರುತ್ತವೆ. ಆವು – ಆರಂಭ, ಯತ್ನ, ಪ್ರಾಪ್ತ್ಯಾಶಾ, ನಿಯತಾಪ್ತಿ ಮತ್ತು ಫಲಾಗಮ

5 ಐದು ಅರ್ಥಪ್ರಕೃತಿಗಳು ಮತ್ತು ಐದು ಅವಸ್ಥೆಗಳು ಕ್ರಮವಾಗಿ ಸೇರಿದರೆ, ವಸ್ತುವಿನಲ್ಲಿ ಮುಖ, ಪ್ರತಿಮುಖ, ಗರ್ಭ, ಅವಮರ್ಶ ಮತ್ತು ಉಪಸಂಹೃತಿ ಎಂದು ಐದು ಸಂಧಿಗಳಾಗುತ್ತವೆ.

ವತ್ಸರಾಜನು ಬರೆದಿರುವ ಆರು ರೂಪಕಗಳು ಹೀಗಿವೆ:

- ಕಿರಾತಾರ್ಜುನೀಯ ಎಂಬ ವ್ಯಾಯೋಗ
- ರುಕ್ಮಿಣೀಹರಣ ಎಂಬ ಈಹಾಮೃಗ
- ಸಮುದ್ರಮಥನ ಎಂಬ ಸಮವಕಾರ
- ತ್ರಿಪುರದಾಹ ಎಂಬ ಡಿಮ
- ಕರ್ಪೂರಚರಿತ ಎಂಬ ಭಾಣ
- ಹಾಸ್ಯಚೂಡಾಮಣಿ ಎಂಬ ಪ್ರಹಸನ

ಕವಿ ವತ್ಸರಾಜನ ಈ ಆರು ರೂಪಕಗಳನ್ನು ಮೊದಲ ಬಾರಿಗೆ ಸೆಂಟ್ರಲ್ ಲೈಬ್ರರಿ, ಬರೋಡ – ಇದರ ವತಿಯಿಂದ 1918ರಲ್ಲಿ ಪ್ರಕಾಶಿಸಲಾಗಿತ್ತು. ಶ್ರೀ ಚಿಮನ್ ಲಾಲ್. ಡಿ. ದಲಾಲ್ ಅವರು ಈ ರೂಪಕಷಟ್ಕವನ್ನು ಸಂಪಾದಿಸಿ, ಇದಕ್ಕೆ ಪರಿಚಯವನ್ನು ಬರೆದಿದ್ದಾರೆ. ಆದರೆ ಈವರೆಗೂ ಈ ರೂಪಕಗಳ ಬಗ್ಗೆ ಯಾವುದೇ ಸೋದಾಹರಣ ವಿಶ್ಲೇಷಣಾ ಲೇಖನ ಅಥವಾ ಪ್ರಯೋಗಗಳು ಕಂಡುಬಂದಿಲ್ಲ.

ಅಧ್ಯಯನದ ಆವಶ್ಯಕತೆ ಮತ್ತು ಉದ್ದೇಶ

ಈವರೆಗೂ ಅಷ್ಟಾಗಿ ಗಮನಕ್ಕೆ ಬಾರದಿರುವ ವತ್ಸರಾಜನ ರೂಪಕಗಳು, ಅವುಗಳ ಕಥಾವಸ್ತುವಿನಲ್ಲಿರುವ ವಿಶೇಷತೆ, ಕವಿಯು ಹೇಳಿರುವ ಸ್ವಾರಸ್ಯಮಯ ಅಂಶಗಳು, ಅದಕ್ಕಾಗಿ ಬಳಸಿರುವ ವಾಕ್ಯ-ಪದಗಳ ಚಮತ್ಕಾರ, ಅಲಂಕಾರಗಳ ಪ್ರಸ್ತುತಿ, ಹಿನ್ನೆಲೆ ಮುನ್ನೆಲೆಗಳ ಕುರಿತು ಗಮನ ಹರಿಸಿ ಈ ಅಧ್ಯಯನವು ನಡೆದಿದೆ. ನಾಟ್ಯಶಾಸ್ತ್ರೋತ್ತರ ಕಾಲದಲ್ಲಿ ರಚನೆಗೊಂಡ ಪ್ರಮುಖವೆನಿಸುವ ಈ ರೂಪಕಗಳನ್ನು ನಾಟ್ಯಶಾಸ್ತ್ರ ಲಕ್ಷಣದ ದೃಷ್ಟಿಯಿಂದ ನೋಡಿದಾಗ ಭರತಲಕ್ಷಣ ಸಾರ್ವಕಾಲಿಕತೆಯು ಹೆಚ್ಚಾಗಿ ಮನದಟ್ಟಾಗುತ್ತದೆ ಎಂಬ ಕಾರಣ ಮತ್ತು ಅದರಿಂದ ಪ್ರಾಚೀನ ರಂಗಭೂಮಿಯ ವೈಶಿಷ್ಟ್ಯ, ಕಥಾವಸ್ತುಗಳಲ್ಲಾಗುತ್ತಿದ್ದ ಬದಲಾವಣೆ, ಪ್ರಯೋಗದ ಸಾಧ್ಯತೆ-ಬಾಧ್ಯತೆ, ಅವುಗಳ ಸಾಲಿನಲ್ಲಿ ಅಮಾತ್ಯ ವತ್ಸರಾಜನ ರೂಪಕಗಳ ಸ್ಥಾನಮಾನಗಳನ್ನು ಅರಿಯುವ ಉದ್ದೇಶವೂ ಇದೆ. ಇದರಿಂದಾಗಿ ವತ್ಸರಾಜನ ಅನಂತರದಲ್ಲಿ ರಚನೆಗೊಂಡ ಇನ್ನಷ್ಟು ರೂಪಕಗಳ ಅಧ್ಯಯನಕ್ಕೆ ಹಾದಿ ದೊರೆತು ಪುಷ್ಟಿ ಸಿಗುತ್ತದೆ ಎಂಬ ಕಾರಣದಿಂದ ಈ ಬರೆವಣಿಗೆಯನ್ನು ಕೈಗೊಳ್ಳಲಾಗಿದೆ.

ಅಧ್ಯಯನಮಿತಿ ಮತ್ತು ವಿಧಾನ

ವತ್ಸರಾಜನ 'ಮಾಧವೀ' ಎಂಬ ವೀಥಿಯು ಅಪ್ರಕಾಶಿತವಾಗಿದ್ದು, ಇವನ 'ಶರ್ಮಿಷ್ಠಯಯಾತಿ'ಯೆಂಬ ಹೆಸರಿನ ರೂಪಕವು ಅಂಕ ಎಂಬ ಪ್ರಕಾರದ್ದಾಗಿದೆ. ಆದರೆ ಅವೆರಡೂ ಉಪಲಬ್ಧವಾಗಿಲ್ಲ. ಉಳಿದಂತೆ ಲಭ್ಯವಿರುವ ವತ್ಸರಾಜನ ಆರು ರೂಪಕಗಳನ್ನು ಮಾತ್ರ ಇಲ್ಲಿ ವಿಶ್ಲೇಷಿಸಲಾಗಿದೆ. ಕಥಾವಸ್ತುವಿನಲ್ಲಿರುವ ವಿಶೇಷ ಅಂಶಗಳನ್ನು ಅಭಿನವಭಾರತೀ ಸಹಿತವಾಗಿ ನಾಟ್ಯಶಾಸ್ತ್ರದ ದೃಷ್ಟಿಯಿಂದ ಪರಿಶೀಲಿಸಲಾಗಿದೆ. ಅಮಾತ್ಯ ವತ್ಸರಾಜನ ಕಾಲದ ಅನಂತರಕ್ಕೆ ರಂಗಭೂಮಿಯ ವಿಚಾರಗಳನ್ನು ದಾಖಲಿಸಿದ ಲಕ್ಷಣಗ್ರಂಥಗಳಾದ- ಕಲಿಂಗ ದೇಶಕ್ಕೆ ಸೇರಿದ ವಿಶ್ವನಾಥಕವಿಯ ಸಾಹಿತ್ಯದರ್ಪಣವನ್ನೂ (1384 ಸಾಮಾನ್ಯ ಶಕ), 12ನೇ ಶತಮಾನದಲ್ಲಿ ಗುಜರಾತ್-ಮಹಾರಾಷ್ಟ್ರದ ಪ್ರದೇಶಗಳ ಆಸುಪಾಸಿನಲ್ಲಿ ಜೀವಿಸಿದ್ದರೆನ್ನಲಾದ ಜೈನಮುನಿಗಳಾದ ರಾಮಚಂದ್ರ ಮತ್ತು ಗುಣಚಂದ್ರರು ರಚಿಸಿರುವ ಮತ್ತೊಂದು ಅಲಂಕಾರಶಾಸ್ತ್ರದ ಗ್ರಂಥ ನಾಟ್ಯದರ್ಪಣವನ್ನೂ ಕೆಲವೊಂದು ಲಕ್ಷಣವಿಚಾರಗಳಿಗೆ ಅಧ್ಯಯನ ನಡೆಸಿ ಉಲ್ಲೇಖಿಸಲಾಗಿದೆ. ಆವರೆಗಿನ ರಂಗಭೂಮಿಯ ಪ್ರಯೋಗಗಳಿಗೆ ಈ ಗ್ರಂಥಗಳು

ಸಾಕ್ಷಿಭೂತವಾಗಿರಬಹುದೆಂದು ಪರಿಗಣಿಸಿ, ನಾಟ್ಯಶಾಸ್ತ್ರದ ರೂಪಕ ಲಕ್ಷಣಗಳಿಂದ ವ್ಯತ್ಯಸ್ತವಾದ ಉಲ್ಲೇಖಗಳನ್ನಷ್ಟೇ ಗುರುತಿಸಿ ಇಲ್ಲಿ ನೀಡಲಾಗಿದೆ. ರೂಪಕಗಳ ಕಥಾನಕವನ್ನು ಗಮನಿಸಿದಂತೆ ಪೂರಕವಾಗಿ ಕೆಲವು ಪುರಾಣ, ಕಾವ್ಯ, ಭಾಗವತ, ಮಹಾಭಾರತ ಮೊದಲಾದ ಪ್ರಾಚೀನ ಇತಿಹಾಸ ಪ್ರಥಮ ಆಕರ ಸಾಹಿತ್ಯಗಳ ಉಲ್ಲೇಖವೂ ಸೇರಿದೆ. ಇವುಗಳೊಂದಿಗೆ ಕೆಲವು ಸಂಶೋಧನ ಕೃತಿಗಳನ್ನೂ ದ್ವಿತೀಯ ಆಕರಗ್ರಂಥಗಳಾಗಿ ಪರಿಗಣಿಸಿ ಅಧ್ಯಯನ ನಡೆಸಲಾಗಿದ್ದು; ಆ ಪೈಕಿ ಆಚಾರ್ಯ ಬಲದೇವ ಉಪಾಧ್ಯಾಯರ ಸಂಸ್ಕೃತ ಸಾಹಿತ್ಯದ ಇತಿಹಾಸವು ಪ್ರಮುಖವಾದದ್ದು.

ಕಿರಾತಾರ್ಜುನೀಯ – ವ್ಯಾಯೋಗ

ಲಕ್ಷಣವಿಚಾರ:

व्यायोगस्तु विधिज्ञैः कार्यः प्रख्यातनायकशरीरः |

अल्पस्त्रीजनयुक्तस्त्वेकाहकृतास्तथा चैव || (ನಾಟ್ಯಶಾಸ್ತ್ರ 18, 90)

ಪ್ರಖ್ಯಾತ ನಾಯಕನನ್ನು ಹಾಗೂ ಕೆಲವೇ ಸ್ತ್ರೀಪಾತ್ರಗಳನ್ನು ಹೊಂದಿದ, ಒಂದೇ ದಿನದಲ್ಲಿ ನಡೆಯುವ ಘಟನೆಗಳನ್ನು ಒಳಗೊಂಡ, ಅನೇಕ ಪುರುಷಪಾತ್ರಗಳಿರುವ ಪುರುಷಪ್ರಧಾನವಾದ ರೂಪಕವಿದು. ದಿವ್ಯನಾಯಕನಿಲ್ಲದ, ಒಂದೇ ಅಂಕವಿರುವ, ದೀಪ್ತರಸವಿರುವ[1] ರೂಪಕದ ಪ್ರಕಾರ ವ್ಯಾಯೋಗ. ಯುದ್ಧ, ನಿಯುದ್ಧ, ವ್ಯಾಯಾಮ, ಶೌರ್ಯ, ವಿದ್ಯಾ ಇದರಲ್ಲಿ ಕಾಣುವುದು. ಸಾಮಾನ್ಯವಾಗಿ ಕಂಡುಬರುವ ಪ್ರಾಚೀನ ವ್ಯಾಯೋಗಗಳ ಹೆಸರುಗಳು– ಧನಂಜಯವಿಜಯ, ನರಕಾಸುರ ವಿಜಯ, ನಿರ್ಭಯ ಭೀಮವಿಜಯ, ಪ್ರಚಂಡಭೈರವ, ರಾಮವಿಜಯ. ಭಾಸನ 'ಮಧ್ಯಮವ್ಯಾಯೋಗ'ವನ್ನು ಬಿಟ್ಟರೆ, ತದನಂತರ ವತ್ಸರಾಜನ ಕಿರಾತಾರ್ಜುನೀಯವನ್ನು ಮತ್ತು ಅವನ ಕಾಲದವನೇ ಆದ ಪ್ರಹ್ಲಾದದೇವನ 'ಪಾರ್ಥಪರಾಕ್ರಮ' ಎಂಬ ವ್ಯಾಯೋಗವನ್ನು ಪ್ರಮುಖವಾಗಿ ನೋಡಬಹುದು.

ಇದರೊಂದಿಗೆ "ಗರ್ಭಾವಮರ್ಷ ವಿವರ್ಜಿತಃ ಅಸ್ತ್ರೀ ನಿಮಿತ್ತ ಸಂಗ್ರಾಮೋ ವ್ಯಾಯೋಗೋ' ನಾಯಿಕಾಮ್ ವಿನಾ" ಎಂದು ನಾಟ್ಯದರ್ಪಣದಲ್ಲಿ ವಿಶಿಷ್ಟ ಲಕ್ಷಣಗಳನ್ನು ವ್ಯಾಯೋಗಕ್ಕೆ ಕೊಟ್ಟಿದ್ದಾರೆ. ಇಲ್ಲಿ ಹೆಣ್ಣಿನ ಸಲುವಾಗಿ ಯುದ್ಧವಾಗುವುದಿಲ್ಲ, ಮತ್ತು ಇಲ್ಲಿ ನಾಯಿಕೆಯೇ ಇರುವುದಿಲ್ಲ ಎಂಬ ವಿಷಯ ಈ ಲಕ್ಷಣವಿಚಾರವಾಗಿ ಗಮನಾರ್ಹ. ಕಾಲಕಾಲಕ್ಕೆ ತಕ್ಕಂತೆ ಶಾಸ್ತ್ರದ ಪರಿಭಾಷೆಗಳು, ಲಕ್ಷಣಗಳು ಪರಿವರ್ತಿತವಾಗಿರುವುದನ್ನು ಗಮನಿಸಬಹುದು.

दीप्तरसो हि कालक्षेप असहिशष्णुतया विनिपातानां शङ्कया च प्रारम्भप्रयत्नानान्तरं फलागम एव यतते| ನಾಯಕನು ವೀರನಾದ ಕಾರಣ ಅವನು ಕಾರ್ಯದ ಆರಂಭವಾದ ಮೇಲೆ ತಕ್ಷಣ ಫಲವನ್ನು ಬಯಸುತ್ತಾನೆ ಮತ್ತು ಮಧ್ಯದಲ್ಲಿ ವಿಘ್ನಗಳು ಬರಬಹುದೆಂಬ ತವಕದಿಂದ ಬೇಗ ಫಲವನ್ನು ಬಯಸುತ್ತಾನೆ. ಆದ್ದರಿಂದಲೇ ಇಲ್ಲಿ ಮುಖ, ಪ್ರತಿಮುಖ ಸಂಧಿ[2]ಯಾದೊಡನೆಯೇ ನಿರ್ವಹಣ ಸಂಧಿಯಿಂದ ಈ ರೂಪಕವು ಕೊನೆಗೊಳ್ಳುತ್ತದೆ. ದಶರೂಪಕಗಳ ಪೈಕಿ ಕೇವಲ ನಾಟಕ,

---

[1] ದೀಪ್ತಗುಣವೆಂದರೆ ಓಜೋಗುಣದಿಂದ ಕೂಡಿದ ಸಾಹಿತ್ಯ. ವೀರ, ರೌದ್ರ ರಸಗಳು ಪ್ರಾಧಾನ್ಯ.

[2] ಸಂಧಿಗಳ ವಿವರಣೆ:

- ಮುಖಸಂಧಿಯಲ್ಲಿ ಕಥಾಭಾಗ ಇನ್ನೂ ಬೀಜ ರೂಪವಾಗಿರುತ್ತದೆ. ನಾಯಕನು ತನ್ನ ಕಾರ್ಯವನ್ನು ಆರಂಭಿಸುತ್ತಾನೆ.
- ಪ್ರತಿಮುಖ ಸಂಧಿಯಲ್ಲಿ ಕಥೆಯು ಇನ್ನೂ ಸ್ವಲ್ಪ ಬೆಳೆಯುತ್ತದೆ. ನಾಯಕನು ಕಾರ್ಯಸಾಧನೆಗಾಗಿ ಯತ್ನ ಮಾಡುತ್ತಾನೆ.
- ಗರ್ಭಸಂಧಿಯಲ್ಲಿ ಕಾರ್ಯ ಫಲವು ಕೈಗೂಡುವ ಸೂಚನೆ ತೋರುತ್ತದೆ.
- ಅವಮರ್ಶ ಸಂಧಿಯಲ್ಲಿ ಕಥೆಯು ಇನ್ನೂ ಮುಂದುವರೆದು, ನಾಯಕನು ಕೋಪ, ವ್ಯಸನ, ವಿಲೋಭನಾದಿಗಳಿಂದ ಸ್ವಲ್ಪ ತಡೆದು ನಿಲ್ಲುತ್ತಾನೆ. ಇಲ್ಲಿ ಫಲಪ್ರಾಪ್ತಿ ನಿಶ್ಚಿತವಾಗುತ್ತದೆ.

ಪ್ರಕರಣ, ನಾಟಿಕಾ ಮತ್ತು ಪ್ರಕರಣಿಕಾ – ಈ ನಾಲ್ಕು ಪ್ರಕಾರಗಳಲ್ಲಿಯೇ ಐದು ಅವಸ್ಥೆಗಳು ಮತ್ತು ಐದು ಸಂಧಿಗಳು ಇರುತ್ತವೆ ಎಂದು ನಾಟ್ಯದರ್ಪಣದಲ್ಲಿ ತಿಳಿಸಲಾಗಿದೆ.

ಕಥಾನಕ: ಕಥೆಯ ಆದಿಯಲ್ಲಿ, ಅರ್ಜುನನು ಸಿದ್ಧಾದೇಶನೆಂಬ ಸೇವಕನೊಂದಿಗೆ ಮಾತಾಡುತ್ತಾ, ಕೌರವರ ನಾಶವಾಗುವ ತನಕ ತನಗೆ ಎಲ್ಲಿಯ ಸೌಖ್ಯ ಎಂಬುದಾಗಿ ಹೇಳುತ್ತಾನೆ. ಈ ಶ್ಲೋಕವು ಶಬ್ದಾಲಂಕಾರ, ಅರ್ಥಾಲಂಕಾರಗಳೆರಡನ್ನೂ ಹೊಂದಿದೆ. 'ವಾಸುದೇವನ ಮಿತ್ರನಾದ ನೀನು ಏತಕ್ಕೆ ತಪಸ್ಸು ಮಾಡಬೇಕು' ಎಂಬ ಪ್ರಶ್ನೆಗೆ, 'ಗುರುಜನರ ನಿರ್ದೇಶದಂತೆ ನಾನು ತಪಸ್ಸು ಮಾಡಲು ಬಂದಿದ್ದೇನೆ. ಇಲ್ಲವಾದರೆ ಭುಜಬಲದ ಪರಾಕ್ರಮವಿರುವ ನನಗೆ ತಪಸ್ಸಿನ ಮಂತ್ರಸಿದ್ಧಿಯು ಲಜ್ಜಾಸ್ಪದ' ಎಂದು ಅಹಂಕಾರದಿಂದ ಅರ್ಜುನನು ನುಡಿಯುತ್ತಾನೆ. ಅಷ್ಟರಲ್ಲಿ ಘೃತಾಚಿ, ತಿಲೋತ್ತಮಾ, ರಂಭಾ ಮುಂತಾದ ಅಪ್ಸರೆಯರು ಅಲ್ಲಿಗೆ ತಮ್ಮ ದಿವ್ಯವಾದ ವಿಮಾನಗಳಲ್ಲಿ ಬರುತ್ತಾರೆ. ಈ ಭಾಗದಲ್ಲಿ ಕೈಶಿಕೀವೃತ್ತಿಗೆ ಆಸ್ಪದವಿದೆ. ಸವ್ಯಸಾಚಿಯಾದ ಅರ್ಜುನನು ಆ ವಿಮಾನಗಳನ್ನೆಲ್ಲಾ ತನ್ನ ಬಾಣಗಳಿಂದ ದೂರ ಸರಿಸುತ್ತಾನೆ.

ಅಷ್ಟು ಹೊತ್ತಿಗೆ ಸರಿಯಾಗಿ ಶಾರ್ದೂಲ ಮತ್ತು ಕಂಠೀರವ ಎಂಬ ಇಬ್ಬರು ಬೇಡರು ಕಾವಲು ಕಾಯುತ್ತಿರಲು ಮುನಿವೇಷದಲ್ಲಿ ಇಂದ್ರನು ಪ್ರವೇಶಿಸುತ್ತಾನೆ. ಅರ್ಜುನನು ತಿಳಿಯದೆಯೇ ಅವನನ್ನು "ತಾತ" (ತಂದೆ) ಎಂದು ಸಂಬೋಧಿಸುತ್ತಾನೆ. ಇಂದ್ರನು ಮಗನ ಮನೋರಥವನ್ನರಿತು, ತನ್ನ ನಿಜಸ್ವರೂಪವನ್ನು ತೋರಿ ಮಹೇಶ್ವರನನ್ನು ಆರಾಧಿಸಲು ಸೂಚಿಸುತ್ತಾನೆ. ಅಷ್ಟರಲ್ಲಿ ಒಂದು ಕಾಡುಹಂದಿಯು ಎಲ್ಲೆಡೆ ಉಪದ್ರವವನ್ನು ಮಾಡಲು, ಅರ್ಜುನನು ಈಗ ಬಾಣಪ್ರಯೋಗವನ್ನು ಮಾಡಲಾರದೆ ಇನ್ನೊಬ್ಬ ಕಿರಾತನಿಂದ ತಾನು ರಕ್ಷಿಸಲ್ಪಡಬೇಕೇನೋ ಎಂದು ನೊಂದುಕೊಳ್ಳುತ್ತಾನೆ.

ಆ ವರಾಹವು ಮೊದಲೇ ಬೇಡರ ಒಡೆಯನಿಂದ ಕೊಲ್ಲಲ್ಪಟ್ಟಿದ್ದರೂ ಅರ್ಜುನನು ತಾನೇ ಕೊಂದೆನೆಂದು ನಟಿಸುತ್ತಾನೆ. ಕಂಠೀರವ ಮತ್ತು ಗೋಮಾಯುಕ ಎಂಬ ಕಿರಾತರ ಸಂಭಾಷಣೆಯಿಂದ ಅವರ ಒಡೆಯನೇ ವರಾಹವನ್ನು ಕೊಂದಿರುವನೆಂದು ತಿಳಿದು ಬರುತ್ತದೆ. ಅರ್ಜುನನು ತಾನೇ ಕೊಂದೆನೆಂದು ಹೇಳಿ, ಆ ಕಿರಾತರ ಒಡೆಯನು ಕೇವಲ ಕಾಡಿನ ಎಮ್ಮೆಗಳ ಮಾಂಸವನ್ನು ತಿನ್ನುವವನು ಎಂದು ಅವಹೇಳನ ಮಾಡುತ್ತಾನೆ. ಇದನ್ನು ಕೇಳಿದ ಕಿರಾತನ ವೇಷದಲ್ಲಿರುವ ಹರನು ಬಂದು ಎಲ್ಲರಿಗೂ ಕೇಳುವಂತೆ ಪ್ರಾಕೃತದಲ್ಲೂ, ಸ್ವಗತದಲ್ಲಿ (ತನ್ನಷ್ಟಕ್ಕೆ ತಾನೇ) ಸಂಸ್ಕೃತದಲ್ಲೂ ಮಾತಾಡುತ್ತಾನೆ. ಇದರಿಂದ ಪಾತ್ರದ ಪ್ರೌಢಿಮೆಯ ಮೇಲೆ ಭಾಷೆಯು ಆಧಾರಿತವಾಗಿದೆ ಎಂದು ತಿಳಿಯುತ್ತದೆ.

ಕಿರಾತನು ಅರ್ಜುನನನ್ನು ಮನಸಾರೆ ಕೊಂಡಾಡಿದರೆ, ಅರ್ಜುನನೂ ಕಿರಾತನನ್ನು "ಇವನು ಸಾಕ್ಷಾತ್ ಶಿವನೇ" ಎಂದು ಭಾವಿಸುತ್ತಾನೆ. ಅರ್ಜುನನು ಏಕಾಕಿಯಾಗಿ ಕಿರಾತರ ಸೈನ್ಯವನ್ನು ಎದುರಿಸಲು ಸಿದ್ಧನಾದಾಗ, ಶಿವನೇ ಅವರನ್ನೆಲ್ಲಾ ದೂರ ಸರಿಸುತ್ತಾನೆ. ಹರನ ವೇಷದ ಕಿರಾತನು ಅರ್ಜುನನನ್ನು ಯುದ್ಧಕ್ಕೆ ಕರೆದಾಗ, ಅವನು, "ನನಗೆ ಈಗ ಮುನಿಸಹಜವಾದ ಕರುಣರಸವು ದ್ವಿಗುಣಿತವಾಗಿ ಆವಿರ್ಭಾವವಾಗುತ್ತಿದೆ" ಎನ್ನುತ್ತಾನೆ. "ಸರ್ವತ: ಕನಿಷ್ಠ: ಮಿಥ್ಯಾ ಗರಿಷ್ಠ:" ಎಂದು ಕಿರಾತನನ್ನು ಬೈಯುತ್ತಾನೆ. (ಈ 'ಮಿಥ್ಯಾ ಗರಿಷ್ಠ' ಎಂಬ ನಾಣ್ಣುಡಿಯು ಕರ್ಪೂರಚರಿತ ಎಂಬ ವತ್ಸರಾಜ ಬರೆದ ಭಾಣ ರೂಪಕದಲ್ಲೂ ಕಾಣುತ್ತದೆ). ಆದರೂ ಅವನ ಮೇಲೆ ಬಾಣಪ್ರಯೋಗವನ್ನು ಮಾಡುವುದಿಲ್ಲ.

ಆಗ ಹರನು, ಇವನ ಪೌರುಷವನ್ನು ಒರೆಗಲ್ಲಲ್ಲಿ ಅಳೆಯದೆ ದಿವ್ಯಾಸ್ತ್ರವನ್ನು ಕೊಡಬಾರದೆಂದು ನಿರ್ಣಯಿಸಿ ದುರ್ಯೋಧನನ ವೇಷದಿಂದ ಬರುತ್ತಾನೆ. ವಾಗ್ವಾದದಲ್ಲಿ, "ನೀನು ದುರ್ಯೋಧನನೇ ಅಲ್ಲ "ಎಂದು ಅರ್ಜುನನು ಹೇಳುತ್ತಾನೆ. ಒಂದು

- ಉಪಸಂಹೃತಿ ಅಥವಾ ನಿರ್ವಹಣ ಸಂಧಿಯಲ್ಲಿ ಹಿಂದೆ ನಾನಾಮುಖವಾಗಿದ್ದ ಕಾರ್ಯವೆಲ್ಲವೂ ಏಕಮುಖವಾಗಿ ಮುಗಿಯುತ್ತದೆ ಮತ್ತು ನಾಯಕನು ಉದ್ದಿಷ್ಟ ಕಾರ್ಯಫಲವನ್ನು ಪಡೆಯುತ್ತಾನೆ.

ರೀತಿಯಿಂದ ಅದೂ ಸರಿಯೆಂದು ಒಪ್ಪಿದ ದುರ್ಯೋಧನ ವೇಷಧಾರಿ ಶಿವನು ಬಿಲ್ವಿದ್ಯೆಯ ಪ್ರದರ್ಶನಕ್ಕೆ ಸಜ್ಜಾಗುತ್ತಾನೆ. ಇದನ್ನು ಕಂಡ ಅರ್ಜುನನು "ಗದಾಯುದ್ಧದಲ್ಲೇ ನೀನು ನಿಪುಣನಾದರೂ, ಈಗ ಬಾಣವನ್ನು ಹೂಡು" ಎಂದು ಪಂಥಾಹ್ವಾನವನ್ನು ನೀಡುತ್ತಾನೆ. ಕಂಠೀರವ, ಶಾರ್ದೂಲ ಮತ್ತು ಸಿದ್ಧಾದೇಶರ ಸಂಭಾಷಣೆಯಿಂದ ಯುದ್ಧದ ಪ್ರಕ್ರಿಯೆಯು ತಿಳಿಯುತ್ತದೆ. ಎಲ್ಲಾ ದೇವತೆಗಳು ಮತ್ತು ಮುನಿಗಳು ಕದನವನ್ನು ನೋಡುತ್ತಿರುತ್ತಾರೆ. ಇಲ್ಲಿ ಯುದ್ಧವನ್ನು ತೋರಿಸದೆ, ಯುದ್ಧದ ಕಥೆಯನ್ನು ಹೇಳಲಾಗಿರುವುದನ್ನು ಗಮನಿಸಬಹುದು.

ಕೊನೆಗೆ ಶಿವನ ತಲೆಯಿಂದ ರಕ್ತವು ಚಿಮ್ಮಲು, ಅರ್ಜುನನಿಗೆ ಶಿವನ ನಿಜಸ್ವರೂಪವು ತಿಳಿಯುತ್ತದೆ. ಶಿವನ ಕಾಲುಗಳಿಗೆರಗಿದ ಅರ್ಜುನನಿಗೆ ಒಂದು ಜ್ಯೋತಿಸ್ವರೂಪವಾಗಿ ದಿವ್ಯಾಸ್ತ್ರವು ಶಂಕರನಿಂದ ದಕ್ಕುತ್ತದೆ. "ಗುರುವಾದ ನಿನಗೆ ಏನು ಗುರುದಕ್ಷಿಣೆಯನ್ನು ನೀಡಲಿ" ಎಂದು ಅರ್ಜುನನು ಕೇಳಲು, "ಈ ಪ್ರಪಂಚವೆಂಬ ನನ್ನ ಶರೀರವನ್ನು ಹಗುರವನ್ನಾಗಿ ಮಾಡು" (ಪಾಪಿಗಳ ಸಂಹಾರದಿಂದ ಭೂಭಾರವನ್ನು ಕಡಿಮೆ ಮಾಡು) ಎಂಬುದಾಗಿ ಶಿವನು ಕೇಳುತ್ತಾನೆ. ಭರತವಾಕ್ಯದಲ್ಲಿ, "ಮಳೆ ಸುರಿಯಲಿ, ರಾಜರು ಆಳಲಿ, ಕವಿಗಳು ಅಮೃತಧಾರೆಯನ್ನು ಸುರಿಸಲಿ, ಮೋಹ ಎಂಬ ಅಂಧಕಾರವು ಧ್ವಂಸವಾಗಿ ಶಿವಾದ್ವೈತವು ಸಿದ್ಧಿಸಲಿ" ಎಂದು ಆಶಂಸಿಸಿ ರೂಪಕಕ್ಕೆ ತೆರೆ ಎಳೆಯಲಾಗುತ್ತದೆ.

ವಿಶ್ಲೇಷಣೆ: ಮಹಾಭಾರತದಲ್ಲಿ ಅರ್ಜುನನೊಂದಿಗೆ ಸೆಣಸಾಡಲು ಕಿರಾತನ ವೇಷದಲ್ಲಿ ಶಿವನು ಬಂದ ಕಥೆ ಇದ್ದರೂ, ಭಾರವಿಯು ತನ್ನ ಕಿರಾತಾರ್ಜುನೀಯಂ ಎಂಬ ಮಹಾಕಾವ್ಯದಿಂದ ಈ ಘಟನೆಯನ್ನು ಜನಪ್ರಿಯಗೊಳಿಸಿದ್ದಾನೆ. ಅಂತೆಯೇ ಉಪಜೀವ್ಯವಾದ ಮಹಾಭಾರತ ಮತ್ತು ಏಳನೇ ಶತಮಾನದ ಕಿರಾತಾರ್ಜುನೀಯ ಮಹಾಕಾವ್ಯದಿಂದ ಪ್ರಭಾವಿತನಾದ ಅಮಾತ್ಯ ವತ್ಸರಾಜನು ವೀರರಸಕ್ಕೆಂದೇ ಹೇಳಿಮಾಡಿಸಿರುವ ಈ ಘಟನೆಯನ್ನು ವ್ಯಾಯೋಗಕ್ಕೆ ತೆಗೆದುಕೊಂಡಿದ್ದಾನೆ. ಇಲ್ಲಿಯೂ ಪುರುಷ ಪಾತ್ರಗಳೇ ಪ್ರಧಾನ. ಒಂದೇ ದಿನದಲ್ಲಿ ನಡೆಯುವ ಘಟನೆ ಮತ್ತು ಪ್ರಖ್ಯಾತ ಪಾಂಡವನಾದ ಅರ್ಜುನನೇ ನಾಯಕ.

ಭಾರವಿಯು ಶ್ರೀ ಎಂಬ ಲಕ್ಷ್ಮಿಯ ನಾಮದಿಂದ ಮಂಗಲವನ್ನು ಮಾಡಿದರೆ, ಅಮಾತ್ಯ ವತ್ಸರಾಜನು ತನ್ನ ನಾಂದಿ ಪದ್ಯದಲ್ಲಿ ಅಂಬಿಕೆಯನ್ನು ಸ್ಮರಿಸಿ ಶಿವನ ಅರ್ಧಾಂಗಿಯ ಸೂಚನೆಯನ್ನು ಕೊಟ್ಟಿದ್ದಾನೆ. ಸ್ಥಾಪಕನು ಸೂತ್ರಧಾರನನ್ನು ಮಾಹೇಶ್ವರ, ಎಂದರೆ ಮಹೇಶ್ವರನಿಗೆ ಸಂಬಂಧಪಟ್ಟವನು, ಅವನ ಭಕ್ತ ಎಂದು ಸಂಬೋಧಿಸುತ್ತಾನೆ. ಇಲ್ಲಿಯೂ ಮುದ್ರಾಲಂಕಾರದ ಪ್ರಯೋಗವಿದೆ. ವ್ಯಾಯೋಗದ ಮುಖ್ಯ ರಸ ವೀರ ಎಂಬ ಸೂಚನೆಯಿದೆ.

ಇನ್ನೊಂದು ನಾಂದಿ ಪದ್ಯದಲ್ಲಿ 'ಶಿವನ ಶೂಲಾಯುಧವು ನಮ್ಮನ್ನು ರಕ್ಷಿಸಲಿ' ಎಂಬುದಾಗಿ ಆಯುಧದ ಸೂಚನೆಯಿದೆ. ಕಾಲಂಜರಾಧಿಪತಿಯಾದ ತ್ರೈಲೋಕ್ಯವರ್ಮದೇವನ ಆದೇಶದ ಮೇಲೆ, ವತ್ಸರಾಜನ ಈ ರೂಪಕದ ಪ್ರಸ್ತುತಿಯಾಗಿದೆ ಎಂದು ತಿಳಿಸುತ್ತಾ, ಪುನಃ ವೀರರಸದ ಶ್ಲೋಕಗಳನ್ನು ಹೇಳುತ್ತಾನೆ. ರಾಜನ, ಕವಿಯ ಮತ್ತು ನಟರ ಸ್ತುತಿ, ರೂಪಕಾಲಂಕಾರದಲ್ಲಿ ಅರ್ಜುನನೆಂಬ ಚಂದ್ರನು ಇಂದ್ರನ ದಿಕ್ಕಾದ ಪೂರ್ವಕ್ಕೆ ಹೋಗಿ, ಅಲ್ಲಿ ಗಿರೀಶನ ಶಿರಸ್ಸನ್ನು ಏರುವನು ಎಂಬ ಕಥೆಯ ಪರಿಚಯವನ್ನು ಮಾಡುತ್ತಾ, ಪ್ರಸ್ತಾವನೆಯನ್ನು ಮುಗಿಸುತ್ತಾನೆ. ಸೂತ್ರಧಾರ ಮತ್ತು ಸ್ಥಾಪಕರ ಮಾತು ಮುಗಿದ ನಂತರ ಪಾತ್ರಗಳ ಪ್ರವೇಶವಾಗಿದೆ. ಆದ್ದರಿಂದ ಕಥೋದ್ಘಾತ ಎಂಬ ಪ್ರಸ್ತಾವನಾ ಪ್ರಕಾರ ಇಲ್ಲಿದೆ.

ಸ್ತ್ರೀಪಾತ್ರವಿಲ್ಲದೆ ವೀರೋತ್ಸಾಹದಿಂದ ಕೂಡಿರುವ, ದುರ್ಯೋಧನನ ಪಾತ್ರವನ್ನೂ ತಂದು ಕಥೆಯಲ್ಲಿ ಒಂದು ಹೊಸ ಆಯಾಮವನ್ನು ತಂದ ವತ್ಸರಾಜನ ಕಲ್ಪನೆಯು ಪ್ರಶಂಸನೀಯ.

ರುಕ್ಮಿಣೀಹರಣ – ಈಹಾಮೃಗ

ಲಕ್ಷಣವಿಚಾರ: ದಿವ್ಯಪುರುಷರನ್ನು ಆಶ್ರಯಿಸಿ, ದಿವ್ಯಸ್ತ್ರೀಯ ಕಾರಣದಿಂದ ಯುದ್ಧವಾಗಿ ಕಥೆಯು ಮುಂದುವರೆಯುವ ರೂಪಕದ ಪ್ರಕಾರ ಈಹಾಮೃಗ. ಇದರಲ್ಲಿ ಉದ್ಧತ ಪುರುಷರಿದ್ದು, ಸ್ತ್ರೀನಿಮಿತ್ತವಾಗಿರುವ ಪರಸ್ಪರ ರೋಷವಿರುತ್ತದೆ. ವ್ಯಾಯೋಗದಂತೆ ವೀರರಸವುಳ್ಳ, ಬೊಬ್ಬೆಹೊಡೆಯುವುದು, ಚೀತ್ಕಾರ ಮಾಡುವುದು – ಇವೇ ಮೊದಲಾದವನ್ನು ಒಳಗೊಂಡಿರುವ ಈ ರೂಪಕದ ಪ್ರಕಾರವು ವೀಥಿ, ಅಂಕ ಮುಂತಾದವುಗಳ ಅಂಶಗಳನ್ನೂ ಹೊಂದಿದೆ ಎಂದು ಭರತನು ಲಕ್ಷಣವನ್ನು ಕೊಟ್ಟಿದ್ದಾನೆ. ಅಭಿನವಗುಪ್ತನು,"ईहा चेष्टा मृगस्येव स्त्रीमात्रार्थं यत्र स: ईहामृग:", ಎಂದರೆ, ಸ್ತ್ರೀನಿಮಿತ್ತವಾಗಿ ಎಲ್ಲಿ ಮೃಗದಂತೆ ಇಚ್ಛೆ ಮತ್ತು ಕ್ರಿಯೆ ಇರುತ್ತದೆಯೋ ಅದು ಈಹಾಮೃಗ ಎಂದು ಸ್ಪಷ್ಟಪಡಿಸಿದ್ದಾನೆ (18, 78–83) ಹನ್ನೆರಡನೇ ಶತಮಾನದ ನಾಟ್ಯದರ್ಪಣದಲ್ಲಿ, ಈಹಾಮೃಗದ ಲಕ್ಷಣವನ್ನು ಹೀಗೆ ಪರಿಷ್ಕರಿಸಲಾಗಿದೆ.

ईहामृग: सवीथ्यङ्को दिव्येशो दृप्तनायकः | एकाङ्कश्चतुरङ्को वा ख्याताख्यातेति वृत्तवान् ||2,25

दिव्यस्त्रीहेतुसंग्रामे निर्विश्वासः सविड्वर:| स्त्र्यपहार-भेद- दण्डः प्रायो द्वादशनायकः

ಇದರಲ್ಲಿ ವೀಥಿ, ಅಂಕಗಳೆಂಬ ರೂಪಕಗಳ ಅಂಶವನ್ನು ಹೊಂದಿ, ದಿವ್ಯನಾದ ಅಥವಾ ದೃಪ್ತನಾದ ನಾಯಕನನ್ನೊಳಗೊಂಡ, ಒಂದೇ ಅಂಕವಿದ್ದರೆ ಒಂದು ದಿನದ ಕ್ರಿಯಾಕಲಾಪವನ್ನು, ನಾಲ್ಕು ಅಂಕಗಳಿದ್ದರೆ ನಾಲ್ಕು ದಿನದ ಕಾರ್ಯಗಳನ್ನು ತಿಳಿಸಿ, ಪ್ರಸಿದ್ಧ ಅಥವಾ ಅಪ್ರಸಿದ್ಧ ಇತಿವೃತ್ತವನ್ನು ಪಡೆದು, ಅಂಕಗಳ ಮಧ್ಯೆ ಸಮಾನ ಕಥೆಯ ಸಂಬಂಧವಿದೆಯೆಂಬ ಲಕ್ಷಣಗಳನ್ನು ಗಮನಿಸಬಹುದು. ವ್ಯಾಯೋಗದಲ್ಲಿ ತಿಳಿಸಿರುವಂತೆ, ಇಲ್ಲೂ ನಾಯಕನು ತಕ್ಷಣ ಫಲವನ್ನು ಅಪೇಕ್ಷಿಸುವ ಕಾರಣ, ಗರ್ಭ ಮತ್ತು ವಿಮರ್ಶ ಸಂಧಿಗಳು ಇರುವುದಿಲ್ಲ. ಈ ಲಕ್ಷಣದಲ್ಲಿ ಅಂಕಗಳ ಸಂಖ್ಯೆಯ ಸ್ಪಷ್ಟತೆ ಕಾಣುವುದು. ನಾಲ್ಕು ದಿನಗಳ ಕ್ರಿಯಾಕಲಾಪಗಳಿರುವ ಕಾರಣ, ರುಕ್ಮಿಣಿಹರಣದಲ್ಲಿ ನಾಲ್ಕು ಅಂಕಗಳಿವೆ.

ಈ ರೂಪಕ ಪ್ರಕಾರದಲ್ಲಿ ನಾಯಕನು ನಾಯಿಕೆಯನ್ನು ಅಪಹರಣ ಮಾಡಿದ ಕಾರಣ, ಕಲಹ ಉಂಟಾಗುತ್ತದೆ. ಸಾಮ, ದಾನ ಅಥವಾ ದಂಡದಿಂದ (ಬಂಧನ) ನಾಯಕನು ಪ್ರತಿನಾಯಕನೊಂದಿಗೆ ಜಗಳವನ್ನು ಪರಿಹರಿಸುತ್ತಾನೆ. ಇಲ್ಲಿ 12 ರೀತಿಯ ನಾಯಕರಿರಬಹುದು. ಆವೇಗ, ಪರಸ್ಪರ ಅವಿಶ್ವಾಸ ಮತ್ತು ಸ್ಪರ್ಧೆ ಇದ್ದರೆ ಅದನ್ನು ವಿಡ್ವರ ಎನ್ನುತ್ತಾರೆ. ಪ್ರತಿನಾಯಕನನ್ನು ಸಾಕ್ಷಾತ್ತಾಗಿ ಇಲ್ಲವೇ ಪರೋಕ್ಷವಾಗಿ ನೇಪಥ್ಯದಲ್ಲೂ ವಧಿಸಬಾರದು ಎಂಬ ನಿಯಮದಂತೆ ಅವನು ಪಲಾಯನ ಮಾಡಬಹುದು. ಪ್ರತಿನಾಯಕನಿಗೆ ದಂಡ ವಿಧಿಸಲಾಗುವ ಸನ್ನಿವೇಶಗಳೂ ಇರಬಹುದು.

ಕಥಾನಕ : ಮೊದಲನೆಯ ಭಾಗದಲ್ಲಿ ಶಿಶುಪಾಲನು ರುಕ್ಮಿಣಿಯನ್ನು ವರಿಸಲು ಸಿದ್ಧನಾಗಿದ್ದಾನೆ ಎಂದು ತಿಳಿದು, ಕೋಪಗೊಂಡ ಅಕ್ರೂರನು ಬಲರಾಮ–ಕೃಷ್ಣರನ್ನು ಭೇಟಿ ಮಾಡುತ್ತಾನೆ. ಅವರು 'ಒಬ್ಬರಲ್ಲಿ ಮತ್ತೊಬ್ಬರು ಪ್ರತಿಬಿಂಬಿತರಾದಂತೆ, ಭವನದ ಎರಡು ಸ್ಥಂಭಗಳಂತೆ ಇದ್ದು, ಈಗ ಕುಪಿತರಾದಂತೆ ಕಾಣುತ್ತಿದ್ದಾರೆ' ಎಂದುಕೊಳ್ಳುತ್ತಾ ಅವರ ಬಳಿ ತೆರಳುತ್ತಾನೆ. ಅಕ್ರೂರನು ಅವರ ವೈಮನಸ್ಯಕ್ಕೆ ಕಾರಣವನ್ನು ಕೇಳಲು, ಕೃಷ್ಣನು ಏನೂ ಹೇಳುವುದಿಲ್ಲ. ರುಕ್ಮಿಣಿಯ ಅಣ್ಣನಾದ ರುಕ್ಮಿಯು ಕೃಷ್ಣನನ್ನು ದ್ವೇಷಿಸುತ್ತಿದ್ದನು. ಪ್ರತೀಹಾರಿಯ "ದೇವ ಕೃಷ್ಣ" ಎಂದು ಸಂಬೋಧಿಸಿದರೆ, ರುಕ್ಮಿಯು "ಕೃಷ್ಣನು ಸ್ವರ್ಗಕ್ಕೆ ಹೋದಾಗ ಅವನನ್ನು ದೇವ ಕೃಷ್ಣ ಎಂದು ಕರೆಯಿರಿ" ಎಂದು ಹೇಳಿದ್ದಾನೆ. ಕೃಷ್ಣನೂ ಕೂಡ ಕೋಪದಿಂದ ತನ್ನ ಖಡ್ಗದಿಂದ ರುಕ್ಮಿಗೆ ಪರಮಾನಂದವನ್ನು ಅಂದರೆ ಮೋಕ್ಷ ಅಥವಾ ಸಾವು ಕೊಡುತ್ತೇನೆಂದು ಪ್ರತ್ಯುತ್ತರ ನೀಡುತ್ತಾನೆ. ಹೀಗೆ ಇಬ್ಬರೂ ಯುದ್ಧಕ್ಕೆ ಸಿದ್ಧರಾಗುತ್ತಾರೆ ಎಂಬುದು ತಿಳಿಯುತ್ತದೆ. ಅಲ್ಲಿನ ಕೆಲವು ವಾಕ್ಯಗಳು ಸುಂದರವಾಗಿವೆ – "ವಂದಿನ: ತು ವಂದ್ಯಾ: ಏವ "... ಕಿಮ್ ನ ಏತೇ ವದಂತಿ" (ವಂದಿಗಳು ನಮಸ್ಕರಿಸಲ್ಪಡುವವರೇ..ಏಕೆಂದರೆ ಅವರು ಏನು ತಾನೇ ಹೇಳುವುದಿಲ್ಲ?) ಮತ್ತು

"ಮುಖವಿಕಾರ ಏವ ವ್ಯಾಕರೋತಿ ಪ್ರಯೋಜನಾಸಿದ್ಧಿಮ್" (ಮುಖದ ವಿಕಾರವೇ ಕಾರ್ಯದ ಅಸಫಲತೆಯನ್ನು ತಿಳಿಸುತ್ತದೆ) ಮುಂತಾದ ವಾಕ್ಯಗಳಲ್ಲಿ ಕ್ರಮವಾಗಿ ಶಬ್ದ ಮತ್ತು ಅರ್ಥಾಲಂಕಾರಗಳು, ವಾಚೋಯುಕ್ತಿಗಳು ಕಾಣುತ್ತವೆ.

ಪ್ರಿಯಂವದನೆಂಬ ಸೇವಕನು, ರುಕ್ಮಿಣಿಗೆ ಶಿಶುಪಾಲನು ಬರೆದಿರುವ ಪತ್ರವನ್ನು ತೋರಿಸುತ್ತಾನೆ. ಅದರಲ್ಲಿ ಹೀಗಿರುತ್ತದೆ– "ಕೃಷ್ಣನು ರುಕ್ಮಿಣಿಯನ್ನು ಬಯಸುವುದು, ಶಿಶುವು ಚಂದ್ರನನ್ನು ಬಯಸಿದಂತೆ" ಎಂದು. ಎರಡನೇ ಪತ್ರದಲ್ಲಿ ಕೃಷ್ಣನನ್ನು ಅವಹೇಳನ ಮಾಡಿ, (17 ಶ್ಲೋಕ) ಅವನನ್ನು ಕೊಲ್ಲುವುದಾಗಿ ತಿಳಿಸುತ್ತಾನೆ. ಇದಕ್ಕೆ ಉತ್ತರವಾಗಿ ಬಲರಾಮನು ಶಿಶುಪಾಲನನ್ನು ಕೊಲ್ಲಲು ಪ್ರತಿಜ್ಞೆ ಮಾಡಿ, ಪ್ರತೀಹಾರಿಗೆ ರಣದುಂದುಭಿಯನ್ನು ಮೊಳಗಿಸಲು ಹೇಳುತ್ತಾನೆ. ಆಗ ಕೃಷ್ಣನು ತಾನೇ ಯುದ್ಧಕ್ಕೆ ಹೋಗುವೆನೆಂದು ಹೇಳಲು, ಬಲರಾಮನು, शस्त्रास्त्रविद्यासु न बालिशोसि तथापि मे केशव! बालिशोसि | त्वां रुक्मिणीपाणिनिपीडनाय वरं न योद्धारमहं करिष्ये ||26|| - "ಕೃಷ್ಣ! ಯದ್ಯಪಿ ನೀನು ಶಸ್ತ್ರಾಸ್ತ್ರಗಳನ್ನು ಬಲ್ಲವನಾಗಿದ್ದರೂ ನನಗೆ ಬಾಲಕನೇ. ನೀನು ರುಕ್ಮಿಣಿಗೆ ವರನಾಗಿ ಹೋಗಬೇಕು. ನಾನು ರಣರಂಗಕ್ಕೆ ಹೋಗುವೆನು" ಎನ್ನುತ್ತಾನೆ. ಇಲ್ಲಿ ಅವರಿಬ್ಬರ ಅನ್ಯೋನ್ಯ ಸ್ನೇಹಭಾವ ಚಿತ್ರಿಸಲ್ಪಟ್ಟಿದೆ, (26 ಶ್ಲೋಕ). "ಹಲಾಂ ಹಾಲಾಹಲಮಿವ ಹಲೀ ಮಾನ್ಯತಾಮ್ ತಾವದೇಶಃ" " ಶಿಶುಪಾಲನನ್ನು ಸಾಯಿಸದಿದ್ದರೆ ಬಲರಾಮನು ತಾನು ಹೊತ್ತ ನೇಗಿಲನ್ನು ಹಾಲಾಹಲ ವಿಷದಂತೆ ಕಾಣುತ್ತಾನೆ" ಎಂದು ಅಬ್ಬರಿಸುತ್ತಾನೆ. ಎಲ್ಲೆಡೆಯೂ ಅನುಪ್ರಾಸ ಅಲಂಕಾರ ಮತ್ತು ಶ್ಲೇಷಾಲಂಕಾರ ಕಂಗೊಳಿಸುತ್ತವೆ. ಎರಡನೇ ಅಂಕದಲ್ಲಿ ವಿಷ್ಕಂಭಕವಿದೆ.[1] ಸಂಸ್ಕೃತ ಮತ್ತು ಪ್ರಾಕೃತದಲ್ಲಿ ಮಾತಾಡುವ ಪ್ರಿಯಂವದ ಮತ್ತು ದೀಪಕರು ಬಲರಾಮನ ಭವನಕ್ಕೆ ತೆರಳುತ್ತಾರೆ. ಮಂತ್ರಾಲೋಚನೆಯಲ್ಲಿ ಕೌಂಡಿನಪುರಕ್ಕೆ ಹೋಗುವುದೋ ಅಥವಾ ಚೇದಿರಾಜ್ಯಕ್ಕೆ ಹೋಗುವುದೋ ಎಂದು ಯೋಚಿಸಿದಾಗ, ಬಲರಾಮನು ಕೌಂಡಿನಪುರಕ್ಕೆ ಹೋಗಬೇಕೆಂದು ಹೇಳುತ್ತಾನೆ. ಎಂಟನೇ ಶ್ಲೋಕದಲ್ಲಿ ವೀರ ಮತ್ತು ಶೌರ್ಯರಸದ ಪ್ರಶಂಸೆ ಇದೆ. ಬಲರಾಮನು 'ಇನ್ನೂ ವಿಚಾರ ಮಾಡುತ್ತಿದ್ದೀರಾ' ಎಂದು ಗದರಿದಾಗ, ಉದ್ಧವನು ಮುಹೂರ್ತವನ್ನು ತಿಳಿಸುವ ಪಂಡಿತರನ್ನು ಕರೆಸಲು ಹೇಳುತ್ತಾನೆ. ಆದರೆ ಬಲರಾಮನು ತನ್ನ ಗದೆಯಿಂದ 'ಆಕಾಶದಲ್ಲಿರುವ ಎಲ್ಲಾ ಗ್ರಹನಕ್ಷತ್ರಗಳೂ ತನ್ನ ಮಾತಿನಂತೆ ನಡೆಯುವಂತೆ ಮಾಡುತ್ತೇನೆ' ಎನ್ನುತ್ತಾನೆ. ಉದ್ಧವನು, ಬಲರಾಮನ ಅವತಾರವು ಧರ್ಮ ಸ್ಥಾಪನೆಗಾದ್ದರಿಂದ ಲೋಕದ ರೀತಿಯಲ್ಲಿಯೇ ನಡೆಯಬೇಕೆಂದು ಪ್ರಾರ್ಥಿಸುತ್ತಾನೆ. ಅದಕ್ಕೆ ಬಲರಾಮನು, 'ಯುದ್ಧಕ್ಕೆ ಜ್ಯೋತಿಷ್ಕರ ಸಹಾಯ ಬೇಡ, ಆದರೆ ಮದುವೆಗೆ ಬೇಕು. ಅದಕ್ಕೆ ಕೃಷ್ಣನು ಇಲ್ಲೇ ಇರಲಿ. ತಾನು ಯುದ್ಧಕ್ಕೆ ಹೋಗುವೆ' ಎಂದು ಹೇಳುತ್ತಾನೆ. ಅಷ್ಟರಲ್ಲಿ ವಸುದೇವ ದೇವಕಿಯರೂ ಬಂದು ಆಶೀರ್ವದಿಸುತ್ತಾರೆ.[2] 'ವೈಶಾಖಮಾಸದಲ್ಲೇ ಕೃಷ್ಣನ ಮದುವೆಯಾಗುತ್ತದೆ' ಎಂದು ನಿಶ್ಚಯಿಸಿ, 'ಇಲ್ಲಿ ದಿಬ್ಬಣವು ಕೋಮಲವಾಗಿರದೆ ಶೌರ್ಯದಿಂದ ಕೂಡಿರುತ್ತದೆ' ಎಂಬ ಬಲರಾಮನ ಹೇಳಿಕೆಯೊಂದಿಗೆ ಅಂಕವು ಮುಗಿಯುವುದು.

ಮೂರನೆಯ ಅಂಕದಲ್ಲಿ ಸುಬುದ್ದಿಕೆ ಎಂಬ ಸಂನ್ಯಾಸಿನಿ ಮತ್ತು ಸುವತ್ಸಲಾ ಎಂಬ ರುಕ್ಮಿಣಿಯ ಸಖಿಯ ಮಧ್ಯೆ ಸಂವಾದ ನಡೆಯುತ್ತದೆ. ಅದರಲ್ಲಿ ಹೇಗಾದರೂ ಮಾಡಿ ರುಕ್ಮಿಣಿಯ ಮದುವೆಯು ಕೃಷ್ಣನ ಜೊತೆ ಮಾಡಿಸಬೇಕೆಂದು ಸುಬುದ್ಧಿಯು ನಿಶ್ಚಯಿಸಿರುವ ಮಾತು ತಿಳಿಯುತ್ತದೆ. ಇಲ್ಲಿ ರುಕ್ಮಿಣಿಯ ಪಾತ್ರ ಪ್ರಾಕೃತದಲ್ಲಿ ಮಾತಾಡುತ್ತಾಳೆ. ಸುಬುದ್ಧಿಯು ಸಂಸ್ಕೃತದಲ್ಲಿ ಮಾತಾಡುತ್ತಾಳೆ. ರುಕ್ಮಿಣಿಯು ಕೃಷ್ಣನ ಚಿತ್ರಪಟವನ್ನು ಹಿಡಿದು, न खलु भाग्यानि दत्तानि भवन्ति... ಎಂದು ಮರುಗುತ್ತಾಳೆ (ಎಲ್ಲರಿಗೂ ಒಳ್ಳೆಯ ಭಾಗ್ಯವು ಸಿಗುವುದಿಲ್ಲ). वनहरिण्या हास्यते मृगाङ्कहरिणे अनुरागः (ಚಂದ್ರನಲ್ಲಿರುವ ಜಿಂಕೆಯ ಮೇಲೆ

---

[1] ವಿಷ್ಕಂಭ– ನಡೆದು ಹೋದ ಕಥಾಂಶವನ್ನು ಸಂಕ್ಷಿಪವಾಗಿ ಸೂಚಿಸುವ ತಂತ್ರ. ಇಲ್ಲಿ ಮಧ್ಯಮ ಮತ್ತು ನೀಚ ಪಾತ್ರಗಳೆರಡೂ ಸೇರಿ ಬರುವುದರಿಂದ ಮಿಶ್ರ ವಿಷ್ಕಂಭಕ ಎಂದು ಕರೆಯಲ್ಪಡುತ್ತದೆ.

[2] ಪ್ರಾಸಂಗಿಕ ವೃತ್ತಾಂತವಾದ ಪ್ರಕರೀ ಎಂಬ ಅರ್ಥಪ್ರಕೃತಿಯ ಭೇದ.

ವನದ ಜಿಂಕೆಯ ಪ್ರೀತಿಯು ನಗಲ್ಪಡುತ್ತದೆ) ಎಂದು ಪೇಚಾಡುತ್ತಾಳೆ. ಆಗ ಸುಬುದ್ಧಿಯು ನಿಜವಾಗಿಯೂ ಆ ಹರಿಯು ಅವಳ ಪಾಣಿಗ್ರಹಣವನ್ನು ಮಾಡುತ್ತಾನೆಂದು ಆಶ್ವಾಸಿಸುತ್ತಾಳೆ, ಅವಳ ಸಮಾಧಾನಕ್ಕೆಂದು ಕೃಷ್ಣನ ಚಿತ್ರದೊಂದಿಗೆ ಪಾಣಿಗ್ರಹಣವನ್ನು ಮಾಡಿಸುತ್ತಾಳೆ.

ಇತ್ತಕಡೆ, ಅರಮನೆಯ ಹೊರಗೆ ಎಲ್ಲಾ ರಾಜರುಗಳು ಮಾರ್ಗದಲ್ಲಿ ಹೋಗುತ್ತಿರಲು ಉಪ್ಪರಿಗೆಯ ಕಿಟಕಿಯ ಜಾಲದಿಂದ ಅವರನ್ನು ಈ ಮಹಿಳೆಯರು ನೋಡುತ್ತಾರೆ. ಇಲ್ಲಿ, ಆ ರಾಜಸ್ಥಾನ ರಾಜ್ಯದ ಪರಂಪರೆಯನ್ನು ನೋಡಬಹುದು. ಹೀಗೆ ಆ ಹೆಂಗಳೆಯರು ನೋಡುತ್ತಿರಲು, ಶ್ರೀಕೃಷ್ಣನ ಕೈಯಲ್ಲಿ ರುಕ್ಮಿಣಿಯ ಚಿತ್ರವು ಬೀಳುತ್ತದೆ. ತಲೆಯನ್ನು ಎತ್ತಿ ನೋಡಲು ರುಕ್ಮಿಣಿಯು ಕಾಣುತ್ತಾಳೆ.

ಮುಂದಿನ ದೃಶ್ಯದಲ್ಲಿ, ರಾಜರುಗಳ ಮಧ್ಯೆ ಕಂಗೊಳಿಸುವ ಕೃಷ್ಣನನ್ನು ನೋಡಿ, ರಾಜ ಭೀಷ್ಮಕನು ಕೃಷ್ಣನನ್ನು ಮೆಚ್ಚಿ इदं रूपमिदं शौर्यं इदं शीलमिदं वयः | रुक्मीकृष्णमनुक्रामान् रुक्मिणीं हतवान् हठात् ||- "ಎಂಥ ರೂಪ ಎಂಥ ಶೌರ್ಯ, ಎಂಥ ಶೀಲ, ಎಂಥ ವಯಸ್ಸು.. ರುಕ್ಮಿಯು ಕೃಷ್ಣನನ್ನು ಅವಲಕ್ಷಿಸಿ, ರುಕ್ಮಿಣಿಯನ್ನು ತನ್ನ ಹಠದಿಂದ ಸಾಯಿಸಿದ್ದಾನೆ " ಎಂದು ಮರುಗುತ್ತಾನೆ. (2,10)

ರಾಜರುಗಳನ್ನು ಹೊಗಳುವ ವಂದಿಯು "श्याममनोहरणक्षमः," ಎಂದು ವರ್ಣಿಸಿದರೆ, ಸುಬುದ್ಧಿಯು ಅಲ್ಲಿ "ಮನ" ಎಂಬ ಪದವು ಬೇಡವೆಂದು ಅಂದರೆ ಕೇವಲ ಶ್ಯಾಮಾಹರಣವಾಗಲಿ (ರುಕ್ಮಿಣಿಯನ್ನು ಕೊಂಡೊಯ್ಯುವಂತಾಗಲಿ) ಎಂದು ಆಶಿಸುತ್ತಾಳೆ. निर्वहणोन्मुखस्तव मनोरथः (ನಿನ್ನ ಮನೋರಥವು ಸಫಲವಾಗುತ್ತದೆ) ಎಂದು ಹಾರೈಸುತ್ತಾಳೆ. ಅದೇ ಸಮಯಕ್ಕೆ ಸುಬುದ್ಧಿಗೆ ರುಕ್ಮಿಣಿಯನ್ನು ಇಂದ್ರಾಣಿಯ ದೇವಾಲಯಕ್ಕೆ ಕರೆದೊಯ್ಯಲು ಸೂಚನೆ ಬರುತ್ತದೆ. ರುಕ್ಮಿಣಿಯು ಅದನ್ನೇ ತನ್ನ ಮರಣೋತ್ಸವ ಎಂದು ತಿಳಿದು, ಸ್ವರ್ಗವನ್ನು ಸೇರಿ ಅಲ್ಲಿಯೇ ಇಂದ್ರಾಣಿಯನ್ನು ಪೂಜಿಸುವೆನೆಂದು ಭಾವಿಸುತ್ತಾಳೆ. ಇದು ಸರಿಯೇ, ಏಕೆಂದರೆ, ಮುಂದೆ ರುಕ್ಮಿಣಿಯು 'ಇಂದ್ರನ ತಮ್ಮನ ಮಡದಿಯೇ ಆಗುತ್ತಾಳೆ' ಎಂದು ಸುಬುದ್ಧಿಯು ಸಂತೋಷಪಡುತ್ತಾಳೆ. 'ಪೂರ್ಣಮನೋರಥದವಳಾಗು' ಎಂದು ಹರಸುತ್ತಾಳೆ. ಅಂಕದ ಕೊನೆಯಲ್ಲಿ ಎಲ್ಲರೂ ನಿಷ್ಕ್ರಮಿಸುತ್ತಾರೆ.

ನಾಲ್ಕನೇ ಅಂಕದಲ್ಲಿ ಸಾತ್ಯಕಿಯು ಸಾರಥಿಯೊಂದಿಗೆ ಪ್ರವೇಶಿಸಿ, 'ಕೃಷ್ಣನಿಂದ ರುಕ್ಮಿಣಿಯ ಅಪಹರಣವಾಗಿದೆ, ಅವನು ಅಲ್ಲಿಂದ ಹೊರಟಿದ್ದಾನೆ' ಎಂದು ತಿಳಿಸುತ್ತಾನೆ. ಇಲ್ಲಿ ಅಪಹರಣವನ್ನು ಪರೋಕ್ಷವಾಗಿ ತಿಳಿಯುವಂತೆ ಸನ್ನಿವೇಶವನ್ನು ಮಾಡಲಾಗಿದೆ. 'ತಾನೀಗ ಶಿಶುಪಾಲ ರುಕ್ಮಿಯ ಮರಣದಿಂದ ತೃಪ್ತಿಗೊಳ್ಳುವೆನು' ಎಂದುಕೊಳ್ಳುತ್ತಿರಲು, ಆಗ ಸೈನ್ಯಸಮೇತನಾದ ಬಲರಾಮನನ್ನು ನೋಡುತ್ತಾನೆ. ಕೃಷ್ಣನ ಪಕ್ಷದ ಎಲ್ಲರೂ ಶಿಶುಪಾಲ ಮತ್ತು ರುಕ್ಮಿಯನ್ನು ಹಿಂಬಾಲಿಸುತ್ತಿರಲು" ये बलदेवेन दृष्टाः कालेन ते दृष्टाः " (ಬಲರಾಮನಿಂದ ನೋಡಲ್ಪಟ್ಟರೆ ಅವರು ಯಮನಿಂದಲೇ ನೋಡಲ್ಪಟ್ಟಂತೆ) ಎಂದು ಸಾತ್ಯಕಿಯೂ ಉದ್ಗರಿಸುತ್ತಾನೆ. ಓಡಿಹೋಗುತ್ತಿರುವ ರುಕ್ಮಿ ಮತ್ತು ಶಿಶುಪಾಲರು ಬಲರಾಮನ ಬೈಗಳಕ್ಕೆ ಬೆದರಿ ನಿಲ್ಲುತ್ತಾರೆ. ಆದರೆ ದುರಹಂಕಾರದಿಂದ, 'ಎತ್ತಿನಂತೆ ನೇಗಿಲನ್ನು ಹೊರುತ್ತೀಯ' ಎಂದು ಅವನನ್ನು ಗೇಲಿ ಮಾಡುತ್ತಾರೆ, ರಣದುಂದುಭಿಯನ್ನು ಕೇಳಿ ಕೃಷ್ಣನು ರುಕ್ಮಿಣಿ, ಸುಬುದ್ಧಿ, ಸುವತ್ಸಲಾರೊಂದಿಗೆ ಅಲ್ಲಿಗೆ ಬರುತ್ತಾನೆ. 'ಕೇಸರಿಯು ಆನೆಯ ಶಬ್ದವನ್ನು ಕೇಳಿ ಬರದೆ ಇದ್ದಿತೇ?'– ಎಂದು ಸಾತ್ಯಕಿಯು ಹೇಳುತ್ತಾನೆ. ಕೃಷ್ಣನು ಶಿಶುಪಾಲನನ್ನು ಸಾಯಿಸಲು ಹೋದಾಗ ಅವನು ಬಲರಾಮನ ರಥವನ್ನು ಅನುಸರಿಸುತ್ತಾನೆ. ಕೃಷ್ಣನ ಲೀಲೆಗಳನ್ನೆಲ್ಲಾ ಉಪಹಾಸ್ಯ ಮಾಡುತ್ತಾ, ಶಿಶುಪಾಲನು 'ಇಂದ್ರಾಣಿಯ ಮಂದಿರಕ್ಕೆ ಹೋದ ಹೆಣ್ಣನ್ನು ಕದ್ದ ಹೇಡಿಯ ಜೊತೆ ತಾನು ಯುದ್ಧ ಮಾಡುವುದಿಲ್ಲ' ಎನ್ನುತ್ತಾನೆ. ಕೃಷ್ಣನು ತಾನು ಮಾಡಿದ್ದು ಸರಿಯೆಂದು

ವಾದಿಸುತ್ತಾನೆ. ಕೃಷ್ಣನು ಎಲ್ಲಿ ಕುಪಿತನಾಗಿ ಅವನನ್ನು ಸಾಯಿಸುತ್ತಾನೆಯೋ ಎಂಬ ಭಯದಿಂದ ಸಾತ್ಯಕಿಯು ಶಿಶುಪಾಲನ ನೂರು ತಪ್ಪುಗಳನ್ನು ಕ್ಷಮಿಸಬೇಕೆಂದು ಜ್ಞಾಪಿಸುತ್ತಾನೆ. ಆದರೆ, ಶಿಶುಪಾಲನು 'ತನ್ನ ಎಲ್ಲಾ ತಪ್ಪುಗಳಿಗಿಂತ ಕೃಷ್ಣನ ರುಕ್ಮಿಣೀ ಹರಣದ ಒಂದೇ ತಪ್ಪು ಸರಿದೂಗಿಸುತ್ತದೆ' ಎನ್ನುತ್ತಾನೆ. ವರಕವಿ ಮಾಘನ ಶಿಶುಪಾಲವಧ ಕಾವ್ಯದಲ್ಲಿ ಕಾಣುವ ಕೃಷ್ಣನಿಂದೆಯು ಇಲ್ಲಿಯೂ ಇದೆ. ಇನ್ನುಳಿದ ಕಥಾನಕವು ಕವಿಕಲ್ಪಿತವಾಗಿದೆ.

ಶಿಶುಪಾಲ ಮತ್ತು ರುಕ್ಮಿಯು ಆಸುರೀ ವಿದ್ಯೆಯನ್ನು ಪ್ರಯೋಗಿಸಿ ಆಕಾಶದಿಂದ ಬಾಣಗಳನ್ನು ಪ್ರಯೋಗಿಸುತ್ತಾರೆ. ಆದರೆ ಕೃಷ್ಣನು ಗರುಡನನ್ನೇ ಕರೆಯುತ್ತಾನೆ. ಗರುಡನು ಅವರಿಬ್ಬರನ್ನು ಗೋಳಾಡಿಸುತ್ತಾನೆ. 'ಕೃಷ್ಣನು ಅವರಿಬ್ಬರನ್ನು ಮುಕ್ತರನ್ನಾಗಿ ಮಾಡಿದನೇ' ಎಂದು ಬಲರಾಮನು ಪ್ರಶ್ನಿಸಿದಾಗ, ಅಕ್ರೂರನು 'ಅವರಿಬ್ಬರನ್ನು ಕೃಷ್ಣನು ಸಾಯಿಸಿಲ್ಲ, ಏಕೆಂದರೆ, **'समरविजयादेष समधिको विजयः"** (ಯುದ್ಧದಲ್ಲಿ ಗೆಲ್ಲುವುದಕ್ಕಿಂತ ಇದು ಹೆಚ್ಚಿನ ವಿಜಯ) ಎಂದು ತಿಳಿಸುತ್ತಾನೆ. सर्वे आकर्णनाभिनयं कुर्वन्ति ಎಂಬಂತೆ, ಎಲ್ಲರೂ ನಾಟಕದ ತಂತ್ರದಿಂದ ಕೇಳಿದಂತೆ ಅಭಿನಯಿಸುತ್ತಾರೆ

ನೇಪಥ್ಯದಲ್ಲಿ (ತೆರೆಯ ಹಿಂದೆ) ಕೃಷ್ಣನು ರುಕ್ಮಿ ಮತ್ತು ಶಿಶುಪಾಲರನ್ನು ಕರೆತಂದು, रुक्म्यसौ रुक्मिणीभ्राता चेदीन्द्र त्वं च मामकः | अपि दुर्णयदुःशीलौ लालनीयौ युवां मया||(24) ಎಂದು ಹೇಳಿ 'ಕೆಟ್ಟ ನಡತೆಯವರಾದರೂ ಇವರು ನನಗೆ ಆಪ್ತರು' ಎಂದು ತಿಳಿಸುತ್ತಾನೆ. यच्च करुणारसपूराप्लवेन निर्वाणरोषानलेन न तेन त्वद्भ्राता दग्धः (ಕರುಣರಸದ ಪ್ರವಾಹದಿಂದ ರೋಷದ ಬೆಂಕಿಯು ಶಾಂತವಾಗಿ ನಿನ್ನ ಅಣ್ಣನು ಸುಡಲ್ಪಡಲಿಲ್ಲ) ಎಂದು ಸುಬುದ್ಧಿಯು ಹೇಳಿ, ವೀರರಸದಿಂದ ಆರಂಭವಾದ ಕಾವ್ಯದಲ್ಲಿ ಕರುಣರಸದಿಂದ ಶುಭಾಂತ್ಯವನ್ನು ಸೂಚಿಸುತ್ತಾಳೆ. ಕೃಷ್ಣನು ದಯಾವೀರನಾಗಿ ಮೆರೆಯುತ್ತಾನೆ. ನಂತರ ಬಲರಾಮನು ಕೂಡ " जयति जयति शौरिः शौर्यकारुण्यमूर्तिः " ಎಂದು ಹೇಳಿ ಅವನನ್ನು ಹೊಗಳುತ್ತಾನೆ. ಸುಬುದ್ಧಿಯೂ ಕೂಡ ನಮಸ್ಕರಿಸಲು, ಕೃಷ್ಣನು 'ಇದೆಲ್ಲಾ ನಿನ್ನ ಮಹಿಮೆಯೇ' ಎಂದು ಕೊಂಡಾಡುತ್ತಾನೆ. ಆಕಾಶಭಾಷಿತವಾಗಿ ದೇವಿಯು ಜ್ಯೋತಿಯರೂಪದಲ್ಲಿ ಕಾಣಿಸಲು, ಎಲ್ಲರೂ ಅವಳನ್ನು ಪ್ರಾರ್ಥಿಸುತ್ತಾರೆ. ಕೊನೆಗೆ ಭರತವಾಕ್ಯದಲ್ಲಿ ಮಂಗಳಾಶಂಸನವಿದೆ.

ವಿಶ್ಲೇಷಣೆ: ಪ್ರಸ್ತುತ ರೂಪಕದ ನಾಂದಿಯಲ್ಲಿ ಪಾರ್ವತಿಯ ಬಗ್ಗೆ ವರ್ಣನಾತ್ಮಕ ಪ್ರಾರ್ಥನೆ ಇದೆ. "ಅರೆಗಣ್ಣಿನಿಂದ ಕೂಡಿ ನಗೆಮೊಗವುಳ್ಳ, ಘನವಾದ ಆನಂದದಲ್ಲಿ ತಲ್ಲೀನಳಾದ, ಮನ್ಮಥನ ಶೃಂಗಾರ ಭಾವಗಳಿಂದ ಧ್ಯಾನಮುದ್ರೆಯನ್ನು ಪಡೆದಿರುವ ಪಾರ್ವತಿಯ ಪ್ರೇರಕಭಂಗಿಯು ನಿಮಗೆಲ್ಲರಿಗೂ ಉಚಿತವಾದ ಫಲವನ್ನು ನೀಡಲಿ" ಎಂದು ಆಶೀರ್ವಾದದ ಮಂಗಳದೊಂದಿಗೆ ಕವಿಯು ರೂಪಕವನ್ನು ಆರಂಭಿಸುತ್ತಾನೆ. ಇಲ್ಲಿ ಭಂಗಿ, ಹಸ್ತ-ಮುದ್ರೆ, ಭಾವ ಮುಂತಾದ ನಾಟ್ಯಕ್ಕೆ ಸಂಬಂಧಿಸಿದ ಪರಿಭಾಷೆಗಳ ಬಳಕೆ ಇದೆ. ಮುಂದಿನ ಶ್ಲೋಕದಲ್ಲಿ "ನಿನ್ನ ಉಳಿದ ರಮಣಿಯರು ನಿನ್ನ ಹೃದಯವನ್ನು ಪ್ರವೇಶಿಸದಿರಲಿ ಎಂದು ಕೌಸ್ತುಭವನ್ನೇ ಕಾವಲಿಗೆ ನಿಲ್ಲಿಸಿದೆ, ಆದರೆ ಅದು ಕಲ್ಲಿನ ಚೂರಾಗಿ ಪರಿಣಮಿಸಿತು. ಹೀಗೆ ಕುಮುದಗಳ ಶೋಭೆಯನ್ನು ಹೊಂದಿದ, ಲಕ್ಷ್ಮಿಯ ವಿಚಿತ್ರವಿಸ್ಮಯ ಮಾತುಗಳಿಂದ ಮೂಕನಾದ ಮುರಾರಿಯು ನಮ್ಮನ್ನು ಪಾಲಿಸಲಿ" ಎಂಬ ಪ್ರಾರ್ಥನೆ ಇದೆ. ಇಲ್ಲಿ ನಮಸ್ಕಾರದಲ್ಲಿಯೇ ರೂಪಕದ ಮುಖ್ಯಪಾತ್ರವಾದ ಕೌಸ್ತುಭಧಾರಿಯಾದ ಕೃಷ್ಣ, ಮಾತುಗಳಿಂದ ಮುರಾರಿಯನ್ನೂ ಮೂಕಗೊಳಿಸಿದ ರುಕ್ಮಿಣಿಸ್ವರೂಪಳಾದ ಲಕ್ಷ್ಮೀ – ಎಂಬ ಪ್ರಸ್ತಾವ ಮತ್ತು ಮುದ್ರಾಲಂಕಾರದ ಬಳಕೆ ಇದೆ. "ಕಾಲಂಜರದಲ್ಲಿ ಚಕ್ರಸ್ವಾಮಿಯ ಯಾತ್ರೆಯಲ್ಲಿ, ಚಂದ್ರೋದಯದ ಸಮಯದಲ್ಲಿ, ಅಮಾತ್ಯ ವತ್ಸರಾಜನ ಈಹಾಮೃಗವನ್ನು ಅಭಿನಯಿಸಬೇಕೆಂದು ಅಲ್ಲಿಯ ವಿದ್ವಜ್ಜನರು ಆಜ್ಞಾಪಿಸಿದ್ದಾರೆ", ಎಂದು ಸೂತ್ರಧಾರನು ತಿಳಿಸುತ್ತಾನೆ. ಅಷ್ಟರಲ್ಲಿ ಸ್ಥಾಪಕನು,

"ಉದಯಗಿರಿಯಲ್ಲಿ ಇರುವ ಹೆಣ್ಣು ಜಿಂಕೆಯ ಪ್ರೀತಿಯಿಂದ ತನ್ನಲ್ಲಿರುವ ಗಂಡು ಜಿಂಕೆಯು ಎಲ್ಲಿ ಬೀಳುತ್ತದೆಯೋ ಎಂಬ ಕಾತರತೆಯಿಂದ ಚಂದ್ರನು ಆಕಾಶವೆಂಬ ರಂಗದ ಮಧ್ಯಭಾಗದಲ್ಲಿ ಬಂದಿರುವನು" ಎಂದು ಹೇಳುತ್ತಾನೆ. ಹಾಗೆಯೇ "ಅಲ್ಲಿ ಒಬ್ಬ ಅಸಹಾಯಕಳಾದ ಕನ್ಯೆ ಇನ್ನೊಬ್ಬನನ್ನು ಪ್ರೀತಿಸುವಳು" ಎಂಬ ಮಾತುಗಳನ್ನಾಡಿ, ಕಥೆಯ ಭೂಮಿಕೆಯನ್ನು ನೀಡಿ, ಸೂಚ್ಯವಾಗಿ ಕೃಷ್ಣ ರುಕ್ಮಿಣಿಯರ ಕಥೆಯು ರಂಗದ ಮೇಲೆ ಆಗುತ್ತದೆ ಎಂದು ಪ್ರರೋಚನದ ಮೂಲಕ ತೋರಿಸುತ್ತಾನೆ. ಜೊತೆಗೆ ಅಕ್ರೂರನು ಶಿಶುಪಾಲ ಮತ್ತು ರುಕ್ಮಿಣಿಯರ ಮದುವೆಯ ಪ್ರಸ್ತಾವದ ಬಗ್ಗೆ ಕೋಪಗೊಂಡಿಹನು ಎಂದು ಹೇಳಿ ಪ್ರಸ್ತಾವನೆಯನ್ನು ಮುಗಿಸುತ್ತಾನೆ.

ಶ್ರೀಮದ್ಭಾಗವತದ ದಶಮ ಸ್ಕಂದದಲ್ಲಿ, ರುಕ್ಮಿಣೀ ಹರಣದ ಕಥೆಯು ಬೇರೆ ರೀತಿಯಲ್ಲಿದೆ. ರುಕ್ಮಿಣಿಯು ಬ್ರಾಹ್ಮಣನನ್ನು ಕೃಷ್ಣನ ಹತ್ತಿರ ಕಳಿಸುತ್ತಾಳೆ. ಅವಳನ್ನು ಅಪಹರಿಸಲು ತಾನೇ ಉಪಾಯವನ್ನು ತಿಳಿಸುತ್ತಾಳೆ. ಬಲರಾಮ, ಗದಾ, ಸಂಕರ್ಷಣ ಮುಂತಾದವರು ಶಿಶುಪಾಲನನ್ನು ಸೋಲಿಸಿದ ಮೇಲೆ ಅವನು ತನ್ನ ರಾಜ್ಯಕ್ಕೆ ತೆರಳುತ್ತಾನೆ. ಇತ್ತ ರುಕ್ಮಿಯನ್ನು ಕೃಷ್ಣನು ದ್ವಂದ್ವ ಯುದ್ಧದಲ್ಲಿ ಸೋಲಿಸಿ, ಸಾಯಿಸಲು ಸಿದ್ಧನಾಗುತ್ತಾನೆ. ಆಗ ರುಕ್ಮಿಣಿಯು ಅವನ ಪಾದಗಳಿಗೆರಗಿ ತನ್ನ ಅಣ್ಣನ ಪ್ರಾಣಭಿಕ್ಷೆಯನ್ನು ಬೇಡುತ್ತಾಳೆ. ರುಕ್ಮಿಯನ್ನು ವಿಕಾರನನ್ನಾಗಿ ಮಾಡಿ ಅವನ ಅವಮಾನದಿಂದಲೇ ಸತ್ತಂತೆ ಮಾಡುತ್ತಾರೆ. ಸಂಕರ್ಷಣನು ಸಾಯಿಸುವುದು ಬೇಡ ಎಂದು ತಿಳಿಸುತ್ತಾನೆ.

ಇದನ್ನೇ ಅಮಾತ್ಯ ವತ್ಸರಾಜನು ರೂಪಕಕ್ಕೆ ಪರಿವರ್ತಿಸಿರುವ ರೀತಿಯು ಸೊಗಸಾಗಿದೆ. ಪತ್ರದ ಬದಲು ಚಿತ್ರ, ಅದು ಸಾಕ್ಷಾತ್ ಕೃಷ್ಣನ ಕೈಯಲ್ಲೇ ಬೀಳುವುದು, ಸುಬುದ್ಧಿಯ ಪಾತ್ರದ ಸೃಷ್ಟಿ, ಕೃಷ್ಣ ಮತ್ತು ರುಕ್ಮಿ, ಶಿಶುಪಾಲರ ಆಕಾಶಯುದ್ಧ, ಗರುಡನ ಆಗಮನ, ಕೊನೆಗೆ ಕರುಣವೀರನಾಗಿ ಕೃಷ್ಣನ ಚಿತ್ರಣ – ತುಂಬಾ ನಾಟಕೀಯವಾಗಿದೆ. ಈಹಾಮೃಗದ ಶೈಲಿಗೆ ಸೂಕ್ತವಾದ ಕಥಾನಕವಾಗಿ ರೂಪಿಸಿರುವ ವತ್ಸರಾಜನು ಇದರಲ್ಲಿ ಬಳಸಿದ ಭಾಷೆಯೂ ಸೊಗಸಾಗಿದೆ. 'ಇನ್ನೆಲ್ಲಿ' ಎಂಬುದಕ್ಕೆ कुत्रान्यत्र ಎಂಬ ಪ್ರಯೋಗ, ಬಲರಾಮನ ಶೌರ್ಯ ಮತ್ತು ದಾರ್ಷ್ಟ್ಯಮಿಶ್ರಿತ ವಾಕ್ಯಗಳು, ಸೊಬಗಿನ ಶಬ್ದಾಲಂಕಾರ–ಅರ್ಥಾಲಂಕಾರಗಳು ಇವೆಲ್ಲಾ ಸೇರಿ ಓದುಗರಿಗೆ ಮುದವನ್ನು ನೀಡುತ್ತದೆ. ಈಗಿನ ಕಾಲದಲ್ಲೂ ಇಬ್ಬರು ಪುರುಷರು ಒಬ್ಬಳನ್ನೇ ಪ್ರೀತಿಸುವಂತಹ ಚಲನಚಿತ್ರದ ಕಥೆಯಂತೆ ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಹಾಗೂ ಸ್ವಲ್ಪ ಮಟ್ಟಿಗೆ ರೌದ್ರ ರಸಗಳನ್ನುಳ್ಳ ಈಹಾಮೃಗವು ಲೋಕರಂಜಕವಾಗಿರುತ್ತದೆ.

ಸಮುದ್ರಮಥನ – ಸಮವಕಾರ

ಲಕ್ಷಣವಿಚಾರ: ಸಮವಕಾರ ಎಂಬ ಪದವನ್ನು 'ಸಂ' ಮತ್ತು 'ಅವ' ಎಂಬ ಎರಡು ಉಪಸರ್ಗಗಳನ್ನು 'ಕೃ ವಿಕ್ಷೇಪೆ' ಎಂಬ ಧಾತುವಿನೊಂದಿಗೆ ಸೇರಿಸಿ ನಿಷ್ಪತ್ತಿ ಮಾಡಲಾಗಿದೆ. ಇದು 'ಚೆನ್ನಾಗಿ ಚೆಲ್ಲಲ್ಪಡುವುದು/ ಸಿಂಪಡಿಸಲ್ಪಡುವುದು' ಎಂಬ ಸಾಮಾನ್ಯ ಅರ್ಥವನ್ನು ಹೊಂದಿದೆ. ಅಭಿನವಗುಪ್ತನ ನಾಟ್ಯಶಾಸ್ತ್ರದ ವ್ಯಾಖ್ಯಾನವಾದ ಅಭಿನವಭಾರತಿಯ ಪ್ರಕಾರ -" संबद्धो अवकीर्णश्च यत्रार्थः सः समवकारः" ಎಂದರೆ, ಇಲ್ಲಿ ಒಂದು ಅಂಕವೇ ಸಂಪೂರ್ಣವಾದಂತೆ ತೋರಿದರೂ ಬೀಜದ ಮೂಲಕ ಮೂರು ಅಂಕಗಳ ನಡುವೆ ಸಂಬಂಧವಿರುತ್ತದೆ ಮತ್ತು ಒಂದು ಮಹಾವಾಕ್ಯವು ಎಲ್ಲಾ ಅಂಕಗಳಲ್ಲೂ ಹಾಸುಹೋಕ್ಕಾಗಿ ತೋರುತ್ತದೆ. ಅಂಕಗಳಿಗೆ ಸಂಬದ್ಧವಿದ್ದರೂ ಅರ್ಥವು ಸಮಗ್ರ ರೂಪಕದಲ್ಲಿ ಹರಡಿರುವುದು.

देवासुरबीजकृतः प्रख्यातोदात्तनायकश्चैव | त्र्यङ्कस्तथा त्रिकपटस्त्रिविद्रवः स्यास्त्रिशृङ्गारः ||ना. शा 18,63|| ನಾಟಕ ಮತ್ತು ಪ್ರಕರಣಗಳ ಲಕ್ಷಣದ ನಂತರ ಈ ರೂಪಕದ ಲಕ್ಷಣ ಮತ್ತು ವಿವರಗಳನ್ನು ಭರತನು ಸುದೀರ್ಘವಾಗಿ ಹದಿನೈದು

ಶ್ಲೋಕಗಳಲ್ಲಿ ಹೀಗೆ ಕೊಟ್ಟಿದ್ದಾನೆ. ಅಭಿನವಗುಪ್ತನು ತ್ರಿವರ್ಗಗಳು[1] ಇದರಲ್ಲಿ ಉತ್ಪನ್ನವಾಗುವ ಕಾರಣ ಮತ್ತು ಅನೇಕ ಅಂಕಗಳಿರುವ ಕಾರಣ, ಎಲ್ಲಾ ರೂಪಕಗಳಿಗೂ ಪೂರ್ವಭಾವಿಯಾಗಿ ಇದರ ವಿವರಣೆಯನ್ನು ಭರತನು ನೀಡಿದ್ದಾನೆ– ಎಂದು ಸಮರ್ಥಿಸುತ್ತಾನೆ.

ಸಮವಕಾರದಲ್ಲಿ ದೇವಾಸುರರ ಕಥೆ ಇದೆ. ಪ್ರಖ್ಯಾತ ನಾಯಕನಿರುತ್ತಾನೆ. ಅಪ್ರಖ್ಯಾತವಾದ ಬೃಹತ್ಕಥೆಯ ನಾಯಕನೋ ಅಥವಾ ಕವಿಕಲ್ಪಿತ ನಾಯಕನೋ ಇರುವುದಿಲ್ಲ. ಮನುಷ್ಯನಿಗೆ ಹೋಲಿಸಿದರೆ, ದೇವತೆಗಳು ಉದ್ಧತರೇ. ಅವರಲ್ಲಿ ಬ್ರಹ್ಮಾದಿಗಳು ಪ್ರಶಾಂತರು, ಕೆಲವರು ಅಂದರೆ ನರಸಿಂಹಾದಿಗಳು ಉದ್ಧತರು. ಆದರೆ ಇಲ್ಲಿ ಶಿವನಂತಹ ಗಂಭೀರ, ಉದಾತ್ತ ನಾಯಕನಿರಬೇಕು ಎನ್ನುತ್ತಾನೆ ಅಭಿನವಗುಪ್ತ. ಮೂರೇ ಅಂಕಗಳಿದ್ದು, ಪ್ರತಿ ಅಂಕದಲ್ಲಿಯೂ ಮೂರು ರೀತಿಯ ವಿಶೇಷ ಅರ್ಥ/ಅಂಶಗಳು ಇರಬೇಕು. ಅವು ಯಾವುವೆಂದರೆ –

1. ಕಪಟ ಎಂದರೆ ವಂಚನೆ/ಮೋಸ ಮಾಡುವುದು (ವಸ್ತುವಿನ ವಂಚನೆ, ದೈವವಶದಿಂದ ಆದ ವಂಚನೆ ಮತ್ತು ಬೇರೆಯವರಿಂದ ಆದ ವಂಚನೆ ಎಂದು ಇದರಲ್ಲಿ ಮೂರು ವಿಧ)
2. ವಿದ್ರವ ಎಂದರೆ ಪಲಾಯನ (ಅಚೇತನ ವಸ್ತುವಿನಿಂದ ಉಂಟಾಗುವ, ಬೇರೆಯವರಿಂದ ಉಂಟಾಗುವ ಮತ್ತು ಇಬ್ಬರಿಂದಲೂ ಉಂಟಾಗುವ ವಿದ್ರವ ಎಂದು ಇದು ಮೂರು ಬಗೆಯಾದದ್ದು. ಅನರ್ಥವಾದ ವಸ್ತುವಿನಿಂದ ಓಡಿ ಹೋಗುವುದೇ ವಿದ್ರವ) ಮತ್ತು
3. ಶೃಂಗಾರ (ಧರ್ಮಶೃಂಗಾರ, ಅರ್ಥಶೃಂಗಾರ ಮತ್ತು ಕಾಮಶೃಂಗಾರ ಎಂಬ ಮೂರು ವಿಧ)

ಕಪಟವು ಉಪಾಯವನ್ನು ಯೋಚಿಸುವುದರಲ್ಲಿ (ಕಥೆಯ ಆರಂಭದಲ್ಲಿ), ವಿದ್ರವವು ವ್ಯುತ್ಪತ್ತಿ ಅಂಶದಲ್ಲಿ (ಕಥೆಯು ಬೆಳೆಯುವುದರಲ್ಲಿ) ಮತ್ತು ಶೃಂಗಾರವು ಫಲಾಂಶದಲ್ಲಿ (ಕಥೆಯ ಕೊನೆಯ ಭಾಗದಲ್ಲಿ) ತೋರುತ್ತವೆ. ಅಭಿನವಗುಪ್ತನ ಪ್ರಕಾರ, ಒಂದೊಂದು ಅಂಕದಲ್ಲೂ 12 ನಾಯಕರಿರಬೇಕು ಎಂದು ಕೆಲವರು ಹೇಳಿದರೆ, ಒಂದೊಂದು ಅಂಕಗಳಲ್ಲಿಯೂ ನಾಯಕ, ಪ್ರತಿನಾಯಕ ಮತ್ತು ಅವರ ಇಬ್ಬರು ಸಹಾಯಕರು ಸೇರಿ ಒಟ್ಟು ಮೂರು ಅಂಕಗಳಲ್ಲಿ ಹನ್ನೆರಡು ನಾಯಕರು ಎಂದು ಇನ್ನೂ ಕೆಲವರು ತಿಳಿಸುತ್ತಾರೆ ಎಂದೂ ಅಭಿನವಗುಪ್ತ ಹೇಳಿದ್ದಾನೆ.

ಹದಿನೆಂಟು ನಾಡಿಕೆಗಳ (ಒಂದು ನಾಡಿಕೆ 24 ನಿಮಿಷದ್ದಾಗಿರುತ್ತದೆ. ಹಾಗಾಗಿ 432 ನಿಮಿಷಗಳು ಅಥವಾ ಸುಮಾರು ಏಳೂವರೆ ಘಂಟೆಗಳ ಕಾಲ ಈ ರೂಪಕವು ನಡೆಯುತ್ತದೆ.) ಕಾಲಪ್ರಮಾಣದಲ್ಲಿ ಸಮವಕಾರವು ಇರುತ್ತದೆ. ಮೊದಲನೇ ಅಂಕದಲ್ಲಿ ಕಾಮಶೃಂಗಾರವಿರುವ ಕಾರಣ, ಹಾಸ್ಯವೂ ಇರುತ್ತದೆ. ವೀಥಿಯ ಆಂಶಗಳೂ ಇರುತ್ತವೆ. ಸಮವಕಾರದಲ್ಲಿ ಅನೇಕ ರಸಗಳಿವೆ, ಕೈಶಿಕೀ ವೃತ್ತಿಯು ಇಲ್ಲ; ಗೀತ–ನೃತ್ತ–ವಾದ್ಯಗಳು ಪ್ರಧಾನವಾಗಿ ತೋರುವುದಿಲ್ಲ. ಭಾರತೀವೃತ್ತಿಯು ಪ್ರಧಾನವಾಗಿರುತ್ತದೆ. ರೌದ್ರದ ಅಂಶವು ಇರುವುದಿಲ್ಲ.

ಸಮವಕಾರದ ಛಂದೋಬಂಧಗಳನ್ನು ವಿವರಿಸುತ್ತಾ ಇದರಲ್ಲಿ ಉಷ್ಣಿಕ್ (7 ಮಾತ್ರೆಗಳು), ಗಾಯತ್ರಿ (8 ಮಾತ್ರೆಗಳು) ಮುಂತಾದ ಕ್ಲಿಷ್ಟವಾದ, ಅರ್ಧಸಮ, ಅರ್ಧವಿಷಮವಾದ ಬಂಧಗಳಿರಬೇಕು ಎಂದು ನಾಟ್ಯಶಾಸ್ತ್ರವು ಸೂಚಿಸಿದರೆ, ಉದ್ಭಟನು 'ಸ್ರಗ್ಧರ ಮುಂತಾದ ಛಂದಸ್ಸುಗಳು ಇರಬೇಕು, ಚಿಕ್ಕ ಛಂದಸ್ಸು ಇರಬಾರದು' ಎನ್ನುತ್ತಾನೆ. ಇಂಥ ಸಮವಕಾರವನ್ನು ತೀರ್ಥಕ್ಷೇತ್ರಗಳಲ್ಲಿ ಅಭಿನಯಿಸಿದರೆ, ಮುಗ್ಧರಾದ ದೇವಭಕ್ತರು, ಬಾಲಕರು, ಹೆಂಗಸರು ಮಾತ್ರವಲ್ಲದೆ ಮೂರ್ಖರು ಕೂಡ ನೋಡಿ ಆನಂದಿಸುತ್ತಾರೆ ಎನ್ನಲಾಗಿದೆ– "ಏಕಂ ಸಮಾರಾಧನಮ್".

---

[1] ಧರ್ಮಾರ್ಥಕಾಮಗಳು ತ್ರಿವರ್ಗವೆಂದು ಪ್ರಸಿದ್ಧವಾಗಿವೆ. ಅದರೊಂದಿಗೆ "क्षयं स्थानं च वृद्धिश्च त्रिवर्गो नीतिवेदिनाम्" ಸ್ಥಿತಿ, ವೃದ್ಧಿ ಮತ್ತು ಕ್ಷಯಿಸುವುದಕ್ಕೂ ತ್ರಿವರ್ಗ ಎನ್ನುತ್ತಾರೆ.

ಕಥಾನಕ: ಮೊದಲನೇ ಅಂಕದಲ್ಲಿ, ಪದ್ಮಕ (ಲಕ್ಷ್ಮಿಯ ಸೇವಕ) ಮತ್ತು ನಿಷ್ಠುರಕ (ಒಬ್ಬ ದೇವತೆ) ಎಂಬ ಎರಡು ಪಾತ್ರಗಳ ಮಾತು ಕ್ರಮವಾಗಿ ಪ್ರಾಕೃತ ಮತ್ತು ಸಂಸ್ಕೃತದಲ್ಲಿ ಆರಂಭವಾಗುತ್ತದೆ. ನಿಷ್ಠುರಕನು 'ಸಮುದ್ರವಾಸಿನಿಯಾದ ಲಕ್ಷ್ಮಿಗೂ, ದೃಷ್ಟಿಗೋಚರನಲ್ಲದ ನಾರಾಯಣನಿಗೂ ಹೇಗೆ ಪ್ರೇಮ ಉಂಟಾಗುತ್ತದೆ' ಎಂದು ಉಪಹಾಸ ಮಾಡುತ್ತಾನೆ. ತನ್ನ ಧ್ಯಾನಕ್ಕೆ ಸಿಕ್ಕಿದ ನಾರಾಯಣನ ಚಿತ್ರವನ್ನು ತೋರಿಸುತ್ತಾನೆ. ಅದಕ್ಕೆ ಪದ್ಮಕನು, 'ಸಮುದ್ರನ ಪತ್ನಿಯಾದ ಗಂಗೆಯು ಸಮುದ್ರನ ಮಗಳಾದ ಲಕ್ಷ್ಮಿಗೆ ರಚಿಸಿರುವ ಚಿತ್ರಪಟವದು' ಎಂದು ತಿಳಿಸುತ್ತಾನೆ. ಇಬ್ಬರೂ ಆ ಚಿತ್ರಕ್ಕೆ ಜಗಳವಾಡುತ್ತಾರೆ. ನಾರಾಯಣನನ್ನು ಕುರಿತ ಲಕ್ಷ್ಮಿಯ ಪ್ರೀತಿಯ ಬಗ್ಗೆ ಪ್ರಾಕೃತದಲ್ಲೇ ಮೂರು ಶ್ಲೋಕಗಳನ್ನು ಹೇಳುತ್ತಾನೆ. ಮಂದಮತಿಗಳಾದ ಅವರಿಬ್ಬರ ಜಗಳ ಜನರಂಜಕವಾಗಿದೆ. ನಿಷ್ಠುರಕನು ಪದ್ಮಕನಿಗೆ ತನ್ನ ಕುಶಾಸನವನ್ನು ತೆಗೆದು ಹೊಡೆಯಲು ಯತ್ನಿಸಿದರೆ, ಪದ್ಮಕನು 'ಯಾವುದಾದರೂ ಸಮುದ್ರಜಂತುವು ನಿನ್ನನ್ನು ತಿನ್ನಲಿ' ಎಂದು ಹಾರೈಸುತ್ತಾನೆ. ಅವರ ಸಂವಾದದ ಮೂಲಕ, ಲಕ್ಷ್ಮಿಯು ಪಾರ್ವತಿಯನ್ನು ಅರ್ಚಿಸಲು ಸಿದ್ಧಳಾಗಿದ್ದಾಳೆ ಎಂದು ತಿಳಿಯುತ್ತದೆ. ಹೀಗೆ ಅನ್ನುತಿದ್ದಂತೆ, ಒಂದು ಆನೆಯು ಸಮುದ್ರದ ಮಧ್ಯದಿಂದ ಹೊರಬರುವುದನ್ನು ನೋಡಿ ಭಯದಿಂದ ನಿಷ್ಠುರಕನು ಓಡಿ ಹೋಗುತ್ತಾನೆ. ಇಲ್ಲಿ ಪ್ರಾಣಿಯಿಂದಾದ ವಿದ್ರವವನ್ನು ನೋಡಬಹುದು. ಲಕ್ಷ್ಮಿಯು ತನ್ನ ಗೆಳತಿಯರಾದ ಲಜ್ಜಾ ಮತ್ತು ಧೃತಿಯರೊಂದಿಗೆ (ಅವಳ ಪ್ರಾಕೃತಿಕ ಗುಣಗಳ ಪ್ರತೀಕ) ಆನೆಯನ್ನೇರಿ ಸಮುದ್ರದ ಹೊರಗೆ ಬರುತ್ತಿದ್ದಾಳೆ ಎಂದು ತಿಳಿಯುತ್ತದೆ. ಆ ಮೂವರೂ ಪ್ರಾಕೃತದಲ್ಲಿಯೇ ಸಂಭಾಷಣೆಯನ್ನು ಮಾಡುತ್ತಾರೆ.

ಅನೇಕ ಪ್ರಾಕೃತ ಶ್ಲೋಕಗಳು ಇಲ್ಲಿ ಕಂಡುಬರುತ್ತವೆ. ಮೂವರೂ ಹೂವನ್ನು ಸಂಗ್ರಹಿಸುವಾಗ, ಲಕ್ಷ್ಮಿಯು ನಾರಾಯಣನ ವಕ್ಷಸ್ಥಳವನ್ನು ಸ್ಮರಿಸಿ, ಆ ಹೂವುಗಳನ್ನು ಮುತ್ತುಗಳೆಂದು ಭ್ರಮಿಸುತ್ತಾಳೆ. ಪುಷ್ಪಗಳನ್ನು ಆರಿಸುವಾಗ, ಭ್ರಮರಗಳು ಲಕ್ಷ್ಮಿಯ ಮುಖವನ್ನು ಮುತ್ತುತ್ತದೆ. ಧೃತಿಯು, 'ಲಕ್ಷ್ಮಿಯ ಮುಖದ ಪರಿಮಳದಿಂದ ಆಕರ್ಷಿತವಾದ ದುಂಬಿಗಳು ಹೂವನ್ನು ಬಿಟ್ಟು ಅವಳ ಮುಖವನ್ನು ಸುತ್ತುವರೆಯುತ್ತಿವೆ' ಎಂದು ಉಪಹಾಸ ಮಾಡುತ್ತಾಳೆ.

ಭವಾನಿಯ ಪೂಜೆಯ ಅನಂತರ ಪದ್ಮಕನು ಪ್ರವೇಶಿಸಿ, ಕೃಷ್ಣನ ಚಿತ್ರಪಟವನ್ನು ತೋರಿಸಿ, 'ಅವನನ್ನು ಹೂವುಗಳಿಂದ ಮತ್ತು ಕಣ್ಣೆಂಬ ಹೂವಿಗಳಿಂದ ಪೂಜಿಸು' ಎನ್ನುತ್ತಾನೆ.[1] ಲಜ್ಜೆಯು ಪದ್ಮಕನನ್ನು "ದ್ರವ್ಯಗಳ ಹಾಗೂ ಸುಖದ ನಿಧಿ" ಎಂದು ಹೊಗಳುತ್ತಾಳೆ. (ಪದ್ಮ ಎಂಬುದು ಕುಬೇರನ ನವನಿಧಿಗಳಲ್ಲಿ ಒಂದಾಗಿದೆ). ಲಕ್ಷ್ಮಿಯು ನಾಚಿಕೆಯಿಂದ ತನ್ನಷ್ಟಕ್ಕೆ ತಾನೇ "ಭವಾನಿಯ ಪ್ರಸಾದವೆಂಬ ಮರವು, ಈ ಚಿತ್ರದರ್ಶನ ಎಂಬ ದೋಹದದಿಂದ ಪೂರ್ಣವಾಗುತ್ತದೆ" ಎನ್ನುತ್ತಾಳೆ. ಇದೇ ಭಾಗದಲ್ಲಿ ಬಹಳಷ್ಟು ಕಡೆ, ವೇದಾಂತದ ತತ್ವಗಳನ್ನು ಸೂಕ್ಷ್ಮವಾಗಿ ಧ್ವನಿಸಿರುವುದು ಸುಂದರವಾಗಿದೆ.

ಪದ್ಮಕನು, "जनार्दन पूजयैव जनार्दनः प्राप्यते " ಎನ್ನುತ್ತಾ, ಎಲ್ಲರನ್ನೂ ಮಧುಸೂದನನನ ಪೂಜೆಗೆ ಪ್ರೇರೇಪಿಸುತ್ತಾನೆ. ನೇಪಥ್ಯದಲ್ಲಿ ಪ್ರಳಯವಾಗುವಂತೆ ಸೂಚನೆ ಇದ್ದು (ಶ್ಲೋಕ 16) ಬಿರುಗಾಳಿಯಿಂದ ತಲ್ಲಣಿಸಿ, ಪ್ರಪಂಚವೇ ಜಂಗಮವಾದಂತೆ ತೋರುತ್ತಿರುವ ಚಿತ್ರಣವಿದೆ. ಲಕ್ಷ್ಮಿಯು ಅವಳ ತಂದೆಯಾದ ಸಮುದ್ರರಾಜನನ್ನು ತನ್ನ ತೊಡೆಯ ಮೇಲೆ ಕುಳ್ಳರಿಸಿಕೊಳ್ಳಲು ಕೇಳಿಕೊಂಡು, "ಇದೇನೇ ಪೂಜೆಯ ಫಲ" ಎಂದು ಮರುಗುತ್ತಾಳೆ. ಎಲ್ಲರೂ ಸಮುದ್ರವನ್ನು ಪ್ರವೇಶಿಸಲು, ವಾಸುದೇವನು ದೇವಾಸುರರೊಂದಿಗೆ ಪ್ರವೇಶಿಸುತ್ತಾನೆ. ಬೃಹಸ್ಪತಿ, ಕುಬೇರ ಮತ್ತು ಇಂದ್ರಾದಿ ದೇವತೆಗಳು ಸಮುದ್ರದ ಹತ್ತಿರ ಬರಲು, ಬೃಹಸ್ಪತಿಯು ಮಂದರ ಪರ್ವತಕ್ಕೆ ಏನೋ ಅನಾಹುತವಾಗುವುದೆಂಬ ಭಯದಲ್ಲಿ, 'ಈ ಸಮುದ್ರದಲ್ಲಿ ಬೇಗ ಸ್ನಾನ ಮಾಡಿ

---

[1] ಅಮಾತ್ಯ ವತ್ಸರಾಜನ ರುಕ್ಮಿಣೀಹರಣ ಎಂಬ ಈಹಾಮೃಗದಲ್ಲೂ ಚಿತ್ರಪಟದ ಮೂಲಕ ಪ್ರೇಮಾಂಕುರವಾಗುವುದನ್ನು ಕಾಣಬಹುದು.

ಪುನಃ ಸ್ವರ್ಗಕ್ಕೆ ಮರಳಿರಿ' ಎಂದು ದೇವತೆಗಳಿಗೆ ಹೇಳುತ್ತಾನೆ. ಆದರೆ ಇಂದ್ರನು, 'ಈ ಬೃಹಸ್ಪತಿಗೆ ಮಂತ್ರವನ್ನು ಬಿಟ್ಟರೆ ಇನ್ನೇನು ಬರುವುದಿಲ್ಲ, ಇವನು ಪುಕ್ಕಲ' ಎಂದು ಉಪಹಾಸ ಮಾಡುತ್ತಾನೆ. ದೇವತೆಗಳ ಗರ್ವವನ್ನು ಗಮನಿಸುತ್ತಿರುವ ವಾಸುದೇವನು, ಬ್ರಹ್ಮನ ಆಗಮನವನ್ನು ಎಲ್ಲರಿಗೂ ತೋರಿಸುತ್ತಾನೆ. ಮಹೇಶನೂ ಅಲ್ಲಿಗೆ ಬರಲು, ಸಮುದ್ರದ ಮಧ್ಯದಿಂದ ಮಂದರ ಪರ್ವತವು ಏಳುತ್ತದೆ. ವಾಸುದೇವನು ಶಿವನ ಕೊರಳಿನ ಸುತ್ತಲಿರುವ ಆದಿಶೇಷನಿಗೆ ಹಗ್ಗವಾಗಲು ಆಜ್ಞಾಪಿಸುತ್ತಾನೆ. ಮಹೇಶನು, सर्वेऽपि कुणयः कृष्ण! त्वां विनामी सुरासुराः | त्वमेषामद्भुतो बाहुर्निष्प्रत्यूहश्चतुर्भुजः ||35||

"ಎಲ್ಲಾ ಸುರಾಸುರರು ನೀನಿಲ್ಲದೆ ಅಂಗವೈಕಲ್ಯವನ್ನು ಹೊಂದಿದವರಂತೆ ಇದ್ದಾರೆ. ಚತುರ್ಭುಜನಾದ ನೀನೇ ಇವರೆಲ್ಲರ ಅದ್ಭುತವಾದ ಭುಜವಾಗಿದ್ದೀಯ" ಎಂದು ಹೊಗಳುತ್ತಾನೆ. ಹಾಗೆಯೇ 'ಈ ದೇವಾಸುರರು ಸಮುದ್ರಮಥನದಿಂದ ಉಪಹಾಸಕ್ಕೆ ಕಾರಣರಾಗದೆ ಇರಲಿ' ಎಂದು ಮುಗುಳ್ನಗುತ್ತಾನೆ. ವಿಷ್ಣುವು 'ಆ ಸಮುದ್ರದ ಶಬ್ದವು ಲಕ್ಷ್ಮಿಯ ಉತ್ಕಂಠಿತ ಹಾಗೂ ದೀರ್ಘ ನಿಶ್ವಾಸವನ್ನು ತೋರುತ್ತದೆ' ಎನ್ನುತ್ತಾನೆ.

ಸಮುದ್ರಮಥನವಾಗುತ್ತಿದ್ದಂತೆ, ವೇದಗಳು ಹೊರಬರುತ್ತವೆ. ಅಸುರರಾಜನಾದ ಬಲಿಯು, ವಿಷ್ಣುವನ್ನು "ಎಲ್ಲರೂ ನಿನ್ನ ಸಮಾನಭಕ್ತರಾದ್ದರಿಂದ ಎಲ್ಲರಿಗೂ ಸಮಾನ ಪ್ರಸಾದ ಸಿಗಬೇಕು" ಎಂದು ಕೇಳಿಕೊಳ್ಳುತ್ತಾನೆ. ಕೃಷ್ಣನು, "ಎಲ್ಲಾ ವಸ್ತುಗಳು ಸಮುದ್ರದ ದಡದಲ್ಲಿರಲಿ. ಅನಂತರ ಶಿವನ ಆಜ್ಞೆಯ ಮೇಲೆ ವಿಭಾಗ ಮಾಡಿಕೊಳ್ಳೋಣ" ಎಂದು ಸಮಾಧಾನ ಪಡಿಸುತ್ತಾನೆ. ಅಗ್ನಿ ಮೊದಲಾದ ದಿಕ್ಪಾಲಕರು ಅದನ್ನು ಸುರಕ್ಷಿತವಾಗಿರಿಸುತ್ತಾರೆ. ಅನಂತರ, ಐರಾವತ ಗಜವು ಬರುತ್ತದೆ. ತದನಂತರ, ಉಚ್ಚೈಶ್ರವ ಎಂಬ ದಿವ್ಯ ಕುದುರೆಯ ಆಗಮನವಾಗುತ್ತದೆ. ಆಗ, ಬ್ರಹ್ಮ ವಿಷ್ಣು ಮಹೇಶ್ವರರು, 'ತಮಗೆ ಅದು ಬೇಡ' ಎಂದು ಹಾಸ್ಯ ಮಾಡಿಕೊಳ್ಳುತ್ತಾರೆ. ಅನಂತರ, ಚಂದ್ರನು ಹೊರಬರುತ್ತಾನೆ. ವಿಷ್ಣುವು ಅದನ್ನು ಲಕ್ಷ್ಮಿಯ ಮುಖವೆಂದೇ ಭ್ರಮಿಸುತ್ತಾನೆ. ಚಂದ್ರನು ಬಂದು, 'ಈ ಸಮುದ್ರಮಥನದ ಕಾರಣದಿಂದ ಶಿವನ ದರ್ಶನವಾಯಿತು' ಎಂದು ಹಿಗ್ಗುತ್ತಾನೆ.

ಔಷಧಿಗಳು ಬಂದು ಶಿವನ ಬಳಿ ನೆಲೆಸುತ್ತವೆ. ವಾಯುವು 'ನಾನು ನನ್ನ ಸಾಮರ್ಥ್ಯವನ್ನು ಸಹಸ್ರಪಟ್ಟು ಬೆಳೆಸುವೆನು. ಇದರಿಂದ ಮಥನವು ಶೀಘ್ರವಾಗಿ ಆಗಿ ಉಳಿದ ಕಷ್ಟಸಾಧ್ಯ ಪದಾರ್ಥಗಳೂ ದೊರಕಲಿ' ಎಂದು ಹಾರೈಸುತ್ತಾನೆ. ಇದರಿಂದಾಗಿ ರತ್ನಗಳು ಬರುತ್ತವೆ. ಅನಂತರ, ಲಕ್ಷ್ಮಿಯ ಆಗಮನ ನಾಲ್ಕು ಶ್ಲೋಕಗಳಿಂದ ಹೇಳಲ್ಪಟ್ಟಿವೆ. ವಿಷ್ಣುವು ತಾನು ಚಿತ್ರದಲ್ಲಿ ಕಂಡ ಲಕ್ಷ್ಮಿಯನ್ನು ಗುರುತಿಸಿ ಸಂತೋಷಗೊಳ್ಳುತ್ತಾನೆ. ಲಕ್ಷ್ಮಿಯು ಅವನ ಕಂಠವನ್ನು ಆಶ್ರಯಿಸಿ ಹೊರಬರುತ್ತಾಳೆ. ತನ್ನ ತಂದೆಯ ಮಥನವನ್ನು ಕಂಡು ಮರುಗುತ್ತಾಳೆ. ಗಂಗೆಯು ಇವಳನ್ನು ಕರೆತಂದು ಸಮುದ್ರ ತೀರದಲ್ಲಿ ಇರಿಸುತ್ತಾಳೆ.

ಅಷ್ಟರಲ್ಲಿ ಬಲಿಯು ಕುಜಂಭ ಎಂಬ ತನ್ನ ಸೇವಕನನ್ನು ಕರೆದು, "ಯಾವುದನ್ನೂ ವಿಷ್ಣುವು ಮತ್ತು ಮಹೇಶರು ವಿಭಾಗ ಮಾಡುತ್ತಿಲ್ಲ. ಆದ್ದರಿಂದ ನಾವು ಅಮೃತವು ಬರುವ ವೇಳೆಗೆ ಜಾಗರೂಕರಾಗಿರಬೇಕು" ಎಂದು ಹೇಳುತ್ತಾನೆ. ಅಮೃತದ ಕುಂಭವು ಬರಲು, ಮಹೇಶನು ಅಗ್ನಿಗೆ ಅದನ್ನು ಸಮುದ್ರತೀರದಲ್ಲಿ ಇರಿಸಲು ಹೇಳುತ್ತಾನೆ. ಇದನ್ನು ನೋಡಿ ಕುಜಂಭನು, ಹಿಂದೆಯೇ ಬಲಿಯು ಹೇಳಿದಂತೆ, ತಾನೇ ಅಗ್ನಿಯ ವೇಷವನ್ನು ಧರಿಸಿ ಬರುತ್ತಾನೆ. ಕೃಷ್ಣನು ಅವನನ್ನು ನೋಡಿ, ಸಂತೋಷಗೊಂಡು, "ಅಗ್ನಿಯೇ, ನೀನು ಎಲ್ಲಾ ದೇವತೆಗಳಲ್ಲಿಯೂ ಮುಖನೂ, ಪ್ರಮುಖನು ಆಗಿದ್ದೀಯ (मुखमपि सर्वेषां मुख्यमसि सर्वेषु) ಎಂದು ಹೊಗಳಿ ಅವನಿಗೆ ಅಮೃತದ ಗಡಿಗೆಯನ್ನು ಕೊಡುತ್ತಾನೆ. ತಕ್ಷಣ, "ನಿನ್ನ ತೇಜೋ ಪ್ರಕಾಶ ಏಕೋ ಕುಂದಿದಂತಿದೆಯಲ್ಲಾ " ಎಂದು ಆಶ್ಚರ್ಯ ಪಡುತ್ತಾನೆ. ಆದರೆ, ಮೋಸಗಾರ ಕುಜಂಭನು 'ತಮ್ಮ ಮುಂದೆ ನನ್ನ ತೇಜಸ್ಸಿಗೆಲ್ಲಿಯ ಪ್ರಖರತೆ' ಎಂದು ಹೇಳಿ ನುಣುಚಿಕೊಳ್ಳುತ್ತಾನೆ..

ಕೃಷ್ಣನು ಪುನಃ ಎಲ್ಲರಿಗೂ ಮಥನ ಮಾಡಲು ಹೇಳುತ್ತಾನೆ. ಆಗ ಒಂದು ಭಯಂಕರವಾದ ಜಲಜಂತುವು ಹೊರಬರುತ್ತದೆಂದು ತೋರುತ್ತದೆ. 'ಸಮುದ್ರವೇ ಕೋಪಗೊಂಡಿದೆಯೋ ಏನೋ " गभीरोयं महात्मा वैदेशिकः कोपप्रकारेषु " (ಆಳವಾದ

ಇವನ ಕೋಪ ಪ್ರಕಾರವು ಬೇರೆಯಂತಿದೆ, ವಿಭಿನ್ನವಾಗಿದೆ) ಎನ್ನುತ್ತಾನೆ. ಆದರೆ ಸಮುದ್ರವು ದಿವ್ಯವಾದ ಆಯುಧಗಳನ್ನು ನೀಡುತ್ತದೆ. ಅನಂತರ ಸುರೆಯ (ಮದ್ಯದ) ಕುಂಭವು ಮರಕತಮಣಿಯಂತೆ ಕಂಗೊಳಿಸುತ್ತಾ ಬರುತ್ತದೆ. ಅಷ್ಟರಲ್ಲಿ ಕುಬೇರನು ಆಕಾಶದ ಹಕ್ಕಿಗಳೆಲ್ಲ ಪ್ರಾಣ ಬಿಡುತ್ತಿರುವುದನ್ನು ಗಮನಿಸಿ, 'ವಿಷವು ಬರುತ್ತಿದೆ' ಎಂದು ತಿಳಿಸುತ್ತಾನೆ. ಮಹೇಶನು ಎಲ್ಲರೂ ಅಲ್ಲಿಂದ ಹೋಗಲಿ ಎಂದು ಆದೇಶಿಸಿದಾಗ, ಮೊದಲನೇ ಅಂಕವು ಕೊನೆಗೊಳ್ಳುವುದು. ಇಲ್ಲಿ ಅನೇಕ ನಾಯಕರು ಕಾಣುತ್ತಾರೆ, ಕುಜಂಭ ಮಾಡಿದ ಕಪಟ, ಎಲ್ಲರೂ ಓಡಿಹೋಗುವ ವಿದ್ರವ ಮತ್ತು ಲಕ್ಷ್ಮೀನಾರಾಯಣರ ಧರ್ಮಶೃಂಗಾರ ಈ ಅಂಕದಲ್ಲಿ ತೋರುವವು.

ಎರಡನೇ ಅಂಕದಲ್ಲಿ ಕಪಟ ಸುಂದರಿಯ ವೇಷದಲ್ಲಿ ವಿಷ್ಣುವೂ, ಅವನ ಸಖಿಯ ವೇಷದಲ್ಲಿ ಗರುಡನೂ ಬರುವರು. "ಈ ನಿರ್ಜನ ಪ್ರದೇಶದಲ್ಲಿ ನಿನಗೇಕೆ ಮಹಿಳೆಯಾಗಲು ಆಸೆ", ಎಂದು ಅವಳ ವಿಭ್ರಮವನ್ನು ಗರುಡನು ಪ್ರಶ್ನಿಸುತ್ತಾನೆ. (ಇಲ್ಲಿ ಹೇವಕ ಪದವನ್ನು ಆಸೆ ಎಂಬ ಅರ್ಥದಲ್ಲಿ ಉಪಯೋಗಿಸಲಾಗಿದೆ. ಇದು ನಂತರ ಕಾಲದ ಅರಬ್ಬೀ ಭಾಷೆಯ ಪ್ರಭಾವದಿಂದ ಬಂದಿರುವ ಪದ). ಆಗ ವಿಷ್ಣುವು "अर्थश्रृङ्गारोयमङ्कतो महते अर्थाय प्रगल्भते "- 'ಈ ಅರ್ಥಶೃಂಗಾರವು ದೊಡ್ಡ ಅರ್ಥಕ್ಕಾಗಿ ಅಥವಾ ಪ್ರಯೋಜನಕ್ಕಾಗಿ ಎನ್ನುತ್ತಾನೆ. ಇದರಲ್ಲಿ, ಸಮವಕಾರದಲ್ಲಿ ಕಾಣುವ ಎರಡನೇ ಪ್ರಕಾರದ ಅರ್ಥಶೃಂಗಾರವು ಸಾಧಿತವಾಗುತ್ತದೆ. ಬೇರೆಯವರ ಆಗಮನವನ್ನು ತಿಳಿದು, ವಿಷ್ಣುವು 'ಇನ್ನು ಮುಂದೆ ಮಹಿಳೆಯರಂತೆ ಪ್ರಾಕೃತದಲ್ಲಿ ಮಾತಾಡಬೇಕು' ಎಂದು ಗರುಡನಿಗೆ ತಿಳಿಸುತ್ತಾನೆ.

ಅಷ್ಟರಲ್ಲಿ ಬಲಿಯು ಕುಜಂಭನೊಂದಿಗೆ ಬಂದು, 'ಅಮೃತವು ಸಿಕ್ಕಿದರೂ ಲಕ್ಷ್ಮೀಯಂಥಹ ಕನ್ಯೆಯು ಸಿಗಲಿಲ್ಲವಲ್ಲ' ಎಂದು ಮರುಗುತ್ತಾನೆ. ಅವರಿಬ್ಬರ ಸಂಭಾಷಣೆಯು ಜನರಂಜಕವಾಗಿದೆ. ಇದನ್ನು ಗಮನಿಸಿ, ಗರುಡನು, "ಈಗ ನಿನ್ನ ವಿಪ್ರಲಂಭ ಅನುಭಾವಗಳನ್ನು ಪ್ರದರ್ಶಿಸು" ಎಂದು ವಿಷ್ಣುವಿಗೆ ಹೇಳುತ್ತಾನೆ. ವಿಷ್ಣುವು, "ನಾನು ನಿಜವಾಗಿಯೂ ದೀರ್ಘವಾದ ನಿಶ್ವಾಸಗಳೆಂಬ ತಾನವಾದ್ಯಗಳಿಂದ ಲಕ್ಷ್ಮೀಯ ವಿರಹವನ್ನು ತೋರಿಸಲು ಈಗ ಇಚ್ಛಿಸುತ್ತೇನೆ" ಎಂದು ತನಗೆ ತಾನೇ ಹೇಳಿಕೊಳ್ಳುತ್ತಾನೆ. ಮೋಹಿನಿಯ ರೂಪದ ವಿಷ್ಣುವಿಗೂ, ನಿಪುಣಿಕೆಯ ವೇಷದ ಗರುಡನಿಗೂ ನಡೆಯುವ ಸುಂದರವಾದ ಸಂವಾದದಿಂದ, ಮೋಹಿನಿಯು ಯಾರೋ ಸುಂದರನನ್ನು ಕನಸಿನಲ್ಲಿ ಕಂಡಂತೆ, ಈಗ ಅವನಿಗಾಗಿ ಹುಡುಕುತ್ತಿರುವಂತೆ ಗೊತ್ತಾಗುತ್ತದೆ. ಬಲಿಯು ಅವಳನ್ನು ಕೇಳಲು, ವಿಷ್ಣುವು, 'ತನ್ನ ಈ ಗದ್ಗದ ಮಾತು ಉಪಶ್ರುತಿ (ವೇದದಂತೆ) ಆಗುತ್ತದೆ' ಎಂದು ಮನದಲ್ಲೇ ನಗುತ್ತಾನೆ. ನಿಪುಣಿಕೆಯು ಮೋಹಿನಿಯನ್ನು ಸಮುದ್ರರಾಜನ ಕೊನೆಯ ಮಗಳೆಂದು ಪರಿಚಯಿಸುತ್ತಾಳೆ.

ಅಷ್ಟರಲ್ಲಿ ಭಾರ್ಗವನಾದ ಶುಕ್ರಾಚಾರ್ಯನು, ಬಂದು " वर्धतां वर्धतां कलिः ", ಎಂದು, ಬಲಿ ಎನ್ನುವುದರ ಬದಲು 'ಕಲಿ ವರ್ಧಿಸಲಿ' ಎಂದು ಆಶೀರ್ವದಿಸುತ್ತಾನೆ. ನೇಪಥ್ಯದಲ್ಲಿ, ದೇವತೆಗಳೆಲ್ಲ ಸಮುದ್ರದಿಂದ ದೊರೆತ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಿರಲು, ದಾನವರು ಸಮರಾಂಗಣದಿಂದ ಪಲಾಯನ ಮಾಡುತ್ತಿದ್ದಾರೆ ಎಂದು ತಿಳಿಯುತ್ತದೆ. ಇಲ್ಲಿ ವಿದ್ರವ ಕಾಣುತ್ತದೆ. ಬಲಿಯು ತಾನು ಮೋಹಿನಿಯೊಂದಿಗೆ ಅಮೃತಪಾನವನ್ನು ಮಾಡುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಕೋಪಗೊಂಡ ಶುಕ್ರಚಾರ್ಯನು ವಿಷ್ಣುವಿನ ನಿಜರೂಪವನ್ನು ತಿಳಿಸಿದರೂ, ಅಮೃತದ ಕುಂಭವನ್ನು ಮೋಹಿನಿಗೆ ಕೊಟ್ಟು, ಬಲಿಯು ಯುದ್ಧಭೂಮಿಗೆ ಹೊರಡುತ್ತಾನೆ. ಮೋಹಿನಿಯು ನಿಪುಣಿಕೆಗೆ ಅಮೃತಪಾತ್ರೆಯನ್ನು ಕೊಟ್ಟು "ನೀನೇ ನಿಪುಣಿಕೆಯಲ್ಲವೇ? ನೀನೇ ಅಮೃತವನ್ನು ತಂದದ್ದು ಅಲ್ಲವೆ?" ಎಂದು ಮಾರ್ಮಿಕವಾಗಿ ಕೇಳುತ್ತಾಳೆ. ವಿರಹವೇದನೆಯನ್ನು ಸಹಿಸಲಾರದೇ ಅಗ್ನಿಯಲ್ಲಿ ಪ್ರಾಣಾರ್ಪಣೆ ಮಾಡುವುದಾಗಿ ಮೋಹಿನಿ ನಿರ್ಧರಿಸಿದಾಗ ಶುಕ್ರಾಚಾರ್ಯರು ಶಂಕಿಸಿ, ಅಮೃತಪಾತ್ರೆಗಾಗಿ ಕೇಳುತ್ತಾರೆ. ಅಗ್ನಿಯನ್ನು ಉಪಶಮನ ಮಾಡುವ ಮಂತ್ರವೂ ಫಲಿಸುವುದಿಲ್ಲ. ಧ್ಯಾನದಿಂದ ವಿಷ್ಣುವನ್ನು ಸ್ಮರಿಸಿದಾಗ, ವಿಷ್ಣುವು ತನ್ನ ನಿಜರೂಪವನ್ನು ತೋರಿಸುತ್ತಾನೆ. ಆಗ ಶುಕ್ರಾಚಾರ್ಯನು, "ಸಮುದ್ರಮಥನದಲ್ಲಿ ದೊರೆತ ವಸ್ತುಗಳೆಲ್ಲದಕ್ಕೂ ಧಿಕ್ಕಾರ.

ದೈತ್ಯರಿಂದ ವಿಷ್ಣುವೂ ಮಹಿಳೆಯ ರೂಪವನ್ನು ತಾಳಬೇಕಾದರೆ, ಇನ್ನೇನು ಸಾಧನೆ ಉಳಿದಿದೆ?" ಎಂದು ಉದ್ಗರಿಸುತ್ತಾನೆ. ಕೊನೆಯಲ್ಲಿ 'ಎಲ್ಲರೂ ಅಮೃತಾಪ್ರಾಶನಕ್ಕೆ ಹೋಗೋಣ' ಎಂದು ಹೇಳಿ ನಿರ್ಗಮಿಸುತ್ತಾರೆ. ಇಲ್ಲಿಗೆ ಎರಡನೇ ಅಂಕವು ಮುಗಿಯುತ್ತದೆ.

ಮೂರನೆಯ ಅಂಕದಲ್ಲಿ ಕೃಷ್ಣ ಮತ್ತು ಲಕ್ಷ್ಮಿಯ ದೃಶ್ಯವಿದ್ದು, ಮೊದಲಿಗೆ ಕೃಷ್ಣನು 'ಎಲ್ಲಾ ವೈಭವ ಮತ್ತು ಸೌಂದರ್ಯವಿರುವ ಸಮುದ್ರವು ಮಾತ್ರ ಲಕ್ಷ್ಮಿಯನ್ನು ಜನಿಸಲು ಸಾಧ್ಯ' ಎಂದು ಶ್ಲಾಘಿಸುತ್ತಾನೆ. ಪಿತೃಗೃಹವಿಯೋಗದಿಂದ, ತನ್ನ ತಂದೆಗೆ ಆದ ಕಷ್ಟದಿಂದ ನೊಂದ ಅವಳನ್ನು ಸಂತೈಸುತ್ತಾನೆ "अहो कष्टं कन्यकानाम् " ಎಂದು ಮರುಗುತ್ತಾನೆ. 'ಸಮುದ್ರನನ್ನು ಕರೆತರಲು ಸಮಸ್ತ ದೇವತೆಗಳೆಲ್ಲ ಹೋಗಿದ್ದಾರೆ' ಎಂದು ಸಮಾಧಾನ ಮಾಡುತ್ತಾನೆ. ಅಷ್ಟರಲ್ಲಿ ದೈತ್ಯರು ದೊಡ್ಡ ಬಿರುಗಾಳಿಯನ್ನು ಮಾಡಿ, ಎಲ್ಲರೂ ಓಡುವಂತೆ ಮಾಡುತ್ತಾರೆ. ಇಲ್ಲೊಂದು ವಿದ್ರವವನ್ನು ನೋಡಬಹುದು. ಆಗ, ಶುಕ್ರಾಚಾರ್ಯನು ಕಪಟ ಶಿವನಾಗಿ ವೇಷ ಧರಿಸಿ ಬಂದು, 'ವಿಷದಿಂದ ತಳಮಳಸುತ್ತಿರುವ ನನಗೆ ಅಮೃತವನ್ನು ಕೊಡು' ಎನ್ನುತ್ತಾನೆ. ಚತುರನಾದ ಕೃಷ್ಣನು ಅವನಿಗೆ 'ಅಮೃತವನ್ನು ಕುಡಿಸುವೆನು, ಆದರೆ ಕೊಡುವುದಿಲ್ಲ' ಎನ್ನುತ್ತಾನೆ. ಜೊತೆಗೆ 'ಇವನಿಗೆ ಆ ದಿವ್ಯ ತೇಜಸ್ವಿ ಮೂರ್ತಿಯ ಅಭಿನಯವನ್ನೂ ಮಾಡಲು ಬರುವುದಿಲ್ಲ," ಎಂದು ಯೋಚಿಸಿ, ಧ್ಯಾನದಿಂದ ಇವನು ಶುಕ್ರಾಚಾರ್ಯನೆಂದು ತಿಳಿಯುತ್ತಾನೆ. ಅವನನ್ನು ಬೈದು ಕಳುಹಿಸುತ್ತಾನೆ. ಅಷ್ಟರಲ್ಲಿ ಗರುಡನ ಜೊತೆ ಶಂಕರನು ಬರಲು, ಎಲ್ಲಾ ದೇವತೆಗಳೊಂದಿಗೆ ಸಾಗರನೂ ಬರುತ್ತಾನೆ. 'ಅವನಿಗೆ ಎಷ್ಟು ತೊಂದರೆಯಾಯಿತು' ಎಂದು ಶಂಕರನು ಮರುಗಲು, ಸಮುದ್ರನು 'ಎಲ್ಲವೂ ನನ್ನ ಮೇಲಾದ ಅನುಗ್ರಹ' ಎಂದು ತಿಳಿಸಿ, ವೇದಗಳನ್ನು ಬ್ರಹ್ಮನಲ್ಲಿಯೂ, ಮಗನಾದ ಚಂದ್ರನನ್ನು ಶಿವನ ಶಿರಸ್ಸಿನಲ್ಲಿಯೂ, ಮಗಳಾದ ಲಕ್ಷ್ಮಿಯನ್ನು ಕೃಷ್ಣನಿಗೂ ಕೊಟ್ಟು, ಕನ್ಯಾದಾನದ ದಕ್ಷಿಣೆಯಾಗಿ ಕೌಸ್ತುಭಮಣಿಯನ್ನು ಕೊಡುತ್ತಾನೆ. ಐರಾವತ ಮತ್ತು ಉಚ್ಚೈಶ್ರವಸ್‌ಗಳನ್ನು ಇಂದ್ರನಿಗೂ, ಎಲ್ಲಾ ರತ್ನಗಳನ್ನು ಮತ್ತು ಔಷಧಿಗಳನ್ನು ಮೇರು–ಮಂದರ ಪರ್ವತಗಳಿಗೂ, ಧನವನ್ನು ಕುಬೇರನಿಗೂ, ಪಾಶ ಮತ್ತು ವಾರುಣಿಯನ್ನು ವರುಣನಿಗೂ, ಅಂಕುಶವನ್ನು ವಾಯುವಿಗೂ, ಕೃಪಾಣವನ್ನು ನಿಋತಿಗೂ, ದಂಡವನ್ನು ಯಮನಿಗೂ, ವಿಷವನ್ನು ವಾಸುಕಿ ಮುಂತಾದ ನಾಗಗಳಿಗೂ, ಅಮೃತವನ್ನು ದೇವತೆಗಳ ಪರವಾಗಿ ಅಗ್ನಿಗೂ ಕೊಡುತ್ತಾನೆ. ಕೊನೆಗೆ ಶಿವನನ್ನು ಸ್ತುತಿಸಿ, ಅವನ ಕಾರಣದಿಂದ ತಾನು ದಾನಿಯಾದನೆಂದು ತೃಪ್ತಿಗೊಳ್ಳುತ್ತಾನೆ. ಕೊನೆಗೆ ಭರತವಾಕ್ಯದಲ್ಲಿ 'ರಾಜರು ಔದಾರ್ಯ ಮತ್ತು ಶೌರ್ಯವನ್ನು ಹೊಂದಲಿ, ಜನರು ಸನ್ಮಾರ್ಗದಲ್ಲಿ ಹೋಗಲಿ, ವೃಕ್ಷಗಳು ಮಳೆಯಿಂದ ಬೆಳೆಯಲಿ ಮತ್ತು ಕವಿಗಳು ಸಾರಸ್ವತೋತ್ಸವದಲ್ಲಿ ತೊಡಗಲಿ' ಎಂದು ಆಶಿಸಿ ಸಮವಕಾರಕ್ಕೆ ಅಂತ್ಯ ನೀಡುತ್ತಾನೆ.

ವಿಶ್ಲೇಷಣೆ : ನಾಂದಿಶ್ಲೋಕದಲ್ಲಿ, ಶಿವನನ್ನು ಸಮುದ್ರಕ್ಕೆ ಹೋಲಿಸಿ, ಅವನ ಆಶೀರ್ವಾದವನ್ನು ಕೋರುವ ಸುಂದರ ಪದ್ಯದಿಂದ ಕವಿಯು ರೂಪಕವನ್ನು ಆರಂಭಿಸಿದ್ದಾನೆ. ಶಿವ ಮತ್ತು ಸಮುದ್ರ ಇವರಿಬ್ಬರೂ ಗಂಗೆಯನ್ನು ಮತ್ತು ಚಂದ್ರನನ್ನು ಧರಿಸಿದ್ಧಾರೆ. ಶಿವನು ಹಣೆಗಣ್ಣಲ್ಲಿ ಅಗ್ನಿಯನ್ನು ಧರಿಸಿದರೆ, ಸಮುದ್ರನು ವಡವಾಗ್ನಿಯನ್ನು ಹೊಂದಿದ್ದಾನೆ. ಇಬ್ಬರೂ ವಿಷವನ್ನು ಹೊಂದಿದ್ದು, ಗುಣಗಳೆಂಬ ರತ್ನಗಳಿಂದ ರಾರಾಜಿಸುತ್ತಾರೆ. ಹೀಗಿರು ಶಿವನು ಸಮುದ್ರದಂತೆ ನಿಮ್ಮ ಐಶ್ವರ್ಯವನ್ನು ವರ್ಧಿಸಲಿ " ಎಂದು ಆಶೀರ್ವಾದಪೂರ್ವಕ ಮಂಗಲವನ್ನು ಮಾಡಿದ್ದಾನೆ. ಇಲ್ಲಿ ಸಮುದ್ರದ, ಗಂಗೆಯ, ಚಂದ್ರನ ನಾಮೋಲ್ಲೇಖನವಿದ್ದು, ಶ್ರೀ ಎಂಬ ಪದದಿಂದ ಲಕ್ಷ್ಮಿಯ ಸೂಚನೆಯೂ ಇದೆ. ಎರಡನೇ ಶ್ಲೋಕದಲ್ಲಿ 'ಮಂದರಾದ್ರಿಯ ಶಿಖರಗಳಿಂದ ಎಲ್ಲಾ ಕಡೆಯೂ ಕಲ್ಲೋಲಗೊಳಿಸಿ, ಭಯದಿಂದ ಲಕ್ಷ್ಮಿಯು ನಾರಾಯಣನನ್ನು ಆಲಿಂಗಿಸುವಂತೆ ಮಾಡಿದ ಸಮುದ್ರದ ಅಲೆಗಳು ನಿಮ್ಮನ್ನು ರಕ್ಷಿಸಲಿ' ಎಂದು ಹೇಳಿ ರೂಪಕದ ಇತಿವೃತ್ತವನ್ನು ಸೂಚಿಸುತ್ತಾನೆ.

ಪ್ರಸ್ತಾವನೆಯಲ್ಲಿ ಸೂತ್ರಧಾರ ಮತ್ತು ಸ್ಥಾಪಕರು ಬಂದು, ಸಂವಾದ ನಡೆಸುತ್ತಾ 'ಬೆಳಗಿನ ಜಾವದ ಬ್ರಾಹ್ಮೀ ಮುಹೂರ್ತದಲ್ಲಿ,

ಹನ್ನೆರಡು ಸೋದರರಿಗೆ ಒಳಿತಾಗಲೆಂದು ಪ್ರಾರ್ಥಿಸುತ್ತೇನೆ' ಎಂದು ಸೂತ್ರಧಾರನು ಎನ್ನುತ್ತಾನೆ. ಇಲ್ಲಿ, ಸಮವಕಾರದಲ್ಲಿ ಇರಬೇಕಾದ 12 ಜನ ನಾಯಕರ ಸೂಚನೆಯಿದೆ. 'ಹನ್ನೆರಡು ಆದಿತ್ಯರು ಹನ್ನೆರಡು ಮಾಸಗಳನ್ನು ಬೆಳಗುವಂತೆ, ನಮಗೆಲ್ಲರಿಗೂ ಸಮುದ್ರದಂತಿರುವ ಪರಮರ್ದಿದೇವ ರಾಜನು ಮನೋಭಿಲಾಷೆಗಳನ್ನು ಈಡೇರಿಸಲಿ', ಎಂದು ಸ್ಥಾಪಕನು ಆಶಿಸುತ್ತಾನೆ. समुद्रादेव सर्वे मनोरथाः निर्वहन्ति (ಸಮುದ್ರದಿಂದಲೇ ಎಲ್ಲಾ ಮನೋರಥಗಳೂ ಸಿದ್ಧಿಸುತ್ತವೆ) ಎಂದು ನೇಪಥ್ಯದಲ್ಲಿ ಕೇಳಿದಾಗ ಪದ್ಮಕನ ಆಗಮನವನ್ನು ಸೂತ್ರಧಾರನು ಸೂಚಿಸಿ ಎಲ್ಲರೂ ನಿರ್ಗಮಿಸುತ್ತಾರೆ. ಪ್ರಸ್ತಾವನೆಯಲ್ಲಿ ಮುದ್ರಾಲಂಕಾರದಿಂದ ಕಥಾವಸ್ತುವನ್ನು ಸೂಚಿಸಿದ್ದಾನೆ.

ಹೇಗೆ ಈ ರೂಪಕದಲ್ಲಿ ಅಸಮಾನ್ಯವಾದ ಅಲೌಕಿಕ ವಸ್ತುಗಳನ್ನು ತರುತ್ತಿದ್ದರೋ ತಿಳಿಯದು. ಉಳಿದ ಇವನ ರೂಪಕಗಳಂತೆ, ಇದನ್ನು ಪ್ರಯೋಗಿಸಲು ಬರೆದದ್ದು ಎಂದು ಇವನೇನು ಹೇಳಿಕೊಂಡಿಲ್ಲ. ಲಕ್ಷಣಕ್ಕೆ ಹೊಂದುವಂತೆ ಉತ್ತಮ ಕಥಾವಸ್ತುವನ್ನು ಹುಡುಕಿ ಬರೆದಿರುವುದು ಸ್ತುತ್ಯ. ಆ ಕಾಲದಲ್ಲಿ ಪ್ರಚಲಿತವಾದ ವಿಶಿಷ್ಟ ಪದಗಳ ಬಳಕೆ ಮತ್ತು ಹಾಸ್ಯವು ಜನರಂಜಕವಾಗಿದೆ. ಚಿತ್ರಪಟದ ಕಲ್ಪನೆ, ಸಮುದ್ರನು ವಸ್ತುಗಳನ್ನು ಹಂಚುವದರ ಕಲ್ಪನೆ, ಗರುಡನ ಮಾರುವೇಷದ ಪಾತ್ರ, ಸಮುದ್ರದಿಂದ ಎದ್ದು ಬರುವ ಸುವಸ್ತುಗಳ ಅನುಕ್ರಮ, ಶುಕ್ರಾಚಾರ್ಯನ ಕಪಟಟೆಯಿಂದ ಮೊದಲ್ಗೊಂಡೂ ಇಡಿಯ ಕಥಾನಕದ ರೀತಿಯೇ ಹೊಸತಾದವು. ಪುರಾಣದ ಸಮವಕಾರ ಕಥೆಗಿಂತ ಸಾಕಷ್ಟು ಭಿನ್ನವಾಗಿದ್ದು ಕವಿಯ ಕಲ್ಪನಾಸ್ವಾತಂತ್ರ್ಯವೇ ಮಿಗಿಲಾಗಿ ಈ ರೂಪಕದಲ್ಲಿ ಪಾತ್ರ ವಹಿಸಿ ಎಂದಿನ ಸಮುದ್ರಮಥನ ಕಥೆಗಿಂತ ಭಿನ್ನವಾಗಿ ನಿಲ್ಲುವಂತೆ ಮಾಡಿದೆ. ಅಂತೆಯೇ ಭಾಷಾ ಸೌಂದರ್ಯ ಮತ್ತು ಅನೇಕ ಪ್ರಾಕೃತ ಶ್ಲೋಕಗಳ ರಚನೆ ನಾವೀನ್ಯವನ್ನು ತೋರುತ್ತದೆ.

ತ್ರಿಪುರದಾಹ – ಡಿಮ

ಲಕ್ಷಣವಿಚಾರ:

प्रख्यातवस्तुविषयः प्रख्यातोदात्तनायकश्चैव | षड्रसलक्षणयुक्तश्चतुरङ्को वै डिमः कार्यः ||84

शृङ्गारहास्यवर्जं शेषैः सर्वैः रसैः समायुक्तः | दीप्तरसकाव्ययोनिर्नानाभावोपसंपन्नः ||85

निर्घातोल्कापातैरुपरागेणेन्दुसूर्ययोर्युक्तः । युद्धनियुद्धाघर्षण-सम्फेटकृतश्च कर्तव्यः ||86

मायेन्द्रजालबहलो बहूपस्तोत्थानयोगयुक्तश्च । देवभुजगेन्द्रराक्षसयक्षपिशाचावकीर्णश्च ||87

षोढशनायकबहुल: सात्वत्यारभटीवृत्तिसंपन्नः । कार्योडिमः प्रयत्नान्नानाश्रयभावसंपन्नः||88

(ನಾಟ್ಯಶಾಸ್ತ್ರ, 18ನೇ ಅಧ್ಯಾಯ)

ಭರತನ ನಾಟ್ಯಶಾಸ್ತ್ರದಲ್ಲಿ ವಿವರಿಸಿರುವ ರೂಪಕಪ್ರಕಾರಗಳಲ್ಲಿ ಒಂದಾದ ಡಿಮದ ಲಕ್ಷಣವು ಈ ಮೇಲಿನಂತೆ ಕೊಡಲ್ಪಟ್ಟಿದೆ. ಇದರ ಪ್ರಕಾರ– ಪ್ರಸಿದ್ಧವಾದ ಕಥಾವಸ್ತುವಿದ್ದು, ಪ್ರಖ್ಯಾತನಾದ ಉದಾತ್ತ ನಾಯಕನಿರಬೇಕು. ನಾಟಕ ಎಂಬ ರೂಪಕಪ್ರಕಾರವನ್ನು ಹೋಲುವ, ಆದರೆ, ಕೇವಲ ಸಂಧಿಗಳ ಮತ್ತು ರಸಗಳ ಸಂಖ್ಯೆಯಲ್ಲಿ ನ್ಯೂನತೆಯನ್ನು ಹೊಂದಿರುವ ಡಿಮವು ಆರು ರಸಗಳನ್ನೊಳಗೊಂಡಿದೆ. ಇಲ್ಲಿ ಶೃಂಗಾರ ಮತ್ತು ಹಾಸ್ಯ ರಸಗಳು ಕಾಣುವುದಿಲ್ಲ. "ದೀಪ್ತರಸ" ಎಂದು ಲಕ್ಷಣದಲ್ಲಿ ಹೇಳುವುದರಿಂದ ಶಾಂತರಸದ ಸೂಚನೆ ಇರಬಹುದು.[1] ಅನೇಕ ಭಾವಗಳನ್ನು ಹೊಂದಿದ್ದು, ಇದರಲ್ಲಿ ಬಿರುಗಾಳಿ, ನಾಶ, ಉಲ್ಕಾಪಾತ, ಸೂರ್ಯಚಂದ್ರರ ಗ್ರಹಣ, ಯುದ್ಧ, ನಿಯುದ್ಧ, ಮಾಯಾ, ಇಂದ್ರಜಾಲ ಮೊದಲಾದ ಘಟನಾವಳಿಗಳು

---

[1] पर्ययेण शान्तस्य प्रयोगः स्यादित्याह दीप्तरसेन (ಅಭಿನವಭಾರತೀ)

ಹಾಗೂ ದೇವ–ಸರ್ಪ–ರಾಕ್ಷಸ–ಯಕ್ಷ–ಪಿಶಾಚ ಇತ್ಯಾದಿ ಅನೇಕರ ಉಪಸ್ಥಿತಿ ಕಾಣುತ್ತದೆ. ಹದಿನಾರು ನಾಯಕರುಗಳಿದ್ದು, ಅನೇಕ ದೇವತೆಗಳಿರುವ ಕಾರಣ ಸಾತ್ವತೀ ಮತ್ತು ಆರಭಟೀ ವೃತ್ತಿಗಳು ಮಾತ್ರ ಇರುತ್ತವೆ. "ಡಿಮ" ಎಂಬ ಪದವು ಡಿಂಬ ಮತ್ತು ವಿದ್ರವ ಪದಗಳಿಗೆ ಪರ್ಯಾಯವಾಚಿಯಾಗಿದೆ. ಆದ್ದರಿಂದ ಇಲ್ಲಿ ಕೋಲಾಹಲ, ಗಲಾಟೆ, ಗದ್ದಲಗಳು ಕಾಣುತ್ತವೆ. ಇದರಲ್ಲಿ ನಾಲ್ಕು ಅಂಕಗಳಿದ್ದು, ಸಮವಕಾರದಂತೆ ಇಲ್ಲೂ ಅಂಕಗಳು ಸ್ವತಂತ್ರವಾಗಿರುತ್ತವೆ– ಎಂದು ಅಭಿನವಗುಪ್ತನು ತಿಳಿಸುತ್ತಾನೆ.

ಲಕ್ಷಣವನ್ನು ತಿಳಿಸುವಲ್ಲಿ, ನಾಟ್ಯದರ್ಪಣವು ಭರತಮುನಿಯನ್ನೇ ಅನುಸರಿಸಿದರೂ, ಕೆಲವು ವ್ಯತ್ಯಾಸಗಳನ್ನು ಕಾಣಬಹುದು.

अशान्त-हास्य-शृङ्गार-विमर्शः ख्यातवस्तुकः | रौद्रमुख्यश्चतुरङ्कः सेन्द्रजालरणो डिमः ||86

ಇದರ ಪ್ರಕಾರ ಶಾಂತರಸವು ಇಲ್ಲಿರಬಾರದು. ಕರುಣೆಯಿಂದ ಶಾಂತರಸವು ಉತ್ಪತ್ತಿಯಾಗುವುದರಿಂದ, ಕರುಣೆಯೂ ಇಲ್ಲಿ ಇರಬಾರದು. ರೌದ್ರರಸವೇ ಪ್ರಧಾನವಾಗಿರಬೇಕು. ಉಳಿದ ರಸಗಳು ಅಂಗರಸಗಳಾಗುತ್ತವೆ. ನಾಲ್ಕು ಅವಸ್ಥೆಗಳು, ನಾಲ್ಕುಸಂಧಿಗಳು[1], ನಾಲ್ಕು ದಿನದ ಘಟನೆಗಳು, ಹಾಗಾಗಿ ನಾಲ್ಕು ಅಂಕಗಳು ಇಲ್ಲಿ ಕಾಣಸಿಗುತ್ತವೆ. ಸೂರ್ಯ ಚಂದ್ರ ಮುಂತಾದವರನ್ನು ತೋರಲು ಲೇಪ್ಯ (ಅಚ್ಚು), ಮರ, ಕಲ್ಲುಗಳನ್ನು ಉಪಯೋಗಿಸಿ ಪ್ರತಿಮೆಗಳನ್ನು ಹಿಂದಿನಕಾಲದಲ್ಲಿ ಮಾಡುತ್ತಿರಬಹುದು. ಇಲ್ಲಿ ಧೀರೋದ್ಧತನಾಯಕರೇ ಇರುತ್ತಾರೆ" ಎಂದು ಸೇರಿಸುತ್ತಾರೆ.

ಐತಿಹಾಸಿಕವಾದ ವಿಶೇಷತೆ : ವತ್ಸರಾಜನನ್ನೇ ಡಿಮ ರೂಪಕರಚನೆಯ ಪ್ರವರ್ತಕನೆಂದು ಕರೆಯಬಹುದು. ಏಕೆಂದರೆ, ಇತರ ಡಿಮಗಳು ಅನಂತರದ ಕಾಲದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಅವುಗಳಲ್ಲಿ ವೆಂಕಟವರ್ಯನ 'ಕೃಷ್ಣ ವಿಜಯ' ಮತ್ತು ರಾಮಕೃಷ್ಣ ಕವಿಯ 'ಮನ್ಮಥೋನ್ಮಂಥನ' ಪ್ರಮುಖವಾದವು.[2]

ಕಥಾನಕ: ನಾಂದಿಯ ನಂತರ ಸೂತ್ರಧಾರನು ಪರಮರ್ದಿರಾಜನ ದಾನಶೀಲತೆಯನ್ನು ಕೊಂಡಾಡುತ್ತಾನೆ. ಪಾರಿಪಾರ್ಶ್ವಕನು, "ನೀನು ದಾನವನ್ನು ತೆಗೆದುಕೊಂಡರೂ, ದಾನವನ್ನು ಕೊಡುವುದಿಲ್ಲವಲ್ಲ! ಲಕ್ಷ್ಮಿಯು ವೃದ್ಧಿಹೊಂದಿ ರಕ್ಷಿಸಲ್ಪಟ್ಟರೂ ಅವಳನ್ನು ದಾನಮಾಡದಿದ್ದರೆ ಬಂಜೆಯಾದ ಹಸುವಿನಂತೆ ಮನೆಯವರಿಗೆ ಕಷ್ಟ ಕೊಡುವವಳಾಗುತ್ತಾಳೆ" ಎಂದು ಟೀಕಿಸುತ್ತಾನೆ. ಅದಕ್ಕೆ ಸೂತ್ರಧಾರನು "ಈಗ ಸೂರ್ಯಚಂದ್ರರ ಗ್ರಹಣಕಾಲವಾದ್ದರಿಂದ,[3] ಈಗ ನನ್ನ ಮಹಾದಾನವನ್ನು ನೋಡು" ಎನ್ನುತ್ತಾನೆ. ಪಾರಿಪಾರ್ಶ್ವಕನು "ಬಾಹುಹೀನನಾದ ರಾಹುವು ಪುನಃಪುನಃ ಸೂರ್ಯಚಂದ್ರರನ್ನು ಪೀಡಿಸುತ್ತಾನೆ. ದೇವತೆಗಳೂ ತ್ರಿಪುರನಿಂದ ಭೀತರಾಗಿ ಪಾತಾಳವನ್ನು ಸೇರಿದ್ದಾರೆ. ಬಲವಂತನಾದ ರಾಹುವಿನ ಬಂಧವನ್ನು ಧ್ವಂಸಮಾಡಿ, ಇವರನ್ನು ಕಾಪಾಡುವ ಬಲವಂತನಾರಿದ್ದಾನೆ?" ಎಂದು ಕೇಳಲು, ತೆರೆಯ ಹಿಂದಿನಿಂದ "ಇದು ಆಗಲೇಬೇಕು... ಚಾರಣರು ವಿಷದ ಬಳ್ಳಿಯನ್ನು ದೋಹದದಿಂದ ವರ್ಧಿಸಿದರೆ, ಬಲಿಷ್ಠರು ದುರ್ಬಲರನ್ನು ಸಾಯಿಸಿಯೇ ತೀರುತ್ತಾರೆ" ಎಂದು ಕೇಳಿಬರುತ್ತದೆ. ಯಾರು ಈ ರೀತಿ ಕೋಪಗೊಳುತ್ತಿರುವುದು ಎಂದು ನೋಡಿದಾಗ, ಆಗ ನಾರದ ಮುನಿಗಳು ಎಂಬುದಾಗಿ ತಿಳಿಯುತ್ತದೆ. ಸೂತ್ರಧಾರನು ಅವರನ್ನು ಹೀಗೆ ಉಪಹಾಸ ಮಾಡುತ್ತಾನೆ –"ಇವರು ವೀಣೆಯನ್ನು ಶ್ರುತಿಗೆ ಸರಿಯಾಗಿ ನುಡಿಸುವುದಿಲ್ಲ.

---

[1] ನಿಯತಾಪ್ತಿ ಎಂಬ ಅವಸ್ಥೆ ಮತ್ತು ವಿಮರ್ಶ ಎಂಬ ಸಂಧಿಯು ಇಲ್ಲಿ ಕಾಣುವುದಿಲ್ಲ. ಮುಖ, ಪ್ರತಿಮುಖ, ಗರ್ಭ ಮತ್ತು ಅವಮರ್ಶ ಸಂಧಿಗಳು ಇರುವವು. ಅಂಕಾವತಾರ ಎಂಬ ಅರ್ಥೋಪಕ್ಷೇಪಕವು ಇರುವುದರಿಂದ, ಇಲ್ಲಿ ಯಾವ ಪಾತ್ರಗಳು ಅಂಕದ ಕೊನೆಯಲ್ಲಿ ನಿರ್ಗಮಿಸುವವೋ, ಅದೇ ಪಾತ್ರಗಳು ಮುಂದಿನ ಅಂಕವನ್ನು ಆರಂಭಿಸುವವು. ಚೂಲಿಕ ಮತ್ತು ಅಂಕಾಸ್ಯ ಎಂಬ ಅರ್ಥೋಪಕ್ಷೇಪಗಳು ಯುದ್ಧಾದಿ ವರ್ಣನೆಯಲ್ಲಿ ಉಪಯುಕ್ತವಾಗಿವೆ. ಪ್ರಸ್ತುತ ಡಿಮದಲ್ಲಿ ಶುದ್ಧ ಮತ್ತು ಮಿಶ್ರ ವಿಷ್ಕಂಭಕಗಳು ಕಾಣುತ್ತವೆ. ನೀಚಪಾತ್ರಗಳಿಲ್ಲದ ಕಾರಣ, ಪ್ರವೇಶಕವು ಇಲ್ಲಿ ಅಸಂಭವ.

[2] ಸಂಸ್ಕೃತ ಸಾಹಿತ್ಯದ ಇತಿಹಾಸ, ಆಚಾರ್ಯ ಬಲದೇವ ಉಪಾಧ್ಯಾಯ, (ಪುಟ ಸಂಖ್ಯೆ 943).

[3] ಇಲ್ಲಿ ನಾಟ್ಯಶಾಸ್ತ್ರದ ಲಕ್ಷಣದಲ್ಲಿ ಹೇಳಿರುವ ಗ್ರಹಣದ ಉಲ್ಲೇಖವು ಕಾಣುವುದು.

ಇವರ ಸ್ವರಗಳು ಮತ್ತು ಸಾಮಗಳೂ ಸುಖವನ್ನು ಕೊಡುವುದಿಲ್ಲ. ಇವರ ಆಲಾಪಗಳು ಪರಸ್ಪರ ಕ್ರೂರ ಮತ್ತು ಕೋಪಗಳಿಂದ ವರಟಾಗಿವೆ. ಕೇವಲ ಕಲಿಯನ್ನು ಸಂತೋಷಗೊಳಿಸಲು ನಾರದಮುನಿಗಳು ಪ್ರಯತ್ನಿಸುತ್ತಾರೆ (ಶ್ಲೋಕ 7). ಜಗಳವನ್ನು ಬಯಸುವ ಇವರು ಕೋಪಿಷ್ಠರೂ ಕೂಡ ಆಗಿದ್ದಾರೆ. ಇವರಿಗೆ ದೂರದಿಂದಲೇ ನಮಸ್ಕಾರ. ನಾವು ನಮ್ಮ ಕೆಲಸವನ್ನು ನೋಡಿಕೊಳ್ಳೋಣ" ಎಂದು ಹೇಳಿ, ಅವರಿಬ್ಬರೂ ರಂಗದಿಂದ ನಿಷ್ಕ್ರಮಿಸಿ ಪ್ರಸ್ತಾವನೆಯನ್ನು ಮುಗಿಸುತ್ತಾರೆ.

ನಾರದರು ರಂಗದ ಮೇಲೆ ಬಂದು, ಯಾವ ನಟರೂ ಇಲ್ಲದಿರುವುದನ್ನು ಕಂಡು, ನಟನ ಧಾರ್ಷ್ಟ್ಯ ಮತ್ತು ಸುಳ್ಳನ್ನು ನಿಂದಿಸಿ, "ಶಿವನ ತ್ರಿಶೂಲವಿರಲು, ಕೃಷ್ಣನ ಚಕ್ರವಿರಲು ದೈತ್ಯರಿಗೆಲ್ಲಿಯ ಧೈರ್ಯ" ಎಂದು ಹೇಳಿ, "ನಟನಾದರೋ, 'ರಾಹುವಿಗೂ ವೀರಗುಣವಿದೆ ಎನ್ನುತ್ತಾನೆ" ಎಂದು ಉಪಹಾಸ ಮಾಡುತ್ತಾನೆ. ತಕ್ಷಣವೇ ನೇಪಥ್ಯದಿಂದ ನಾರದನನ್ನೇ ಕುರಿತು, "ಬ್ರಾಹ್ಮಣ! ನಾಲಿಗೆಯ ಮೇಲೆ ಹಿಡಿತವಿಲ್ಲದಿರುವುದು ನಿಮ್ಮ ಸ್ವಭಾವ! ಇಂದ್ರನು ಸ್ವರ್ಗದಲ್ಲಿದ್ದಾನೆ. ವಿಷ್ಣುವು ಸಾಗರದಲ್ಲಿದ್ದಾನೆ. ಶಿವನು ಪ್ರೇತಭೂಮಿಯಲ್ಲಿದ್ದಾನೆ. ಸುರರಿಗೆ ಒಳ್ಳೆಯ ಶೌರ್ಯದ ಮಾತುಗಳು ಮಾತ್ರ ಒಪ್ಪುತ್ತವೆ" (ಶ್ಲೋಕ 9) ಎಂದು ಕೇಳಿಬರುತ್ತದೆ. ಅದನ್ನು ರಾಹುವು ಹೇಳಿದನೆಂದು ಅರಿತು, ಅವನ ಮುಂದೆ ನಾರದರು ದೇವತೆಗಳನ್ನು ಅವಹೇಳನ ಮಾಡುತ್ತಾರೆ. ರಾಹುವಿಗೆ ಶರೀರವಿಲ್ಲದೆ ಕೇವಲ ತಲೆ ಇರುವುದನ್ನೂ ಉಪಹಾಸ ಮಾಡುತ್ತಾರೆ. ಕೋಪಗೊಂಡ ರಾಹುವು "ನಿನ್ನ ವಿಪ್ರೋಚಿತ ಚಾಪಲ್ಯವನ್ನು (ಸುಮ್ಮನೆ ಮಾತಾಡುವುದನ್ನು) ಯಾವಾಗ ಬಿಡುತ್ತೀಯ? ನಿನ್ನ ಮಾತುಗಳಿಂದ ದೇವತೆಗಳಿಗೂ ದಾನವರಿಗೂ ಯುದ್ಧವನ್ನು ಮಾಡಿಸು. ನಾನು ಸೂರ್ಯಚಂದ್ರರನ್ನು ತಿನ್ನಲು ಹೋಗುತ್ತೇನೆ" ಎಂದು ಹೇಳಿ ಹೊರಡುವನು. ನಾರದರೂ 'ತಾನೀಗ ಶಿವನಿಗೆ ಕೋಪವನ್ನು ತರಿಸುತ್ತೇನೆ' ಎಂದು ತಿಳಿಸಿ ಹೊರಡುತ್ತಾರೆ. ಇದರೊಂದಿಗೆ ವಿಷ್ಕಂಭಕವು ಸಮಾಪ್ತವಾಗುತ್ತದೆ. ಮುಂದಿನ ದೃಶ್ಯದಲ್ಲಿ ದೇವತೆಗಳೆಲ್ಲರೂ ಶಿವನ ಬಳಿ ಸೇರಿರುತ್ತಾರೆ. ನಾರದನು ಶಿವನನ್ನು ಉದ್ವೇಜಿಸಲು, "ಶಿವನೇ! ನೀನು ತಪಸ್ವಿಯ ಜೀವನವನ್ನೇ ನಡೆಸು, ಏಕೆಂದರೆ, ದಾನವರು ಯುದ್ಧದಲ್ಲಿ ಘೋರರು" ಎಂದು ವ್ಯಂಗ್ಯ ನುಡಿಯುತ್ತಾನೆ. ಇದರಿಂದ ಕೋಪಗೊಂಡ ಶಿವನನ್ನು ಗಮನಿಸಿ ಇಂದ್ರನು ದಾನವರ ಬಗ್ಗೆ ತಿಳಿಸುತ್ತಾನೆ. ಶಿವನು, "ನಾನೆಂದೂ ಸ್ವಪ್ನದಲ್ಲಿಯೂ ಕೂಡ ದೇವತೆಗಳ ಕಾರ್ಯದಲ್ಲಿ ನಿರ್ಲಕ್ಷತೆಯನ್ನು ತೋರುವುದಿಲ್ಲ" ಎಂದು ಇಂದ್ರನನ್ನು ಸಮಾಧಾನ ಪಡಿಸುತ್ತಾನೆ. ಅಷ್ಟು ಹೊತ್ತಿಗೆ ಯಮ, ಅಗ್ನಿ, ವಾಯು, ವರುಣ, ಕುಬೇರ ಮತ್ತು ನೈಋತರು– "ತಾವೇ ದೈತ್ಯರ ಧ್ವಂಸ ಮಾಡಲು ಸಮರ್ಥರಾದಾಗ, ಇನ್ನೇಕೆ ಮಹಾತ್ಮನಾದ ಶಿವನಿಗೆ ತೊಂದರೆ" ಎಂದು ಚರ್ಚಿಸುತ್ತಾರೆ. "ಆ ಸುರವೈರಿ ಯಾರು" ಎಂದು ನಂದಿಯು ಪ್ರಶ್ನಿಸಲು, ಬೃಹಸ್ಪತಿಯು, "ಅವನು ಅಂತರಿಕ್ಷದಲ್ಲಿ ಚಲಿಸುತ್ತಾನೆ ಮತ್ತು ಅವನ ಹೆಸರು ತ್ರಿಪುರ ಎಂದು. ಅವನು ಧೂಮಕೇತುವಿನ ತರಹ ಅಂತರಿಕ್ಷದಲ್ಲಿದ್ದರೂ, ಭೂಮಿ ಮತ್ತು ರಸಾತಳಗಳನ್ನು ವ್ಯಾಪಿಸುತ್ತಾನೆ" ಎಂದು ತಿಳಿಹೇಳುತ್ತಾನೆ. ಇಲ್ಲಿ ನಾಟ್ಯಶಾಸ್ತ್ರದ ಲಕ್ಷಣದಲ್ಲಿ ತಿಳಿಸಿರುವ ಧೂಮಕೇತುವಿನ ಪ್ರಭಾವದ ಸನ್ನಿವೇಶವನ್ನು ಕಲ್ಪಿಸುವಂತೆಯೇ ಉಲ್ಲೇಖವನ್ನು ಕಾಣಬಹುದು.

ಅಷ್ಟರಲ್ಲಿ ಪೃಥ್ವಿಯೂ ಅಲ್ಲಿಗೆ ಬಂದು, "ಅಷ್ಟ ದಿಗ್ಗಜಗಳೂ, ಆದಿಶೇಷನೂ ಈವರೆಗೆ ತನ್ನನ್ನು ಹೊತ್ತಿದ್ದರು. ಈಗ ನನಗೆ ಆಲಂಬನೆಯಿಲ್ಲ" ಎಂದು ಮರುಗುತ್ತಾಳೆ. ಆದಿಶೇಷನು ತಾನೇ ಭೂದೇವಿಯ ಆಶ್ರಯವನ್ನು ಕೋರುತ್ತಾನೆ. ಇಬ್ಬರೂ ಎಲ್ಲಾ ದೇವತೆಗಳಿರುವಲ್ಲಿ ಹೋಗಲು, ಹಿಮವಂತನೂ ಅಲ್ಲಿಗೆ ಬರುತ್ತಾನೆ. ಆನಂತರ ಧರ್ಮನು ಬರುತ್ತಾನೆ. ನಾರದರು ಕೃಷ್ಣನನ್ನು ಸ್ಮರಿಸಿದಾಕ್ಷಣ ಕಾರ್ತಿಕೇಯನು ಬಂದು, "ನಾನಿರುವವರೆಗೂ ಬೇರೊಬ್ಬರು ಹೇಗೆ ಸೇನಾನಾಯಕರಾಗುತ್ತಾರೆ?" ಎಂದು ಕೋಪಗೊಳ್ಳುತ್ತಾನೆ. ಶಿವನು ಅವನನ್ನು ಸಮಾಧಾನಗೊಳಿಸಿ, "ಕೃಷ್ಣನು ನಿನ್ನ ಚಿಕ್ಕಪ್ಪ ತಾನೇ" ಎಂದು ಹೇಳಿ, ಬ್ರಹ್ಮವಿಷ್ಣುಗಳ ಸಹಯೋಗದಿಂದಷ್ಟೇ ತ್ರಿಪುರನಾಶವಾಗುತ್ತದೆ ಎಂದು ತಿಳಿಸುತ್ತಾನೆ. ಇದರೊಂದಿಗೆ ಮೊದಲನೇ ಅಂಕವು ಮುಗಿದು ಎಲ್ಲರೂ ನಿಷ್ಕ್ರಮಿಸುತ್ತಾರೆ.

ಎರಡನೇ ಅಂಕದ ಮಿಶ್ರವಿಷ್ಕಂಭಕದಲ್ಲಿ,[1] ಅಲೀಕ (ಸುಳ್ಳು) ಮತ್ತು ವಿಪರೀತ (ವಿರುದ್ಧ) ಎಂಬ ಎರಡು ಪಾತ್ರಗಳ ಸಂವಾದವಿದೆ. ಅದರಲ್ಲಿ ವಿಪರೀತನು, "ಎಲ್ಲಾ ದೇವತೆಗಳೂ ಸೇರಿ ತ್ರಿಪುರನ ವಿರುದ್ಧ ಸಂಚುಮಾಡುತ್ತಿದ್ದಾರೆ" ಎಂದು ತಿಳಿಸಿದಾಗ, ಅಲೀಕನು, "ದೇವತೆಗಳ ಸಮ್ಮೇಲನವೆಂದರೆ, ಮೊಲಗಳ ಮೇಲನದಂತೆ" ಎಂದು ಉಪಹಾಸ ಮಾಡುತ್ತಾನೆ. ಅದಕ್ಕೆ ವಿಪರೀತನು "ಹೀಗೆ ಅವರನ್ನು ಉದಾಸೀನ ಮಾಡಬಾರದು. ನಾವು ನಾರದ, ವಿಷ್ಣು ಮತ್ತು ಶಿವರನ್ನು ದಾರಿತಪ್ಪಿಸೋಣ" ಎಂದು ನಿರ್ಧರಿಸಿ ಎಲ್ಲರೂ ನಿಷ್ಕ್ರಮಿಸುತ್ತಾರೆ.

ಮುಂದಿನ ದೃಶ್ಯದಲ್ಲಿ ನಾರದರು ಮತ್ತು ನಾರಾಯಣರು ಮಾತನಾಡುತ್ತಿದ್ದಾಗ, ನಂದಿಯು ಬಂದು, "ಶಿವನನ್ನೇಕೆ ಅಪಮಾನ ಮಾಡಿದೆ?" ಎಂದು ನಾರಾಯಣನನ್ನು ಬೈಯುತ್ತಾನೆ. ನಾರಾಯಣನಿಗೆ ಇದೆಲ್ಲಾ ಯಾರೋ ಮಾಯಾವಿಗಳ ಕಾರ್ಯ ಎಂದು ತಿಳಿಯುತ್ತದೆ. ಇಲ್ಲಿ ಲಕ್ಷಣರೀತ್ಯಾ ಮಾಯೆಯ ಪ್ರಯೋಗ ಕಾಣುತ್ತದೆ. ಬ್ರಹ್ಮನು ಕೂಡ ಕಪಟನಾರದನೊಂದಿಗೆ ಮಾತಾಡಿ ಬೇಸರಗೊಂಡಿರುತ್ತಾನೆ. ಕೊನೆಗೆ ನಾರದನು ಬ್ರಹ್ಮನನ್ನು ಆ ರೀತಿ ವರಗಳನ್ನು ಕೊಟ್ಟಿದಕ್ಕೆ ನಿಂದಿಸುತ್ತಾನೆ. ಬ್ರಹ್ಮನು "ಒಂದೇ ಬಾಣದಿಂದ ಮೂರು ಪುರಗಳನ್ನೂ ಒಮ್ಮೆಲೆ ನಾಶಮಾಡಬೇಕು" ಎಂಬುದೇ ಪರಿಹಾರವೆಂದು ಸೂಚಿಸುತ್ತಾನೆ. ಕೃಷ್ಣನು ದೇವತೆಗಳ ಸ್ಥಿತಿಯನ್ನು ನೋಡಿ, ಕೋಪಗೊಂಡು, ಇಂದ್ರಜಾಲದ ಮಾಯೆಯಿಂದ ಅಂಧಕಾರವನ್ನು ಎಲ್ಲೆಡೆ ವ್ಯಾಪಿಸಿ ದೇವತೆಗಳನ್ನು ಪಾತಾಳದಿಂದ ಹೊರಬರುವಂತೆ ಮಾಡುತ್ತಾನೆ ಮತ್ತು ದಾನವರನ್ನು ಸ್ವರ್ಗದಿಂದ ಮರಳುವಂತೆ ಮಾಡುತ್ತಾನೆ. ಇಲ್ಲಿ ಇಂದ್ರಜಾಲದ ಲಕ್ಷಣವೂ ಸಾಕಾರಗೊಳ್ಳುತ್ತದೆ. ಇದರೊಂದಿಗೆ ಎರಡನೇ ಅಂಕವು ಮುಗಿಯುತ್ತದೆ.

ಮೂರನೇ ಅಂಕದ ಪಾತ್ರಗಳ ಅನ್ವರ್ಥನಾಮಗಳು ಮೋಹಕವಾಗಿವೆ. ವಿಶದಾಶಯ (ಉತ್ತಮವಾದ ಅಥವಾ ನಿಶ್ಚಿತವಾದ ಆಸೆ ಉಳ್ಳವನು) ಮತ್ತು ಸ್ಫುಟಾಕ್ಷರ (ತೆರೆದುಕೊಂಡ ಅಥವಾ ವಿಸ್ತಾರವಾದ ಮಾತನಾಡುವವನು) ಎಂಬೀರ್ವರ ಸಂಭಾಷಣೆಯೊಂದಿಗೆ ಆರಂಭವಾಗುತ್ತದೆ. ಇಬ್ಬರೂ ಸರ್ವತಾಪ (ಎಲ್ಲರಿಗೂ ತೊಂದರೆ ಅಥವಾ ದು:ಖವನ್ನು ನೀಡುವವನು ಅಥವಾ ಎಲ್ಲವನ್ನೂ ಸುಡುವವನು) ಎಂಬ ದೈತ್ಯರಾಜನಲ್ಲಿ ಸೇವೆ ಸಲ್ಲಿಸುತ್ತಿದ್ದು, ತಮ್ಮ ಕಷ್ಟ ಸುಖಗಳನ್ನು ಪರಸ್ಪರ ತೋಡಿಕೊಳ್ಳುತ್ತಾರೆ. ಸ್ಫುಟಾಕ್ಷರನು 'ದೇವತೆಗಳು ಕೋಪಗೊಂಡು ನಿಮ್ಮ ನಗರವನ್ನು ಆಕ್ರಮಿಸುತ್ತಾರೆ' ಎಂದು ಸರ್ವತಾಪ ರಾಜನಿಗೆ ನಿವೇದಿಸುತ್ತಾನೆ. ಈ ಸತ್ಯವನ್ನು ಸಹಿಸದೆ ರಾಜನು ಉದ್ವಿಗ್ನನಾಗುತ್ತಾನೆ. ವಿಶದಾಶಯನು ರಾಜನ ಮಂತ್ರಿಯಾಗಿರುತ್ತಾನೆ. ಅವನು ಶುಕ್ರಾಚಾರ್ಯನಿಂದ ಕುಲವಿರುದ್ಧವಾದ, ಜ್ಞಾನವಿರುದ್ಧವಾದ, ನಾಮವಿರುದ್ಧವಾದ ಕೆಲಸ ಮಾಡಲು ಆದೇಶಿಸಲ್ಪಟ್ಟಿರುತ್ತಾನೆ. ಇಂದ್ರಜಾಲವನ್ನು ಮಾಡಿ ಬ್ರಹ್ಮ-ವಿಷ್ಣು-ಮಹೇಶ್ವರರನ್ನು ಅಮರಾವತಿಯನ್ನು ಬಿಡುವಂತೆ ಮಾಡಬೇಕೆಂದು ರಾಜನೂ ಈತನಿಗೆ ಆಜ್ಞಾಪಿಸಿರುತ್ತಾನೆ. ವಿಶದಾಶಯನಾದರೋ, "ಆದರೆ ಶಿವನ ವಿರುದ್ಧ ಏನು ಮಾಡಲು ಸಾಧ್ಯ?ಅವನೇ ನಮಗೆ ಶರಣು" ಎನ್ನುತ್ತಾನೆ. ರಾಜ ಮತ್ತು ವಿಶದಾಶಯನ ಸಂವಾದದಿಂದ ಇಂದ್ರಜಾಲದ ಪ್ರಭಾವವು ಆಗಲಿಲ್ಲವೆಂದೂ, ಶಿವನು ಕಾರ್ತಿಕೇಯನನ್ನು ತ್ರಿಪುರವನ್ನು ನಾಶಮಾಡಲು ನಿಯೋಗಿಸಿದನೆಂದೂ ಅವರಿಗೆ ತಿಳಿದುಬರುತ್ತದೆ. ತನ್ಮಧ್ಯೆ "ನಾನೇ ಹೋಗಿ ದೇವತೆಗಳನ್ನು ಸದೆಬಡಿಯುತ್ತೇನೆ" ಎಂದು ಸರ್ವತಾಪನು ಹೇಳಲು, ನೇಪಥ್ಯದಲ್ಲಿ ಲೋಹಮಯವಾದ ಸೂರ್ಯತಾಪನಿಂದ (ಸರ್ವತಾಪನ ಒಬ್ಬ ಸೋದರ) ರಕ್ಷಿಸಲ್ಪಟ್ಟ ನಗರವನ್ನು ಸೂರ್ಯನು ನಾಶಮಾಡಲು ಪ್ರಯತ್ನಿಸಿದನು ಎಂಬ ಯುದ್ಧದ ವಿವರಣೆಯು ತಿಳಿದುಬರುತ್ತದೆ; ಹಾಗೆಯೇ ಬೆಳ್ಳಿಯಿಂದ ಮಾಡಲ್ಪಟ್ಟ ಚಂದ್ರತಾಪನ (ಸರ್ವತಾಪನ ಮತ್ತೊಬ್ಬ ಸೋದರ) ನಗರವನ್ನು ಚಂದ್ರನು ಧ್ವಂಸಗೊಳಿಸಿದ ಕಥೆಯೂ ಸ್ಫುಟಾಕ್ಷರನಿಂದ ತಿಳಿದುಬರುತ್ತದೆ. ಜೊತೆಗೆ ಚಂದ್ರನ ಪ್ರಭಾವದಿಂದ ಹಿಮಮಯವಾಗಿ ಪರಿವರ್ತಿತವಾದ ಸ್ಫುಟಾಕ್ಷರನನ್ನು ರಕ್ಷಿಸಲು ರಾಜನು

---

[1] ನಡೆದುಹೋದ ಕಥಾಂಶವನ್ನು ಸಂಕ್ಷೇಪವಾಗಿ ಸೂಚಿಸುವುದು ವಿಷ್ಕಂಭಕ. ಇದನ್ನು ಪ್ರಧಾನಪಾತ್ರಗಳು ಮಾಡುವುದಿಲ್ಲ. ಮಧ್ಯಮಪಾತ್ರಗಳಿಂದಾದರೆ 'ಶುದ್ಧ ವಿಷ್ಕಂಭಕ'ವಾಗುತ್ತದೆ. ಮಧ್ಯಮನೀಚ ಪಾತ್ರಗಳೆರಡೂ ಸೇರಿ ಮಾಡುವುದಾದರೆ 'ಮಿಶ್ರ ವಿಷ್ಕಂಭಕ'ವಾಗುತ್ತದೆ.

ಆಗ್ನೇಯಾಸ್ತ್ರವನ್ನು ಬಳಸುತ್ತಾನೆ. ಇದರಿಂದ ಎಲ್ಲಾ ಕಡೆಯೂ ಬೆಂಕಿಯ ತಾಪವಾಗಿ, ಅದನ್ನು ನಿವಾರಿಸುವ ಹಾಸ್ಯಮಯ ಪ್ರಸಂಗವೂ ಕಾಣುತ್ತದೆ. ಅಷ್ಟರಲ್ಲಿ ನಂದಿ ಮತ್ತು ಗಣಗಳೊಂದಿಗೆ, ದೇವತೆಗಳ ಪರವಾಗಿ ಸೇನಾನಾಯಕನಾದ ಕಾರ್ತಿಕೇಯನು ಯುದ್ಧಕ್ಕೆ ಬಂದಿರುವ, ವಿಷಯವನ್ನು ತಿಳಿದು ರಾಜನು, "ಪಶುಪತೇ! ನೀನು ಯುದ್ಧಮಾಡದೆ ಈ ಬಾಲಕನನ್ನು ಕಳಿಸಿದ್ದೆಯಲ್ಲ!" ಎಂದು ಶಿವನನ್ನು ಉಪಹಾಸ ಮಾಡುತ್ತಾನೆ. ಇಲ್ಲಿಯ ಕೆಲವು ಶ್ಲೋಕಗಳಲ್ಲಿ (22–24) ಶ್ಲೇಷಾರ್ಥಗಳನ್ನು ಕೊಟ್ಟು,[1] ರಾಜ ಮತ್ತು ಕಾರ್ತಿಕೇಯರ ಸಂವಾದವನ್ನು ಕವಿಯು ಬಹು ಹೃದಯಂಗಮವಾಗಿ ವರ್ಣಿಸಿದ್ದಾನೆ. ಯುದ್ಧದ ಪ್ರಸಂಗದಲ್ಲಿ ಆರಭಟೀ ವೃತ್ತಿಗೆ ಅವಕಾಶವಿದೆ.

ನಂದಿಯು ಕಾರ್ತಿಕೇಯನಿಗೆ, ಶಿವನೇ ತ್ರಿಪುರನನ್ನು ನಾಶಮಾಡಲು ಸಮರ್ಥನಾದ್ದರಿಂದ, ಕೇವಲ ದೈತ್ಯರ ಸೈನ್ಯವನ್ನು ಮಾತ್ರ ನಾಶಮಾಡಲು ಸೂಚಿಸುತ್ತಾನೆ. ಆದರೆ ಎಲ್ಲಾ ದೈತ್ಯರೂ ಸತ್ತ ನಂತರ, ಅವರನ್ನು ಅಮೃತಕುಂಡದಲ್ಲಿ ಮುಳುಗಿಸಿ ಪುನಃ ಜೀವಂತಾರಾನ್ನಾಗಿ ಮಾಡುತ್ತಿರುವುದನ್ನು ನೋಡಿ, ಕುಮಾರನಾದ ಕಾರ್ತಿಕೇಯನು, ಅಮಿತಪೌರುಷವನ್ನು ತೋರಿಸಿ "ನನಗೆ ಈಗ ಯುದ್ಧದ ಆಸೆಯು ಪೂರ್ಣಗೊಳ್ಳುತ್ತಿದೆ" ಎನ್ನುತ್ತಾನೆ. ನಂದಿಯು "ಆಗ್ನೇಯಾಸ್ತ್ರದ ಪ್ರಭಾವದಿಂದ ಸ್ವರ್ಣದ ಚಕ್ಕೆಗಳಿಂದ ಈ ಅಮೃತಕುಂಡವನ್ನು ಮುಚ್ಚಿಬಿಡು. ಇದರಿಂದ ದೈತ್ಯರು ಪುನ: ಜೀವಂತವಾಗುವುದಿಲ್ಲ" ಎಂಬ ಸೂಚನೆಯನ್ನು ಕೊಡುತ್ತಾನೆ. ಇದರಂತೆ ಮಾಡಿದಾಗ ದೈತ್ಯರೆಲ್ಲಾ ಪಲಾಯನ ಮಾಡಲು, ವ್ಯಾಕುಲರಾದ ರಾಜ ಮತ್ತು ವಿಶದಾಶಯರು ದೈತ್ಯರ ಗುರುಗಳಾದ ಶುಕ್ರಾಚಾರ್ಯರನ್ನು ಸ್ಮರಿಸುತ್ತಾ ತಮ್ಮನ್ನು ಕಾಪಾಡಲು ಪ್ರಾರ್ಥಿಸುತ್ತಾರೆ. ಶುಕ್ರಾಚಾರ್ಯರು ಬಂದು, "ದಾನವರನ್ನು ರಕ್ಷಿಸುವೆನು. ಆದರೆ, ಶಿವನು ನನ್ನನ್ನು ಪುತ್ರನೆಂದು ಭಾವಿಸುವುದರಿಂದ, ನನ್ನ ಸೋದರನಾದ ಕಾರ್ತಿಕೇಯನನ್ನು ಕೂಡ ರಕ್ಷಿಸಬೇಕು" ಎನ್ನುತ್ತಾನೆ. ಅಷ್ಟರಲ್ಲಿ ನಾರದರು ಬಂದು, ಶಿವನ ಆಜ್ಞೆಯ ಮೇಲೆ ಯುದ್ಧವು ನಿಲ್ಲಬೇಕೆಂದು ತಿಳಿಸುತ್ತಾನೆ. ಎಲ್ಲರೂ ನಿರ್ಗಮಿಸುವುದರರೊಂದಿಗೆ ಮೂರನೆಯ ಅಂಕವು ಸಮಾಪ್ತವಾಗುವುದು.

ನಾಲ್ಕನೇ ಹಾಗೂ ಕೊನೆಯ ಅಂಕದಲ್ಲಿ, ವಿಶದಾಶಯನು ಶುಕ್ರಾಚಾರ್ಯರೊಂದಿಗೆ ಸಂಧಿಸುತ್ತಾನೆ. ಅವರಿಬ್ಬರೂ ಅಸಮಾಧಾನಕರವಾದ ಬೆಳಗಿನ ಜಾವದ ಬಗ್ಗೆ ಚರ್ಚಿಸುತ್ತಿರಲು, ತೆರೆಯ ಹಿಂದೆ ಒಂದು ಶ್ಲೋಕವು ಕೇಳಿಬರುತ್ತದೆ. "ನಮ್ಮ ಪುಣ್ಯಕರ್ಮದಿಂದ ಹದಿನಾರು ಒಂದೇ ಆಗಿದೆ. ಈಗ ಈ ಮೂರು ಐದನ್ನು ಸೇರುತ್ತವೆ" ಎಂದು. ಒಗಟಿನಂತೆ ಇರುವ ಈ ಶ್ಲೋಕವನ್ನು ಕೇಳಿ, "ಇದೇನು ಆಕಾಶಭಾಷಿತವೇ?" ಎಂದು ವಿಶದಾಶಯನು ಪ್ರಶ್ನಿಸಲು, ಶುಕ್ರಾಚಾರ್ಯರು ಇದಕ್ಕೆ ಉತ್ತರವನ್ನು ಹೀಗೆ ಕೊಡುತ್ತಾರೆ– "ಮಹೇಶನ ನೇತೃತ್ವದಲ್ಲಿ ಹರಿ, ಬ್ರಹ್ಮ, ಕಾರ್ತಿಕೇಯ, ಹಿಮವಾನ್, ಆದಿಶೇಷ, ಚಂದ್ರ, ಸೂರ್ಯ, ಧರ್ಮ, ಅಷ್ಟ ದಿಕ್ಪಾಲಕರು –ಹೀಗೆ 16 ಜನರೂ ತ್ರಿಪುರಾಸುರನ ವಧೆಗಾಗಿ ಕಟಿಬದ್ಧರಾಗಿದ್ದಾರೆ. ನಾನು ಸ್ವಪ್ನದಲ್ಲಿ ಸರ್ವತಾಪನು ಮರಣೋನ್ಮುಖನಾದದ್ದನ್ನು ಕಂಡಿದ್ದೇನೆ" ಎನ್ನುತ್ತಾನೆ. ವಿಷದಾಶಯನೂ ಕೂಡ "ಪಾಪಗಳಿಂದ ಪಕ್ವವಾದವರ ಮೇಲೆ ಶಿವನು ಶೀಘ್ರ ಕೋಪಗೊಳ್ಳುತ್ತಾನೆ" ಎಂದು ಮರುಗುತ್ತಾನೆ. ಶುಕ್ರಾಚಾರ್ಯನು ಅವನನ್ನು ಸಂತೈಸಿ "ಭಗವಂತನು ಅಚಿಂತ್ಯ ಚರಿತನು" ಎನ್ನುತ್ತಾನೆ. ನಾರದಾಗಮನವನ್ನು ಸೂಚಿಸಿ, ಇಬ್ಬರೂ ನಿಷ್ಕ್ರಮಿಸುತ್ತಾರೆ. ಹೀಗೆ ಶುದ್ಧ ವಿಷ್ಕಂಭಕವು ಸಮಾಪ್ತವಾಗುತ್ತದೆ.

ನಂತರ ಬ್ರಹ್ಮ ಮತ್ತು ನಾರದರು ಪ್ರವೇಶಿಸುತ್ತಾರೆ. ಬ್ರಹ್ಮನು ತಾನು ಕೊಟ್ಟ ವರದಿಂದಲೇ ಹೀಗಾಯಿತೆಂದು ಪಶ್ಚಾತ್ತಾಪಪಡಲು, ನಾರದರು "ಶಿವನ ರಥವೇ ಭೂಮಿ. ನೀವೇ ಸಾರಥಿ. ಹಿಮವಂತನೇ ಬಿಲ್ಲು, ಆದಿಶೇಷನೇ ಬಿಲ್ಲಿನ ಹಗ್ಗ, ತ್ರಿವಿಕ್ರಮನೇ ಬಾಣ.

[1] ತಾರಕ ಎಂದರೆ ತಾರಕಾಸುರ ಮತ್ತು ದಾಟಿಸುವವನು ; ಶರವಣ ಎಂದರೆ ಹುಲ್ಲು ಮತ್ತು ಬಾಣಗಳ ಗುರಿ; ಶಕ್ತಿ ಎಂದರೆ ಶಕ್ತ್ಯಾಯುಧ ಮತ್ತು ಪೌರುಷ

ಏಳು ವಾಯುಗಳೇ ಅದನ್ನು ಮುಂದೆ ಸಾಗಿಸುತ್ತವೆ. ಸೂರ್ಯಚಂದ್ರರ ಬೆಳಕೇ ಅಲ್ಲಿ ಮಾರ್ಗದರ್ಶಕವಾಗುವುದು" ಎಂದು ತ್ರಿಪುರಸಂಹಾರದ ರೀತಿಯನ್ನು ತಿಳಿಸುತ್ತಾನೆ. ಬ್ರಹ್ಮನು ರಥವನ್ನೇರಿ ತಾನು ಕೊಟ್ಟ ವರಗಳಿಗೆ ನಾಚಿಕೆ ಪಡುತ್ತಾನೆ. ಶಿವನು ಅವನನ್ನು ಸಂತೈಸಿ, ವಿಷ್ಣುವನ್ನೂ ರಥದಲ್ಲಿ ಕುಳ್ಳಿರಿಸಿಕೊಳ್ಳುತ್ತಾನೆ. ಎಲ್ಲರೂ ಸ್ವರ್ಣಮಯವಾದ ಪುರವನ್ನು, ತದನಂತರ ರಜತಮಯವಾದ ಪುರವನ್ನು, ಕೊನೆಯಲ್ಲಿ ಲೋಹದ ಪುರವನ್ನು ಆಶ್ಚರ್ಯದಿಂದ ನೋಡುತ್ತಾರೆ. ಆದರೆ ಈ ತ್ರಿಪುರಗಳ ಸಮೀಪದಲ್ಲಿಯೇ ಮತ್ತೊಂದು ತ್ರಿಪುರಗಳನ್ನು ಕಂಡು ಆಶ್ಚರ್ಯಚಕಿತರಾಗುತ್ತಾರೆ. ಈ ಮಾಯಾ ತ್ರಿಪುರವನ್ನು ಶುಕ್ರಾಚಾರ್ಯನು, ದೇವತೆಗಳನ್ನು ಮೋಸಮಾಡಲು ನಿರ್ಮಿಸಿರುತ್ತಾನೆ. ಅದನ್ನು ಅರಿಯದ ಸರ್ವತಾಪರಾಜನು, ವಿಶದಾಶಯ ಈ ವಿವರಗಳನು ಸ್ಪಷ್ಟಪಡಿಸುತ್ತಿದ್ದರೂ ನಂಬದೆ, 'ಆ ಪುರಗಳನ್ನು ದೇವತೆಗಳು ನಿರ್ಮಿಸಿದ್ದಾರೆ' ಎಂದೇ ತಪ್ಪು ತಿಳಿಯುತ್ತಾನೆ. ಅದನ್ನು ಧ್ವಂಸಮಾಡಲು ತನ್ನ ಸೋದರರಾದ ಸೂರ್ಯತಾಪ ಮತ್ತು ಚಂದ್ರತಾಪರನ್ನು ಕರೆದು, ಆ ಕಾರ್ಯವನ್ನು ಮಾಡಿಸುತ್ತಾನೆ. ತನ್ನ ಆಚಾರ್ಯನಾದ ಶುಕ್ರನ್ನೂ, ಅಮಾತ್ಯನಾದ ವಿಶದಾಶಯನನ್ನೇ ನಂಬದ ಸರ್ವತಾಪನು, ತನ್ನ ನಿಜವಾದ ತ್ರಿಪುರಗಳನ್ನು ದೇವತೆಗಳಿಗೆ ತಾನೇ ತೋರಿಸುತ್ತಾನೆ. ನಾರದನು ಇದನ್ನು ಕಂಡು, ತ್ರಿಪುರವನ್ನು ದಹಿಸಲು ಸೂಚಿಸುತ್ತಾನೆ. ಆದರೆ ಮೂರು ಪುರಗಳು ಒಮ್ಮೆಲೇ, ಒಂದೇ ಸರಳರೇಖೆಯಲ್ಲಿ ಬಂದಾಗ ಆ ಕಾರ್ಯವಾಗಬೇಕಾಗುತ್ತದೆ. ಆ ಘಳಿಗೆಯು ಬಂದಾಗ, ಎಲ್ಲರೂ ಸನ್ನದ್ಧರಾಗುತ್ತಾರೆ. ನಾರದನು ಸಪ್ತರ್ಷಿಗಳೊಂದಿಗೆ ಕೈಲಾಸದಲ್ಲಿ ಈ ದೃಶ್ಯವನ್ನು ನೋಡುವೆನೆಂದು ಹೊರಡುತ್ತಾನೆ. ಅವನ ಮತ್ತು ಧರ್ಮನ ಸಂಭಾಷಣೆಯಿಂದ ಶಿವನು ವಿಷ್ಣುವನ್ನು ಬಾಣವನ್ನಾಗಿ, ಬ್ರಹ್ಮನನ್ನು ಸಾರಥಿಯನ್ನಾಗಿರಿಕೊಂಡು ತ್ರಿಪುರಗಳನ್ನು ಧ್ವಂಸ ಮಾಡಿದ್ದು ತಿಳಿಯುತ್ತದೆ. ನೇಪಥ್ಯದಲ್ಲಿ ಎರಡು ಸುಂದರ ಶ್ಲೋಕಗಳ ಮೂಲಕ ಅಲ್ಲಿ ಆದ ಅಗ್ನಿಯ ಪ್ರಭಾವವನ್ನು ಮತ್ತು ತ್ರಿಪುರಗಳನ್ನು ನಿರ್ಮಿಸಿದ ಬಗ್ಗೆ ಹತಾಶೆಯ ಭಾವವಿರುವ ವರ್ಣನೆ ಇದೆ. ಅದಾಗಿ ನಾರದನು, "ಈಗ ಕೇವಲ ಧೂಮ, ಅಗ್ನಿ ಮತ್ತು ಕಿಡಿಗಳನ್ನು ಹೊರತುಪಡಿಸಿ ಇನ್ನೇನೂ ಕಾಣದಾಗಿದೆ, ದೇವತೆಗಳು ಎಲ್ಲಿದ್ದಾರೆ?" ಎಂದು ಆತಂಕ ಪಡುತ್ತಾನೆ. ಅನಂತರ ಎಲ್ಲಾ ದೇವತೆಗಳೂ ರಥಾರೂಢರಾಗಿ ಹಿಮವಂತನ ಬಳಿ ಬಂದು ಆಸೀನರಾಗುತ್ತಾರೆ. ಆಗ ನಾರದನು "ಇಂತಹ ಮಹತ್ಕಾರ್ಯಕ್ಕೆ ದೇವತೆಗಳು ನಿನಗೆ ಏನು ಉಡುಗೊರೆ ಕೊಡಬೇಕು" ಎಂದು ಶಿವನಲ್ಲಿ ಕೇಳಿದಾಗ, ಶಿವನು ಸಂಕೋಚದಿಂದ, "ಹದಿನಾರು ದೇವತೆಗಳು ಸೇರಿ ಮಾಡಿದ ಕಾರ್ಯಕ್ಕೆ ನನಗೇಕೆ ವಿಶೇಷ ಸನ್ಮಾನ" ಎನ್ನುತ್ತಾನೆ. ಆಗ ಇಂದ್ರನು "ತ್ವಮೇಕ: ಪುರುಷ: ಸ್ತುತ್ಯ:" ಎಂದು ಹೇಳಿ, ಕೊನೆಯಲ್ಲಿ ಭರತವಾಕ್ಯವಾಗಿ "ಹಣೆಗಣ್ಣುಳ್ಳ ಚಂದ್ರಚೂಡನ ಆಶೀರ್ವಾದದಿಂದ ಸಜ್ಜನರ ಹೃದಯವು ಮೋಹ ಎಂಬ ಅಂಧಕಾರದಿಂದ ದೂರವಾಗಲಿ" ಎನ್ನುತ್ತಾನೆ. ಪ್ರಾಯಃ ಇಲ್ಲಿ ಕೇವಲ ದೇವತೆಗಳೇ ಪಾತ್ರಗಳಾಗಿದ್ದರಿಂದ, ಉಳಿದ ನಾಟಕಗಳಂತೆ ರಾಜನ ವಿಷಯವಾಗಲಿ, ಮಳೆಬೆಳೆಗಳ ವಿಷಯವಾಗಲೀ ಪ್ರಸ್ತಾಪವಿಲ್ಲ.

ವಿಶ್ಲೇಷಣೆ : ಡಿಮದ ನಾಂದಿಯು ಶಿವನ ಪ್ರಶಂಸೆಯಿಂದ ಆರಂಭವಾಗುವುದು. 'ಚಂದ್ರಶೇಖರನಾದ ಶಿವನ ಶಿರಸ್ಸಿನಲ್ಲಿ ಹರಿಯುವ ಗಂಗೆಯು ಒಂದು ಸಾಮಾನ್ಯವಾದ ಹೂವನ್ನು ಕೂಡ ಕಲ್ಪದ್ರುಮವನ್ನಾಗಿಸಬಲ್ಲದು. ಅಂತಹ ಗಂಗೆಯನ್ನು ಹೊತ್ತ ಶಿವನ ಶಿರಸ್ಸಿಗೆ ಜಯವಾಗಲಿ' ಎಂದು ಮಂಗಳವನ್ನು ಮಾಡುತ್ತಾನೆ. ಇಲ್ಲಿ ರೂಪಕದ ನಾಯಕನಾದ ಶಿವನ ಸೂಚನೆಯಿದ್ದರೆ, ಎರಡನೇ ಶ್ಲೋಕವು ಪುರಾರಿಯಾದ (ಪುರಗಳ ಶತ್ರು) ಶಿವನ ಬಾಣದ ಅಗ್ನಿಯು ಜಯಶೀಲವಾಗಲಿ ಎಂದು ರೂಪಕದ ಇತಿವೃತ್ತವನ್ನು ಸೂಚಿಸುವ ಪದ್ಯವಾಗಿ ಕಂಡುಬರುತ್ತದೆ. ಮೂರನೆಯ ನಾಂದಿಪದ್ಯದ ಶ್ಲೋಕದಲ್ಲಿ, ಶಿವನ ಬಾಣವು ಆ ತ್ರಿಪುರಗಳನ್ನು ದಹಿಸುವ ಕ್ರಿಯೆಯನ್ನು ಸೂಚಿಸಲಾಗಿದೆ. ಹೀಗಾಗಿ ವಸ್ತುನಿರ್ದೇಶ ಪುರಸ್ಸರಮಂಗಳವು ಕಾಣುತ್ತದೆ. ಭರತವಾಕ್ಯದಲ್ಲಿ ಭೂಲೋಕದ ವಸ್ತುಗಳಿಗೆ ಸಂಬಂಧಪಟ್ಟ ಮಂಗಳದ ಸೂಚನೆ ಇಲ್ಲ. ಕೇವಲ ಸ್ಫುಟಾಕ್ಷರನ ಪಾತ್ರದಲ್ಲಿ

ಪ್ರಾಕೃತಭಾಷೆಯ ಬಳಕೆ ಕಂಡುಬರುತ್ತದೆ. ಅನೇಕ ರೌದ್ರರಸಪ್ರಧಾನವಾದ ಶ್ಲೋಕಗಳು ಕಂಡುಬರುತ್ತವೆ. ಈ ರೂಪಕದಲ್ಲಿ ಕವಿಯಾದ ವತ್ಸರಾಜನ ನಾಮೋಲ್ಲೇಖನವಿಲ್ಲ. ಪ್ರಾಯಃ ಒಂದು ಪುಟವು ಲಭ್ಯವಾಗಿಲ್ಲದ ಕಾರಣ ಹೀಗಾಗಿರಬಹುದು ಎಂದು ಊಹಿಸಬಹುದು.

ಈ ಡಿಮದಲ್ಲಿ ನಾಟ್ಯಶಾಸ್ತ್ರದಲ್ಲಿ ಹೇಳಿರುವ ಗ್ರಹಣ, ಉಲ್ಕಾಪಾತ, ಇಂದ್ರಜಾಲ ಮೊದಲಾದ ಅನೇಕ ರೀತಿಯ ಪಾತ್ರಗಳು ಇತ್ಯಾದಿ ಎಲ್ಲವೂ ಉಲ್ಲೇಖಗೊಂಡಿವೆ. ಅದಲ್ಲದೆ ಇನ್ನೂ ಕೆಲವು ವೈಶಿಷ್ಟ್ಯಗಳನ್ನು ಕಾಣಬಹುದು. ಮುಖ್ಯವಾಗಿ ತ್ರಿಪುರದಾಹವನ್ನು ಪರೋಕ್ಷವಾಗಿಯೇ ತೋರಿಸಲಾಗಿದೆ ಎಂಬುದು ತಿಳಿಯುತ್ತದೆ. ವ್ಯಾಯೋಗದಂತೆ ಇಲ್ಲಿಯೂ ಸ್ತ್ರೀಪಾತ್ರವಿಲ್ಲ. ಶೃಂಗಾರವು ಕಾಣದಿದ್ದರೂ ಅಲ್ಲಲ್ಲಿ ಹಾಸ್ಯವು ಕಾಣುತ್ತದೆ. ತ್ರಿಪುರಸಂಹಾರದ ಪ್ರಸಂಗವು ಕೃಷ್ಣಯಜುರ್ವೇದದ ಭಾಗವತಪುರಾಣದಲ್ಲಿ (7,10,52–71) ತ್ರಿಪುರದಹನದ ವಿಷಯವನ್ನು ಸಂಕ್ಷಿಪ್ತವಾಗಿ ನೀಡಲಾಗಿದೆ. ಮಯ ಎಂಬ ಅಸುರಶ್ರೇಷ್ಠನು, ಹಾರುವಂತಹ ಮೂರು ಪುರಗಳನ್ನು ಚಿನ್ನ, ಬೆಳ್ಳಿ ಮತ್ತು ಉಕ್ಕಿನಿಂದ ನಿರ್ಮಿಸಿದನು. ಶಿವನ ಬಾಣದಿಂದ ಅಸುರರು ಸತ್ತರೂ, ಅಮೃತರಸದ ಬಾವಿಯಲ್ಲಿ ಹಾಕಿ, ಅವರನ್ನು ಮಯನು ಪುನರುಜ್ಜೀವನಗೊಳಿಸಿದನು. ಇದನ್ನು ನೋಡಿದ ವಿಷ್ಣುವು ತಾನೇ ಗೋವಾಗಿ ರೂಪವನ್ನು ಧರಿಸಿ, ಬ್ರಹ್ಮನನ್ನು ಕರುವನ್ನಾಗಿ ಮಾಡಿ, ಆ ಅಮೃತದ ಬಾವಿಯನ್ನು ಖಾಲಿ ಮಾಡಿದರು. ಶಿವನಿಗೆ ಯುದ್ಧಕ್ಕೆ ಬೇಕಾದ ರಥ ಮೊದಲಾದ ಉಪಕರಣಗಳನ್ನು ಕಲ್ಪಿಸಿ, ಕೃಷ್ಣನು ತ್ರಿಪುರದಹನಕ್ಕೆ ಸಹಕಾರಿಯಾದನು. ಮತ್ಸ್ಯಪುರಾಣದಲ್ಲಿ, ಹನ್ನೆರಡು ಅಧ್ಯಾಯಗಳಲ್ಲಿ (129–140) ಈ ಕಥೆಯು ಹೇಳಲ್ಪಟ್ಟಿದೆ. ತಾರಕ, ವಿದ್ಯುನ್ಮಾಲಿ ಮತ್ತು ಮಯ ಎಂಬ ಮೂರು ಅಸುರರು ತಪಸ್ಸನ್ನು ಮಾಡಿ, ಮೂರು ನಗರಗಳನ್ನು ಪಡೆಯುತ್ತಾರೆ. ಪುಷ್ಯಾ ನಕ್ಷತ್ರದಲ್ಲೇ ಆ ನಗರಗಳನ್ನು ಒಂದೇ ಬಾಣದಿಂದ ನಾಶಮಾಡಬಹುದಾಗಿರುತ್ತದೆ. ಶಿವನು, ಪೃಥ್ವಿಯನ್ನೇ ರಥವನ್ನಾಗಿ ಮಾಡಿಕೊಂಡು, ಬ್ರಹ್ಮನನ್ನು ಸಾರಥಿಯನ್ನಾಗಿ ಮಾಡಿಕೊಳ್ಳುತ್ತಾನೆ. ಅದಕ್ಕೆ ಎಲ್ಲಾ ದೇವತೆಗಳ, ದಿವ್ಯವಸ್ತುಗಳು ಸಹಕಾರಿಯಾಗುತ್ತವೆ. ರಥವು ಕುಸಿಯುತ್ತಿರುವಾಗ, ವಿಷ್ಣುವು ವೃಷಭರೂಪದಿಂದ ಬಂದು ಅದನ್ನು ಪುನಃ ಮೇಲಕ್ಕೆ ಎತ್ತುತ್ತಾನೆ. ಅಮೃತಕುಂಡದ ಕಲ್ಪನೆ ಇಲ್ಲಿಯೂ ಕಾಣುತ್ತದೆ. ಕೊನೆಗೆ, ಭೂಮಿಯ ಮೇಲಿನ ಲೋಹಮಯವಾದ ಪಟ್ಟಣದ ಒಡೆಯನಾದ ತಾರಕನನ್ನು ಕಾರ್ತಿಕೇಯನು ಕೊಲ್ಲುತ್ತಾನೆ. ಆಕಾಶದಲ್ಲಿನ ರಜತ್ರಪುರದ ಒಡೆಯನಾದ ವಿದ್ಯುನ್ಮಾಲಿಯನ್ನು ನಂದಿಕೇಶ್ವರನು ಕೊಲ್ಲುತ್ತಾನೆ. ಬೆಳ್ಳಿಯ ನಗರದ ನೂರು ಯೋಜನದ ಮೇಲೆ ನಿರ್ಮಿತವಾದ ಚಿನ್ನದ ಪಟ್ಟಣವನ್ನು ಶಿವನು ಧ್ವಂಸಮಾಡುತ್ತಾನೆ. ಇದಕ್ಕೆ ವಿಷ್ಣು, ಅಗ್ನಿ ಮತ್ತು ಸೋಮರು ಬಾಣದ ಶಕ್ತಿಯ ರೂಪವನ್ನು ತಾಳುತ್ತಾರೆ. ಇಲ್ಲಿಯೂ ನಾರದರ ಪ್ರವೇಶವಿದೆ. ಆದರೆ, ಅಸುರ ರಾಜನಾದ ಮಯನು ಬೇರೆ ಲೋಕಕ್ಕೆ ಹೋಗಿ ಪಾರಾಗುತ್ತಾನೆ. ಇದಲ್ಲದೆ ತೈತ್ತರೀಯಸಂಹಿತೆಯಲ್ಲಿ (6.2.3) ತಾರಕಾಸುರನ ಮಕ್ಕಳಾದ ತಾರಕಾಕ್ಷ, ವಿದ್ಯುನ್ಮಾಲಿ ಮತ್ತು ಕಮಲಾಕ್ಷ ಎಂಬ ಮೂರು ದೈತ್ಯರು ಘೋರತಪಸ್ಸನ್ನಾಚರಿಸಿ ಬ್ರಹ್ಮನಿಂದ ವರ ಪಡೆಯುತ್ತಾರೆ. ತಮ್ಮ ಮೂರು ಪುರಗಳು ಸಾವಿರ ವರ್ಷಕ್ಕೊಮ್ಮೆ ಒಂದೇ ರೇಖೆಯಲ್ಲಿ ಬರುವಾಗ ಒಂದೇ ಬಾಣದಿಂದ ಆ ತ್ರಿಪುರಗಳನ್ನು ಧ್ವಂಸಮಾಡಲು ಸಾಧ್ಯ ಎಂಬುದು ವರದ ನಿಯಮವಾಗಿತ್ತು. ಎಂಭುದು ಶೀವನು ಬ್ರಹ್ಮನನ್ನೇ ರಥವನ್ನಾಗಿಸಿ ವಿಷ್ಣುವನ್ನು ಬಾಣವನ್ನಾಗಿಸಿ ಒಟ್ಟಿಗೇ ತ್ರಿಪುರಗಳನ್ನು, ತನ್ಮೂಲಕ ಮೂವರು ದೈತ್ಯರನ್ನು ನಾಶ ಮಾಡುತ್ತಾನೆ ಎಂಬ ಕಥೆಯಿದೆ.

ಇಂಥ ಕಥಾ ವೈವಿಧ್ಯವುಳ್ಳ ತ್ರಿಪುರದಾಹವನ್ನು ಅಮಾತ್ಯ ವತ್ಸರಾಜನು ಸ್ವೀಕರಿಸಿ, ಪುರಗಳ ಮತ್ತು ರಾಕ್ಷಸರ ಹೆಸರುಗಳನ್ನು ಪರಿವರ್ತಿಸಿ, ವಿನೂತನವಾಗಿ ಕಥಾತಂತ್ರ ಹೆಣೆದಿದ್ದಾನೆ. ಅಸುರರ ಹೆಸರುಗಳಲ್ಲಿ ವತ್ಸರಾಜನು ವೈವಿಧ್ಯವನ್ನು ಕಲ್ಪಿಸಿದ್ದಾನೆ. ಶುಕ್ರಾಚಾರ್ಯರ ಮಾಯೆಯ ತ್ರಿಪುರನಿರ್ಮಾಣ ಎಂಬ ಕಲ್ಪನೆಯೂ ಹೊಸತು. ಮಧ್ಯೆ ರೂಪಕದಲ್ಲಿ ಹಾಸ್ಯವನ್ನು ತೋರಿಸುವ ಅಧಮ ಪಾತ್ರಗಳ ಸಂಭಾಷಣೆ ಮತ್ತು ನಾರದರ ಮಾತುಗಳು ರಂಜಕವಾಗಿರುತ್ತವೆ.

ಕರ್ಪೂರಚರಿತ – ಭಾಣ

ಲಕ್ಷಣವಿಚಾರ–

आत्मानुभूतशम्सी परसंश्रयवर्णनाविशेषस्तु । विविधाश्रयो हि भाणो विज्ञेयस्त्वेकाहार्यश्च||108||

परवचनमात्मसंस्थं प्रतिवचनैरुत्तरोत्तरग्रथितैः| आकाशपुरुषकथिथैरङ्गविकारैरभिनयैश्चैव||109|

धूर्तविटसंप्रयोज्यो नानावस्थान्तरात्मकश्चैव । एकाङ्को बहुचेष्टः सततं कार्यो बुधैर्भाणः ||110||

ತನ್ನ ಬಗ್ಗೆಯೇ ಹೇಳಿಕೊಳ್ಳುವುದು ಅಥವಾ ವಿಶೇಷವಾಗಿ ಬೇರೆಯವರ ಬಗ್ಗೆ ಹೇಳುವ ರೂಪಕದ ಪ್ರಕಾರ ಭಾಣ. ಒಂದೇ ಅಂಕವಿರುವ, ಆಕಾಶಭಾಷಿತದಿಂದ, ಅಂಗಗಳ ವಿಕಾರದಿಂದ ಮತ್ತು ಅಭಿನಯದಿಂದ ಬೇರೆಯವರ ಜೊತೆ ವ್ಯವಹರಿಸುವಂತೆ ತೋರುವ, ಧೂರ್ತ ವಿಟ ಮುಂತಾದವರ ಅನೇಕ ಅವಸ್ಥೆಗಳನ್ನು ತೋರುವ ರೂಪಕ, ಭಾಣ (ನಾಟ್ಯಶಾಸ್ತ್ರ 18, 108–110). ಹೀಗಾಗಿ ಸಂತೋಷ, ಸಂಭ್ರಮ, ಪ್ರೀತಿ, ವಂಚನೆ, ಜೂಜು, ಕ್ರೀಡೆ ಮುಂತಾದವನ್ನೊಳಗೊಂಡ ಭಾಣವು ವಿಶಿಷ್ಟ ರೂಪಕದ ಪ್ರಕಾರವಾಗದೆ. "भण्यते व्योमोक्त्या नायकेन स्वपरवृत्तं प्रकाश्यते अत्रेति भाणः" ಎಂಬಂತೆ ಒಬ್ಬನೇ ಅಭಿನಯಿಸುವ ಈ ರೂಪಕದಲ್ಲಿ ಆಕಾಶಭಾಷಿತ ಎಂಬ ತಂತ್ರದಿಂದ ಬೇರೊಬ್ಬರ ಜೊತೆ ಮಾತಾಡಿದಂತೆ ನಟಿಸಿ ಕಥೆಯನ್ನು ಮುಂದೆ ಸಾಗಿಸುತ್ತಾನೆ.

भाणः प्रधानशृङ्गारवीरो मुखनिर्वाहवान् | एकाङ्को दशलास्याङ्गः प्रायो लोकानुरञ्जकः ||

ಎಂದು ನಾಟ್ಯದರ್ಪಣ ಗ್ರಂಥದ ದ್ವಿತೀಯ ವಿವೇಕದ 81 ಶ್ಲೋಕವಾಗಿ ಭಾಣದ ಲಕ್ಷಣವಿದೆ. ಜೊತೆಗೆ ಈ ಶ್ಲೋಕವನ್ನು ವಿಸ್ತರಿಸುತ್ತಾ – ಭಾಣ ಎಂದರೆ ಮಾತು. ಆದ್ದರಿಂದ ಮಾತೇ ಮುಖ್ಯವಾಗಿರುವ ರೂಪಕ ಪ್ರಕಾರ ಇದಾಗಿದೆ. ಇಲ್ಲಿ ಶೃಂಗಾರರಸವೇ ಪ್ರಧಾನವಾಗಿದ್ದು, ಅದರ ಅಂಗವಾಗಿ ಹಾಸ್ಯವೂ, ವೀರವೂ ಕಾಣುತ್ತದೆ. ಹತ್ತು ಲಾಸ್ಯಾಂಗಗಳು ಇರಬೇಕು. "ಪ್ರಾಯೋ ಲೋಕಾನುರಂಜಕ:" ಎಂದು ಲಕ್ಷಣ ಹೇಳಿರುವಲ್ಲಿ, ಜನಸಾಮಾನ್ಯರ ರಂಜನೆಯೊಂದಿಗೆ ರಾಜಕುಮಾರರಿಗೆ ಶಿಕ್ಷಣವೂ ಇದರಿಂದ ಆಗಬಹುದು ಎಂದು ಅಭಿಪ್ರಾಯವಿದೆ. ಇಲ್ಲಿ ಧೂರ್ತನೇ ನಾಯಕ. ಭಾರತೀವೃತ್ತಿಯೇ ಪ್ರಧಾನ. ಕೈಶಿಕಿಯೋ, ಸಾತ್ವತಿಯೋ ಅಲ್ಲ. ಇಲ್ಲಿ ವಿಟನೋ ಅಥವಾ ಅವನ ತರಹ ಇರುವವನೇ ನಾಯಕ. ತನ್ನ ಬಗ್ಗೆ ತಾನೇ ಹೇಳುವುದರಿಂದ ಪ್ರೇಕ್ಷಕರಿಗೆ ಇವನ ನಿಜರೂಪವು ಗೊತ್ತಾಗಿಯೇ ಇರುತ್ತದೆ. ಕೇವಲ ಒಬ್ಬನ ಚುಟುಕಾದ, ಒಂದೇ ಅಂಕದ ಮಾತಾಗಿರುವುದರಿಂದ ಭಾಣದಲ್ಲಿ ಮುಖ ಮತ್ತು ನಿರ್ವಹಣ ಎಂಬ ಎರಡೇ ಸಂಧಿಗಳು ಇವೆ. ಪ್ರತಿಮುಖ, ಗರ್ಭ, ವಿಮರ್ಶ ಸಂಧಿಗಳು ಇರುವುದಿಲ್ಲ ಎಂಬ ವಿವರಣೆಯನ್ನು ಕಾಣಬಹುದು.

ಭಾಣದ ಇತಿಹಾಸದಲ್ಲಿ ಕರ್ಪೂರರ ಚರಿತದ ವಿಶೇಷತೆ : वररुचिरीश्वरदत्त: श्यामलिकश्च शूद्रकश्च चत्वारः | एते भाणान् बभणुः का शक्तिः कालिदासस्य || - ಎಂದು ಓರ್ವ ವಿಮರ್ಶಕನು ಹೇಳುವಂತೆ, ವರರುಚಿಯು 'ಉಭಯಾಭಿಸರಿಕಾ'ವನ್ನು (3ನೇ ಶತಮಾನ), ಶೂದ್ರಕನು 'ಪದ್ಮಪ್ರಾಭೃತಕ'ವನ್ನು, ಈಶ್ವರದತ್ತನು 'ಧೂರ್ತವಿಟಸಂವಾದ' (11ನೇ ಶತಮಾನ) ಮತ್ತು ಶ್ಯಾಮಲೀಕನು 'ಪಾದತಾಡಿತಕ'ವನ್ನು (8ನೇ ಶತಮಾನ) ಬರೆದಿದ್ದಾರೆ. ಇವುಗಳ ಪರಿಶೀಲನೆಯ ನಂತರ ಕಾಳಿದಾಸನ ಶಕ್ತಿ ಎಲ್ಲಿ ಕಾಣುವುದು?" ಎಂದು ಕಾಳಿದಾಸನನ್ನೇ ಉಪೇಕ್ಷಿಸುತ್ತಾನೆ. ಈ ಪ್ರಸಿದ್ದವಾದ 'ಚತುರ್ಭಾಣಿ'ಯ ನಂತರ ಭಾಣಗಳು ರಚನೆಯಾದದ್ದೇ ಅಷ್ಟಾಗಿ ಇಲ್ಲವೆನ್ನಬಹುದು. ಈ ಪ್ರಕಾರದ ರೂಪಕವನ್ನು ಪುನಶ್ಚೇತನಗೊಳಿಸಿದ ಹೆಗ್ಗಳಿಕೆ ವತ್ಸರಾಜನದ್ದು. ತದನಂತರ 16ನೇ ಶತಮಾನದ ಅನಂತರವೇ ಭಾಣಗಳು ರಚನೆಯಾದವು (ಉದಾ – ವಾಮನಭಟ್ಟಬಾಣನ ಶೃಂಗಾರಭೂಷಣ ಭಾಣ).

ಸಂಪೂರ್ಣ ಭಾಣ ಸಾಹಿತ್ಯದ ಸಮೀಕ್ಷೆ ಮಾಡಿದಾಗ, ವತ್ಸರಾಜನ ಈ ಭಾಣದ ವೈಶಿಷ್ಟಗಳು ಹಲವಾರು. ಇಡಿಯ ಪಶ್ಚಿಮ ಭಾರತದಲ್ಲಿ ದೊರೆತ ಎರಡೇ ಭಾಣಗಳಲ್ಲಿ ಇವನದ್ದು ಒಂದಾಗಿದೆ. 34 ಶ್ಲೋಕಗಳನ್ನು ಹೊಂದಿದ್ದು, ಇದೇ ಅತ್ಯಂತ ಸಣ್ಣ ಗಾತ್ರದ ಭಾಣವಾಗಿದೆ. ಸಾಮಾನ್ಯವಾಗಿ ಭಾಣಗಳು ಬಹು ಅಶ್ಲೀಲವಾಗಿದ್ದರೆ, ಇವನ ಭಾಣವು ತದ್ವಿರುದ್ಧವಾಗಿ ಸರಸವಾಗಿದ್ದು, ಸಂತೋಷ ಕೊಡುವುದಾಗಿದೆ.

ಕಥಾನಕ: ಕರ್ಪೂರಚರಿತದ ಕಥಾಭಾಗದಲ್ಲಿ ಕರ್ಪೂರಕ ಎಂಬ ವಿಟನು ಜೂಜಿನಲ್ಲಿ ತನ್ನ ಎಲ್ಲಾ ಹಣವನ್ನು ಕಳೆದುಕೊಂಡರೂ, ವಿಲಾಸವತಿ ಎಂಬ ವೇಶ್ಯೆಯನ್ನು ಪ್ರೀತಿಸುತ್ತಾನೆ. ಪ್ರಸ್ತಾವನದಲ್ಲಿಯೇ ಮುದ್ರಾಲಂಕಾರದಿಂದ[1] ಸೂಕ್ಷ್ಮವಾಗಿ ಶ್ಲೇಷದಿಂದ ಕವಿಯು ಪಾತ್ರಪರಿಚಯವನ್ನು ಮಾಡುತ್ತಾನೆ (ಶ್ಲೋಕ 4).

ಸೂತ್ರಧಾರನು ನಾಂದಿಯ[2] ನಂತರ, ನಾಟಕದ ಹೆಸರು, ಕರ್ತೃವಿನ ಹೆಸರು, ಯಾವ ಸನ್ನಿವೇಶದಲ್ಲಿ ಇದರ ಪ್ರಸ್ತುತಿ, ಇತ್ಯಾದಿಗಳನ್ನು ತಿಳಿಸುತ್ತಾನೆ. ಇದನ್ನೇ ಪ್ರರೋಚನ[3] ಎಂದು ನಾಟ್ಯಶಾಸ್ತ್ರದಲ್ಲಿ ತಿಳಿಸಲಾಗಿದೆ (5, 29).

ಕರ್ಪೂರಕನು ಕಾಲ್ಪನಿಕವಾಗಿ ತನ್ನ ಇಬ್ಬರು ಗೆಳೆಯರೊಂದಿಗೆ ತನ್ನ ಕಥೆಯನ್ನು ಹೇಳಿಕೊಳ್ಳುತ್ತಾನೆ. ಸಾಮಾನ್ಯವಾಗಿ ಭಾಣಗಳಲ್ಲಿ ಸ್ತ್ರೀಯರೊಂದಿಗೆ ಸಂವಾದವಿದ್ದರೆ, ಇಲ್ಲಿ ಕಾಲ್ಪನಿಕ ಪುರುಷರಿದ್ದಾರೆ. ಅವರೇ ಚಂದನಕ ಮತ್ತು ವಿರೋಧಕ.

ಕರ್ಪೂರಕನು ಮಂಜೀರಕನ ಸೋದರನಾದ ನಿಪುಣಕನಂತೆ ಅಭಿನಯಿಸಿ, ಮಂಜೀರಕನ ಬಳಿ ಹೋಗುತ್ತಾನೆ. ಮಂಜೀರಕನು ಸಿರಿವಂತ ವಿಟನಾಗಿದ್ದು, ವಿಲಾಸವತಿಯನ್ನು ಪ್ರೀತಿಸುತ್ತಾನೆ. ಆದರೆ ಕರ್ಪೂರಕ ಮತ್ತು ವಿಲಾಸವತಿಯರು ಪರಸ್ಪರ ಪ್ರೀತಿಸುತ್ತಿರುತ್ತಾರೆ. ಕೊನೆಯಲ್ಲಿ ಕರ್ಪೂರಕನು ಮಂಜೀರಕನನ್ನು ವಂಚಿಸಿ ಅವನನ್ನು ಸೆರೆಹಿಡಿಸುತ್ತಾನೆ.

ಕರ್ಪೂರಕನು, ಹರದತ್ತ ಎಂಬ ಮತ್ತೊಬ್ಬ ಧೂರ್ತನನ್ನೂ ತನ್ನ ಬುದ್ಧಿಶಕ್ತಿಯಿಂದ ಬಂಧಿತನನ್ನಾಗಿ ಮಾಡಿಸುತ್ತಾನೆ. ವಿಲಾಸವತಿ ಮತ್ತು ಅವಳ ತಾಯಿ ಕಲಾವತಿಯರ ಮಧ್ಯೆ ವೈಮನಸ್ಯ ಉಂಟಾಗುವಂತಾಗಿ, ಕಲಾವತಿಯು ಮನೆಯನ್ನು ತೊರೆದು, ಕೊನೆಗೆ ಕರ್ಪೂರಕ ಮತ್ತು ವಿಲಾಸವತಿಯರು ಸಮೃದ್ಧಿಯಿಂದ ಬಾಳುವಂತೆ ಆಗುತ್ತದೆ.

ವಿಶ್ಲೇಷಣೆ : ಈ ಭಾಣವು ನಾಟ್ಯಶಾಸ್ತ್ರದ ಹಲವಾರು ಅಂಶಗಳನ್ನು ಹಾಗೂ ಕೆಲವೆಡೆ ವ್ಯತ್ಯಾಸಗಳನ್ನೂ ಹೊಂದಿದೆ.

ಭರತನ ಪ್ರಕಾರ ಒಂದೇ ದಿನದ ಚಟುವಟಿಕೆಗಳನ್ನು ತೋರಿಸಬೇಕು. ಅದೇ ಈ ಭಾಣದಲ್ಲಿ ಎರಡು ಮೂರು ದಿನಗಳ ಕ್ರಿಯಾಕಲಾಪಗಳನ್ನು ತಿಳಿಸಿದ್ದಾರೆ.

---

[1] आच्छिद्य सद्यः प्रतिनायकस्य । चन्द्रस्य मन्दप्रतिभस्य लक्ष्मीम् ||
तां शंभलीं रात्रिमपास्य दूरे । धूर्तो रविद्यौ गणिकामुपैति ||
ಇಲ್ಲಿ ಬೆಳಗಾಗುತ್ತಿದೆ ಎಂದು ಹೇಳುವುದನ್ನು ಕವಿಯು ಚಮತ್ಕಾರವಾಗಿ, ಪ್ರತಿನಾಯಕನಾದ ಚಂದ್ರನನ್ನು ದೂರ ಮಾಡಿ, ಧೂರ್ತನಾದ ರವಿಯು ಆಕಾಶವೆಂಬ ವೇಶ್ಯೆಯ ಬಳಿಗೆ ಹೋಗುತ್ತಾನೆ ಎಂಬ ಕಥಾಂಶವನ್ನು ತಿಳಿಸುತ್ತಾನೆ.

[2] तत्र पूर्वं पूर्वरङ्गः सभापूज ततः परम् | कथनं कवि संज्ञादेर्नाटकस्याप्यथामुखम् || सा. द.6,21
ನಾಟಕದ ಪೂರ್ವದಲ್ಲಿ ವಿಘ್ನನಾಶಕ್ಕೆ ಮಾಡುವ ಪ್ರಾರ್ಥನೆ ಪೂರ್ವರಂಗ. ಇದರಲ್ಲೇ तथाप्यवश्यं कर्तव्या नान्दी विघ्नोपशान्तये | ಎಂದು ನಾಂದಿಯ ಅನಿವಾರ್ಯತೆಯನ್ನು ತಿಳಿಸಿದ್ದಾರೆ. ನಾಂದಿಯ ಪದ್ಯದಲ್ಲಿ ಮಂಗಳ ದ್ರವ್ಯಗಳಾದ ಶಂಖ, ಚಂದ್ರ, ಕಮಲ, ಚಕ್ರವಾಕ ಮುಂತಾದವನ್ನು ಉಪಯೋಗಿಸಬೇಕು. ನಾಂದಿಯನ್ನು ಕವಿಯೇ ಮಾಡಿ, ನಂತರ ಸೂತ್ರಧಾರನು ಪ್ರವೇಶಿಸುತ್ತಾನೆ. ಅಥವಾ ನಾಂದಿಯನ್ನು ಸೂತ್ರಧಾರನು ಮಾಡಿ, ಅನಂತರ ನಾಟಕವನ್ನು ಆರಂಭಿಸುತ್ತಾನೆ.

[3] अङ्गान्यत्रोन्मुखीकारः प्रशंसातः प्ररोचना (सा. द. 6.30)- ರಾಜ, ನಟ, ಸಭಾಸದರ ಪ್ರಶಂಸೆಯಿಂದ ಜನರ ಗಮನವನ್ನು ನಾಟಕದ ಕಡೆಗೆ ಸೆಳೆಯುವುದು ಪ್ರರೋಚನಾ.

ಪ್ರಸ್ತಾವನೆಯಲ್ಲಿ[1] ಎರಡು ನಾಂದಿಶ್ಲೋಕಗಳು, ಸೂತ್ರಧಾರನ ಪ್ರವೇಶ, ಆಕಾಶಭಾಷಿತದಿಂದ ತನ್ನ ಸ್ನೇಹಿತನೊಂದಿಗೆ ಸಂಭಾಷಣೆ, ಕೊನೆಗೆ ವಿಟನಾದ ಕರ್ಪೂರಕನ ಪ್ರವೇಶ. ಇದು ಸಂಸ್ಕೃತ ಮತ್ತು ಪ್ರಾಕೃತಗಳ ಪ್ರಯೋಗವಿರುವ ಮೊದಲ ಭಾಣವಾಗಿದೆ. ಕಡೆಯಲ್ಲಿ ಭರತವಾಕ್ಯವಿದ್ದು, ನಿರ್ವಹಣಸಂಧಿಯಲ್ಲಿ ಕಾವ್ಯಸಂಹಾರ (ವರದಾನ) ಮತ್ತು ಪ್ರಶಸ್ತಿ (ದೇಶಕ್ಕೆ ಮತ್ತು ರಾಜನಿಗೆ ಶುಭಕಾಮನೆಗಳನ್ನು ಕೋರುವುದು) ಕಂಡುಬರುತ್ತದೆ. ನಾಟ್ಯಶಾಸ್ತ್ರದ "ಆತ್ಮನುಭೂತಶಂಸಿ "(18, 108) ಎಂಬ ಅಂಶವು ಹೇಳುವಂತೆ, ಕವಿಯು ತನ್ನ ವೈಯಕ್ತಿಕ ಅನುಭವಗಳನ್ನು ಈ ಭಾಣದಲ್ಲಿ ಹೇಳಿಕೊಳ್ಳುತ್ತಾನೆ.

ಭರತನು ಹತ್ತು ಲಾಸ್ಯಾಂಗಗಳನ್ನು ಹೇಳಿದ್ದು, ಅವು ವಿನೂತನವಾಗಿರಬೇಕು ಮತ್ತು ಅವು ಎಲ್ಲಾ ಪ್ರಕಾರದ ರೂಪಕಗಳಲ್ಲೂ ಇರಬಹುದು ಎಂದು ತಿಳಿಸಿದ್ದಾನೆ. ಭಾಣಗಳಲ್ಲಿ ಏಕವ್ಯಕ್ತಿ ಅಭಿನಯವಿರುವ ಕಾರಣ, ಈ ಲಾಸ್ಯಾಂಗಗಳನ್ನು ತರುವುದು ಕಷ್ಟ. ಆದರೂ ಮೊದಲ ಬಾರಿಗೆ ವತ್ಸರಾಜನೇ ಭಾಣದಲ್ಲಿ 4 ಲಾಸ್ಯಾಂಗಗಳನ್ನು ಪರಿಚಯಿಸಿದ್ದಾನೆ. ಅವು:

- ಸ್ಥಿತಪಾಠ್ಯ (ಶ್ಲೋಕ 10)[2] – ಇದರಲ್ಲಿ ತುಂಬಾ ಭಾವುಕಳಾಗಿ ನಾಯಿಕೆಯಾದ ವಿಲಾಸವತಿಯು ಪ್ರಾಕೃತದಲ್ಲಿ ಹಾಡುತ್ತಾಳೆ.
- ಗೇಯಪದ (ಶ್ಲೋಕ 11)[3] – "ರತಿರಮಣಪ್ರಿಯ "ಎಂಬ ಹಾಡನ್ನು ವಾದ್ಯಸಹಿತವಾಗಿ ವಿಳಾಸವತಿಯು ಹಾಡುತ್ತಾಳೆ.
- ಪುಷ್ಪಗಂಡಿಕಾ (ಶ್ಲೋಕ 12)[4] – ವಾದ್ಯ, ಸಂಗೀತ ಮತ್ತು ಆಂಗಿಕ ಅಭಿನಯದೊಂದಿಗೆ ನಾನಾ ವೃತ್ತದ ಗೀತಗಳ ಗಾಯನ
- ಪ್ರಚ್ಛೇದಕ (ಶ್ಲೋಕ 14)[5] – ಕೋಪಗೊಂಡರೂ ಸಹ ಪ್ರೀತಿಯಿಂದ ಪ್ರಿಯತಮನನ್ನು ಆಲಿಂಗಿಸುವುದು.

ಈ ಎಲ್ಲಾ ಲಾಸ್ಯಾಂಗಗಳನ್ನು ಒಬ್ಬ ಪುರುಷ ಹೇಗೆ ಅಭಿನಯಿಸಬಲ್ಲ ಎಂಬ ಪ್ರಶ್ನೆ ಕಾಡುತ್ತದೆ. ಬಹುಶಃ ಕರ್ಪೂರಕನು ವಿಲಾಸವತಿಯನ್ನು ಸ್ಮರಿಸಿ, ಅವಳು ಮಾಡಿದ ಈ ಎಲ್ಲಾ ಕ್ರಿಯೆಗಳನ್ನು ತಾನು ಅಭಿನಯಿಸಿ ತೋರಿಸುವಂತೆ ಇರಬಹುದು. ಅಂದರೆ ಅವಳು ಕೂತು ಹಾಡಿದಂತೆ, ವಾದ್ಯ ನುಡಿಸಿದಂತೆ, ಇವನ ಮೇಲೆ ಕೋಪಗೊಂಡಂತೆ–ಎಂಬಿತ್ಯಾದಿ ಸನ್ನಿವೇಶಗಳನ್ನು ಕರ್ಪೂರಕನು ಅಭಿನಯಿಸಿ ತೋರುವಂಥ ಸಾಧ್ಯತೆಯಿದೆ. ಬಹುಶಃ ಇದೇ ಪ್ರಸಕ್ತಿಯಿದ್ದಿದ್ದರೆ, ಲಾಸ್ಯಾಂಗದ ಅಭಿವ್ಯಕ್ತಿಯನ್ನು ಪುರುಷನೇ ತೋರಿಸುವ ವೈಶಿಷ್ಟ್ಯವನ್ನು ಭಾಣದ ಲಕ್ಷಣಕ್ಕೆ ಸೇರಿಸಬಹುದು.

ಏಕಾಹಾರ್ಯಾಭಿನಯವಾಗಿದ್ದರೂ ಇದರಲ್ಲಿ ಮೂರನೇ ಒಂದು ಭಾಗ ಪ್ರಾಕೃತದಲ್ಲಿದೆ. ಕರ್ಪೂರಕನಾಗಿ, ಮಂಜೀರಕನಾಗಿ ಮತ್ತು ಯಕ್ಷನಾಗಿ ಅವನು ಸಂಸ್ಕೃತದಲ್ಲಿ ಮಾತಾಡಿದರೆ, ನಿಪುಣಕ, ವಿಲಾಸವತಿ, ಚಂದನಕ ಮತ್ತು ಮಾಯಾವತಿಯರಾಗಿ ಪ್ರಾಕೃತದಲ್ಲಿ ಮಾತಾಡುತ್ತಾನೆ. ಹೀಗಾಗಿ, ಕರ್ಪೂರಚರಿತ ಭಾಣದಲ್ಲಿ ಬಹುಪಾಲು ಮಾತುಗಳು ಆಕಾಶಭಾಷಿತವಾಗಿರುವಂಥ ಸಾಧ್ಯತೆಯೇ ಹೆಚ್ಚಿದೆ.

---

[1] ಆಮುಖ ಅಥವಾ ಪ್ರಸ್ತಾವನೆಯಿಂದ ಪ್ರಸ್ತುತಿಗೊಳ್ಳುವುದನ್ನು ನಟ ಇಲ್ಲವೇ ವಿದೂಷಕನು ಎಲ್ಲರಿಗೂ ತಿಳಿಸುತ್ತಾನೆ.

[2] स्थितपाठ्यं तदुच्यते | मदनोत्तापिता यत्र पठति प्राकृतं स्थिता || सा. द. 6,218- ಅತ್ಯಂತ ಹೆಚ್ಚಿನ ಪ್ರೀತಿಯಿಂದ ಪ್ರಾಕೃತದಲ್ಲಿ ಕುಳಿತು ಹಾಡುವುದು.

[3] तन्त्रीभाण्डं पुरस्कृत्योपविष्टस्यासने पुरः | शुद्धगानं गेयपदं..- ಆಸನದಲ್ಲಿ ಕುಳಿತು ವಾದ್ಯವನ್ನು ಹಿಡಿದು ಶುದ್ಧವಾದ ಗಾನವಿರುವುದು ಗೇಯಪದ.

[4] आतोद्यमिश्रितं गेयं छन्दांसि विविधानि च | स्त्रीपुम्सयोर्विपर्यासचेष्टितं पुष्पगण्डिका || 217|- ಮೃದಂಗಾದಿ ವಾದ್ಯಗಳೊಂದಿಗೆ ವಿವಿಧ ಛಂದಸ್ಸಿನಲ್ಲಿ ಗದ್ಯಪದ್ಯಗಳನ್ನು ಹಾಡುವುದು ಮತ್ತು ಪುರುಷರು ಸ್ತ್ರೀಯರಂತೆ, ಸ್ತ್ರೀಯರು ಪುರುಷರಂತೆ ಅಭಿನಯಿಸುವುದು ಪುಷ್ಪಗಂಡಿಕಾ.

[5] अन्यासक्तं पतिं मत्वा प्रेमविच्छेदमन्युना | वीणापुर:सरं गानं स्त्रियाः प्रच्छेदको मतः ||218 -ಬೇರೆಯವಳಲ್ಲಿ ಆಸಕ್ತನಾದ ಪ್ರಿಯನ ಮೇಲೆ ಕೋಪಗೊಂಡು ವೀಣೆಯೊಂದಿಗೆ ಹಾಡುವ ಹಾಡು.

ಭಾಣದ ಪ್ರಸ್ತಾವನೆಯು ಸಂಸ್ಕೃತ ಮತ್ತು ಪ್ರಾಕೃತಗಳನ್ನೊಳಗೊಂಡಿದ್ದು, ಕಾವ್ಯಸಂಹಾರ ಮತ್ತು ಪ್ರಶಸ್ತಿಗಳುಳ್ಳ ಭರತವಾಕ್ಯ ಮುಂತಾದ ಎಲ್ಲಾ ಅಂಶಗಳಿವೆ. ಒಂದೇ ಕಥಾವಸ್ತುವುಳ್ಳ, ಬೇರೆ ಜನರ ಅಥವಾ ಬೇರೆ ಸಂಗತಿಗಳನ್ನು ಹೊಂದದ, ಆತ್ಮನುಭೂತಶಂಸನವುಳ್ಳ, ಎರಡು ಮೂರು ದಿನಗಳ ಘಟನೆಗಳುಳ್ಳ, ನಾಲ್ಕು ಲಾಸ್ಯಾಂಗಗಳುಳ್ಳ, ಆಕಾಶಭಾಷಿತದಲ್ಲಿ ಬೇರೆ ಪಾತ್ರಗಳುಳ್ಳ, ಪ್ರಾಕೃತಭಾಷೆಯನ್ನೂ ಒಳಗೊಂಡ ಏಕೈಕ ಭಾಣವಾಗಿದೆ. ಮೇಲಾಗಿ ಭಾಣಗಳಲ್ಲೇ ಅತ್ಯಂತ ಚಿಕ್ಕದಾದ ಮತ್ತು ಅತ್ಯುತ್ತಮವಾದ ಭಾಣವಾಗಿದೆ. ಒಂಬತ್ತು ಛಂದಸ್ಸಿನ ಪದ್ಯಗಳುಳ್ಳ, ಶಬ್ದಾಲಂಕಾರ-ಅರ್ಥಾಲಂಕಾರಗಳುಳ್ಳ ಈ ಭಾಣವು ಮುದವನುಣಿಸುತ್ತದೆ.

ಹಾಸ್ಯಚೂಡಾಮಣಿ – ಪ್ರಹಸನ

ಲಕ್ಷಣವಿಚಾರ:

प्रहसनमपि विज्ञेयं द्विविधं शुद्धं तथा संकीर्णम् |

भगवत्तापसविप्रैरन्यैरपि हास्यवादसम्बद्धम् | कापुरुषसंप्रयुक्तं परिहासाभाषणप्रायम् ||103 ||

अविकृतभाषाचारं विशेषभावोपपन्नचरितपदम् | नियतगतिवस्तुविषयं शुद्धं ज्ञेयं प्रहसनं तु ||104||

(ನಾಟ್ಯಶಾಸ್ತ್ರ, 18ನೇ ಅಧ್ಯಾಯ)

ಭರತಮುನಿಯು ಪ್ರಹಸನದ ಬಗ್ಗೆ ತಿಳಿಸುತ್ತಾ- ರಂಜನೆ ಮತ್ತು ಹಾಸ್ಯಪ್ರಧಾನವಾದ ಈ ರೂಪಕಪ್ರಕಾರವನ್ನು ಎರಡು ವಿಭಾಗಗಳನ್ನಾಗಿ ವಿಂಗಡಿಸುತ್ತಾನೆ. ಮೊದಲನೇ ಪ್ರಕಾರವಾದ ಶುದ್ಧಪ್ರಹಸನದಲ್ಲಿ ಭಾಗವತದ ಕೆಲವು ಪಾತ್ರಗಳು, ತಾಪಸ, ಬ್ರಾಹ್ಮಣರು, ಯತಿಗಳು, ವಾನಪ್ರಸ್ಥ ಗೃಹಸ್ಥರು, ಶಾಕ್ಯರು ಮುಂತಾದವರ ಬಗ್ಗೆ ಉಪಹಾಸವಿರುತ್ತದೆ. ಹಾಗೆಂದು ಇಲ್ಲಿ ಆ ಜನಾಂಗವನ್ನೇ ಅವಹೇಳನ ಮಾಡಲಾಗುವುದಿಲ್ಲ; ಬದಲಾಗಿ ಆ ವಸ್ತು- ಪಾತ್ರಗಳಲ್ಲಿರುವ ನಿಂದನೀಯ ವಿಷಯಗಳ ಬಗ್ಗೆ ವಿನೋದವಿರುತ್ತದೆ. ಅಪೇಕ್ಷಿತ ನಡತೆ, ಮಾತು ಮತ್ತು ವ್ಯವಹಾರವು ಎಲ್ಲಿ ಕಾಣುವುದಿಲ್ಲವೋ ಅಲ್ಲಿ ಹಾಸ್ಯವನ್ನು ಮಾಡಬಹುದು. ಆದರೂ ಇದರ ಭಾಷೆಯಲ್ಲಿ ಅಶ್ಲೀಲತೆ, ವಿಕೃತಿ ಅಥವಾ ಅಸತ್ಯ ಕಂಡುಬರುವುದಿಲ್ಲ. ಭಾವಪೂರ್ಣವಾಗಿದ್ದು, ಒಂದೇ ವಿಷಯದ ಬಗ್ಗೆ ತಿಳಿಸಿದರೆ ಅದು ಶುದ್ಧ ಪ್ರಹಸನವಾಗುತ್ತದೆ. ಇದರಲ್ಲಿ ಒಬ್ಬ ದುಷ್ಟನ ಬಗ್ಗೆ ಹಾಸ್ಯವಿರುತ್ತದೆ. ಎರಡನೇ ಪ್ರಹಸನಪ್ರಕಾರವಾದ ಸಂಕೀರ್ಣದಲ್ಲಾದರೋ ವೇಶ್ಯೆ, ರಾಜ, ಮಂತ್ರಿ, ಕ್ಷೌರಿಕ, ಅಜ್ಞಾನಿಗಳಾದ ಶಿಕ್ಷಕರು, ಉದ್ಧಟ ಶಿಷ್ಯರು, ಜ್ಯೋತಿಷ್ಕರು, ವೈದ್ಯರು ಮುಂತಾದವರ ಚರಿತ್ರೆಯೂ ಬರುತ್ತದೆ. ಹಾಗಾಗಿ ಅನೇಕರ ಚಾರಿತ್ರ್ಯವಿರುವುದರಿಂದ ಇದು ಸಂಕೀರ್ಣಪ್ರಹಸನವಾಗುತ್ತದೆ.

ಅಭಿನವಗುಪ್ತನು, "ಲೋಕವ್ಯವಹಾರದಲ್ಲಿ ಕಂಡುಬರುವ ಪ್ರಸಿದ್ಧವಾದ ವಿಷಯವನ್ನು, ಕವಿಯು ಕಥೆಗಾಗಿ ಸ್ವೀಕರಿಸಬೇಕು. ಉದಾಹರಣೆಗೆ- ಬೌದ್ಧ ಭಿಕ್ಷುಗಳ ಸ್ತ್ರೀಸಂಗವು ಹಾಸ್ಯದ ವಿಷಯ, ಆದರೆ ಅವರ ಚೌರ್ಯವು ಹಾಸ್ಯದ ವಿಷಯವಲ್ಲ" ಎಂಬ ವಿಮರ್ಶೆ ಮಾಡುತ್ತಾನೆ. ಶುದ್ಧ ಪ್ರಹಸನವು ಪ್ರಾಯಃ ಏಕಾಂಕವಾಗಿದ್ದರೆ, ಸಂಕೀರ್ಣವು ವೇಶ್ಯೆ ಮುಂತಾದವರ ಪಾತ್ರಗಳಿಗನುಸಾರವಾಗಿ ಅನೇಕಾಂಕವೂ ಆಗಬಹುದು. 'ಹಾಸ್ಯಚೂಡಾಮಣಿ'ಯಲ್ಲಿ ಎರಡು ಅಂಕಗಳಿವೆ.

ನಾಟ್ಯದರ್ಪಣದಲ್ಲಿಯೂ ಪ್ರಹಸನದ ಬಗ್ಗೆ ಈ ಮೇಲಿನ ಅಂಶಗಳನ್ನು ತಿಳಿಸಿ, ಅದರೊಂದಿಗೆ ಇನ್ನಷ್ಟು ಲಕ್ಷಣವನ್ನು ವಿವರಿಸುತ್ತದೆ.

वैमुख्यकार्यं वीथ्यङ्गि ख्यातकौलीनदम्भवत् । हास्याङ्गि भाणसंध्यङ्ग - वृत्ति प्रहसनं द्विधा ||83||

"ವೈಮುಖ್ಯವೆಂದರೆ ಬಹುಮಾನ ಅಥವಾ ಗೌರವವನ್ನು ನೀಡದಿರುವುದು. ಪ್ರಹಸನದಲ್ಲಿ ದುಷ್ಟಪಾತ್ರಗಳ ಅಪಮಾನವಾಗುತ್ತದೆ.

ಇದರಿಂದ ಜನರು ಅವರ ಸ್ವಭಾವವನ್ನು ಅರಿತು, ಪುನಃ ಅವರ ಬಳಿ ಹೋಗುವುದಿಲ್ಲ. ವೀಥೀ ರೂಪಕದ ಅಂಗಗಳನ್ನೂ[1] ಅದು ಹೊಂದಿರಬೇಕು. ಕೌಲೀನ ಎಂದರೆ ಪ್ರಸಿದ್ಧವಾದ ಜನರ ಅಭಿಪ್ರಾಯ. ಹಾಗಾಗಿ ಪ್ರಸಿದ್ಧವಾದುದನ್ನೇ ಹಾಸ್ಯಕ್ಕೆ ಕಥಾವಸ್ತುವನ್ನಾಗಿಸಬೇಕು. ಭಾಣ ರೂಪಕದಂತೆ ಇಲ್ಲಿಯೂ ಮುಖ ಮತ್ತು ನಿರ್ವಹಣ ಎಂಬ ಎರಡೇ ಸಂಧಿಗಳಿವೆ. ಭಾರತೀವೃತ್ತಿಯೇ ಪ್ರಧಾನ. ಪಾಖಂಡಿಗಳ ಶೃಂಗಾರವಾದ್ದರಿಂದ, ಸ್ವಾಭಾವಿಕವಾಗಿ ಯುವಪಾತ್ರಗಳಲ್ಲಿ ಕಂಡುಬರುವ ಕೈಶಿಕೀವೃತ್ತಿಗೆ ಇಲ್ಲಿ ಪ್ರಾಯಃ ಅವಕಾಶವಿರುವುದಿಲ್ಲ. ಹಾಗಾಗಿ ಲಾಸ್ಯಾಂಗಗಳೂ ಕಡಿಮೆ ಇರುತ್ತವೆ" ಎಂಬ ಅಂಶಗಳನ್ನೂ ಸೇರಿಸಲಾಗಿದೆ. ಪ್ರಹಸನಗಳನ್ನು ಬಾಲರು, ವೃದ್ಧರು, ಸ್ತ್ರೀಯರು ಮುಂತಾದವರು ನೋಡಿ ಅನಂತರ, ನಾಟಕವನ್ನು ನೋಡುವ ಪರಿಣತಿಯನ್ನು ಪಡೆಯುತ್ತಾರೆ ಎಂದೂ ಸಮರ್ಥಿಸಲಾಗಿದೆ.

ಈ ಲಕ್ಷಣಗಳಿಗೆ ಹೊಂದುವಂತೆ ರಂಗಭೂಮಿಯ ಪ್ರಯೋಗಗಳೂ ಸಾಕಷ್ಟು ಇರುವುದನ್ನು ಕಾಣಬಹುದು. ಸಮಾಜದಲ್ಲೇ ಹುಟ್ಟಿ ಬೆಳೆದು, ಅದರ ಲೋಪದೋಷಗಳನ್ನು ಸೂಕ್ಷ್ಮವಾಗಿ ಹಾಸ್ಯದ ಮೂಲಕ ತಿಳಿಹೇಳುವ ಮಾರ್ಗವು ಪ್ರಹಸನದಲ್ಲಿ ಕಂಡುಬರುತ್ತದೆ. ನವಿರಾದ, ಅಶ್ಲೀಲವಲ್ಲದ ಹಾಸ್ಯದಿಂದ ರಾಜಕಾರಣಿಗಳಿಂದ ಸಂನ್ಯಾಸಿಗಳವರೆಗೂ, ಮನೆಯ ವ್ಯವಹಾರದಿಂದ ಹಿಡಿದು ಸಾಮಾಜಿಕ ವ್ಯವಸ್ಥೆಯವರೆಗೂ ವಿಶ್ಲೇಷಿಸುವ ಸಾಧನ ಪ್ರಹಸನವಾಗಿದೆ. ಭಾರತದ ಎಲ್ಲ ಪ್ರಾದೇಶಿಕ ಭಾಷೆಗಳಲ್ಲಿಯೂ ಈ ರೂಪಕಪ್ರಕಾರವು ಕಂಡುಬಂದಿದ್ದು, ಪಾಶ್ಚಾತ್ಯ ಸಾಹಿತ್ಯದಲ್ಲಿಯೂ, ಗ್ರೀಕ್ ತತ್ವಜ್ಞಾನಿಯಾದ ಅರಿಸ್ಟಾಟಲ್ ಕೂಡ ಕಾಮಿಡಿ ಎಂಬ ವಿಧವಾದ ನಾಟಕಕ್ಕೆ ಭರತನಂತೆಯೇ ಲಕ್ಷಣವನ್ನು ನೀಡಿದ್ದಾರೆ. ಈ ಕಾಮಿಡಿ ನಾಟಕಗಳೇ ಮುಂದೆ **"farce"** ಎಂಬ ನಾಟಕ ಪ್ರಕಾರಕ್ಕೆ ಅಣಿವು ಮಾಡಿಕೊಟ್ಟಿತು. ಅಲ್ಲಿಯ ವಿದ್ವಾಂಸನಾದ George Meridith (1897) ಎಂಬುವನು, "the higher the comedy, the more prominent the part they enjoy in it" ಎಂದು ಸ್ತ್ರೀಯರ ಪ್ರಹಸನಪ್ರಿಯತೆಯನ್ನು ಸೂಚಿಸಿದ್ದಾನೆ.[2] ಹೀಗಾಗಿ ಪ್ರಪಂಚದಾದ್ಯಂತ ಹಾಸ್ಯ/ಪ್ರಹಸನದ ಸಾರ್ವತ್ರಿಕ ಸ್ವೀಕಾರ ಮತ್ತು ಆಸ್ವಾದ ಕಂಡುಬರುತ್ತದೆ.

ಭಾರತೀಯ ಪ್ರಹಸನಗಳ ಇತಿಹಾಸದಲ್ಲಿ ಹಾಸ್ಯಚೂಡಾಮಣಿಯ ವಿಶೇಷತೆ : ಪ್ರಹಸನಗಳ ವರ್ಗೀಕರಣವನ್ನು ಗಮನಿಸಿ, ಕೇವಲ ನಾಲ್ಕೇ ಪ್ರಹಸನಗಳನ್ನು ಶುದ್ಧ ಪ್ರಹಸನಗಳೆಂದು ವಿಶ್ಲೇಷಿಸಬಹುದು ಎಂಬುದಾಗಿ ರಾಮರತ್ನಂ ಎಂಬ ವಿದ್ವಾಂಸರು ಅಭಿಪ್ರಾಯಿಸಿದ್ದಾರೆ[3]. ಭಾಷೆಯ ಶೈಲಿ, ಪಾತ್ರಗಳ ಪರಿಕಲ್ಪನೆ, ಅಲ್ಲಿ ಕಂಡುಬರುವ ಅಶ್ಲೀಲತೆ ಇತ್ಯಾದಿಗಳನ್ನು ಗಮನಿಸಿ ಹೀಗೆ ವಿಂಗಡಿಸಲಾಗಿದೆ. ರಾಮರತ್ನಂ ಅವರು ಶಾಸ್ತ್ರಗ್ರಂಥಗಳ ಆಧಾರದಲ್ಲಿ ಲಕ್ಷಣವನ್ನು ಮತ್ತಷ್ಟು ವಿವರಿಸುತ್ತಾ, ಕೇವಲ ಒಬ್ಬ ವ್ಯಕ್ತಿಯೇ ಮುಖ್ಯವಾಗಿದ್ದು, ಉಳಿದ ಪಾತ್ರಗಳು ಗೌಣವಾಗಿದ್ದರೆ, ಅದು ಶುದ್ಧ ಪ್ರಹಸನ. ಇದರಲ್ಲಿ ಭಾಷೆಯು ಆಶ್ಲೀಲವಾಗಿರುವುದಿಲ್ಲ ಮತ್ತು ವೈಚಾರಿಕವಾದ ಸಂಭಾಷಣೆಯಿಂದ ಕೂಡಿರುತ್ತದೆ. ಮಿಶ್ರ ಪ್ರಹಸನದಲ್ಲಿ, ಅನೇಕರ ಕಥೆಯು ಬಂದಿದ್ದು, ಭಾಷೆಯು ಆಶ್ಲೀಲವಾಗಿರುತ್ತದೆ. ಅಧಮ ಪಾತ್ರಗಳೇ ಹೆಚ್ಚಾಗಿರುತ್ತವೆ. ವೇಶ್ಯೆ, ಜ್ಯೋತಿಷ, ವೈದ್ಯ, ಶಿಕ್ಷಕ ಮುಂತಾದ ಅನೇಕರ ಬಗ್ಗೆ ಹಾಸ್ಯವಿರಬಹುದು. ಆ ಪೈಕಿ ಶುದ್ಧ ಪ್ರಹಸನ ಜಾಡಿನಲ್ಲಿ ಮೊದಲನೆಯದಾಗಿ ಮಹೇಂದ್ರ ವಿಕ್ರಮವರ್ಮನ 'ಮತ್ತವಿಲಾಸ ಪ್ರಹಸನ'ವು (7ನೇ ಶತಮಾನದ ಪೂರ್ವಾರ್ಧದಲ್ಲಿ) ಕಂಡುಬರುವುದು. ಸುಮಾರು ಇದೇ ಕಾಲದ್ದೇ ಆದ

---

[1] उद्धात्यकावलगिते प्रपञ्चत्रिगते छलम् |
वाक्केल्यधिबले गण्डं अवस्यन्दित नालिके |असत्प्रलापव्याहारे मृदवानि त्रयोदश ||(दशरूपक, 3,12/13)- ಅನ್ಯಾರ್ಥವಿರುವ ಮಾತು, ಅನಪೇಕ್ಷಿತ ಘಟನೆ, ಅನವಶ್ಯಕ ಸ್ತುತಿ, ಮೂರು ಅರ್ಥ ಕೊಡುವ ಮಾತುಗಳು, ಮೋಸ, ಚಾಟೂಕ್ತಿ, ಪರಸ್ಪರ ಸ್ಪರ್ಧೆ, ಅನಿರೀಕ್ಷಿತ ಮಾತು, ಪುನರ್ವ್ಯಾಖ್ಯಾನ, ಒಗಟು, ಅಸಂಬದ್ಧ ಮಾತು, ಹಾಸ್ಯದ ಮಾತು, ಗುಣದೋಷಗಳ ವಿಪರ್ಯಾಸ –ಇವೇ 13 ವೀಥ್ಯಂಗಗಳು.

[2] *Prahasana in Sanskrit literature* by S. Ramaratnam,1987. Pages 270.

[3] *ibid*, Pages 269, 270.

ಬೋಧಾಯನ ಕವಿಯ 'ಭಗವದಜ್ಜುಕ' ಎಂಬುದು ಎರಡನೇ ಶುದ್ಧಪ್ರಹಸನ. ಇದಾದ ಮೇಲೆ, ಐದುನೂರು ವರ್ಷಗಳಾದ ನಂತರ ಅಮಾತ್ಯ ವತ್ಸರಾಜನ 'ಹಾಸ್ಯಚೂಡಾಮಣಿ' ಎಂಬುದು ಮೂರನೇ ಶುದ್ಧ ಪ್ರಹಸನ ಕಂಡುಬರುತ್ತದೆ. ಹದಿನೆಂಟನೇ ಶತಮಾನದ ಕವಿ ರಾಮ ಫಣಿವಾದ ಅವರ "ಮದನಕೇತುಚರಿತ" ಎಂಬುದು ನಾಲ್ಕನೇ ಶುದ್ಧ ಪ್ರಹಸನವಾಗಿದೆ. ಹೀಗಾಗಿ ಸಂಸ್ಕೃತ ಸಾಹಿತ್ಯದಲ್ಲಿ ಅನೇಕ ಪ್ರಹಸನಗಳು ಕಂಡರೂ ಕೂಡ, ನಾಲ್ಕೇ ಶುದ್ಧ ಪ್ರಹಸನಗಳಾಗಿವೆ. ಸಂಕೀರ್ಣ ಪ್ರಹಸನಗಳನ್ನು ಗಮನಿಸಿದಾಗ, ಕವಿರಾಜ ಶಂಖಧರನು 'ಲಟಕಮೇಲಕ' ಎಂಬ ಪ್ರಹಸನವನ್ನು ಹನ್ನೆರಡನೇ ಶತಮಾನದಲ್ಲಿ ರಚಿಸಿದನು. ತದನಂತರ ಜ್ಯೋತಿರೀಶ್ವರನು (1275–1324) 'ಧೂರ್ತಸಮಾಗಮ' ಎಂಬ ಪ್ರಹಸನವನ್ನು ಬರೆದಿದ್ದಾನೆ. ಇದರ ನಂತರ ಹದಿನೇಳನೆಯ ಶತಮನದಲ್ಲಿಯೇ ಪುನಃ ಸಾಮರಾಜ ದೀಕ್ಷಿತನ 'ಧೂರ್ತನರ್ತಕ' ಕಾಣಸಿಗುತ್ತದೆ– ಎಂದಿದ್ದಾರೆ. ಇದರಿಂದ ಸಂಸ್ಕೃತ ಪ್ರಹಸನಗಳ ಸಾಲಿನಲ್ಲಿ ಹಾಸ್ಯಚೂಡಾಮಣಿ ಅಧ್ಯಯನಯೋಗ್ಯವೆನ್ನುವುದು ಸ್ಪಷ್ಟಪಡುತ್ತದೆ. ಜ್ಞಾನರಾಶಿ ಎಂಬ ಕಪಟ ಗುರುವೇ ಇಲ್ಲಿ ನಾಯಕ. ಅವನ ಶಿಷ್ಯನಾದ ಕೌಂಡಿನ್ಯನೊಂದಿಗೆ ಜನಸಾಮಾನ್ಯರನ್ನು ನಂಬಿಸಿ ಮೋಸ ಮಾಡುವುದೇ ಇವನ ವೃತ್ತಿಯಾಗಿದೆ. ಹೀಗೆ ಪ್ರಧಾನಪಾತ್ರವು ಹೇಗೆ ಹಣಕ್ಕಾಗಿ ಜನರನ್ನು ಮೋಸಮಾಡಿ, ಸ್ತ್ರೀಯ ವ್ಯಾಮೋಹಕ್ಕೆ ಸಿಲುಕಿ, ಜೂಜುಕೋರನಿಗಾಗಿ ವಿಶೇಷ ಜಪವನ್ನು ಮಾಡಿ, ಕೊನೆಗೆ ಹಾಸ್ಯಸ್ಪದನಾಗುತ್ತಾನೆ ಎಂಬುದೇ ಇದರ ಇತಿವೃತ್ತ. ಆದ್ದರಿಂದ ಇದು ಶುದ್ಧ ಪ್ರಹಸನ.

ಕಥಾನಕ: ಹಾಸ್ಯಚೂಡಾಮಣಿಯೆಂಬ ಈ ಪ್ರಹಸನದಲ್ಲಿ, ಜ್ಞಾನರಾಶಿ ಎಂಬ ಗುರುವಿನ ಬಗ್ಗೆ ಪ್ರಮುಖವಾಗಿ ಉಪಹಾಸವಿದೆ. ನಾಂದಿಯ ನಂತರ ಸೂತ್ರಧಾರನು ಪ್ರವೇಶಿಸಿ, ತನ್ನನ್ನು ತಾನೇ ಸೂರ್ಯನಿಗೆ ಹೋಲಿಸಿಕೊಂಡು, ಸೂರ್ಯನು ಅಸ್ತಮಿಸುತ್ತಿರುವಂತೆ, ತಾನೂ ಮುಪ್ಪಿನಿಂದ ಈಗ ಬಾಡುತ್ತಿರುವ ವಯಸ್ಸಿನಲ್ಲಿ ನಾಟಕದಲ್ಲಿ ತೊಡಗಿದರೆ ಹಾಸ್ಯಾಸ್ಪದವಾಗುತ್ತದೆ ಎಂದು ತಿಳಿಸುತ್ತಾನೆ. ಆಗ ಪಾರಿಪಾರ್ಶ್ವಕನು ಪ್ರವೇಶಿಸಿ, ರಾಜ ಪರಮರ್ದಿದೇವನ ಆದೇಶದಂತೆ ಇಂದು ಕವಿ ವತ್ಸರಾಜನ ಹಾಸ್ಯಚೂಡಾಮಣಿ ಎಂಬ ನಾಟಕವನ್ನು ಆಡಬೇಕೆಂದು ತಿಳಿಸುತ್ತಾನೆ. ಇದರಿಂದ ಸಂತೋಷಗೊಂಡ ಸೂತ್ರಧಾರನು, ರಾಜ ಪರಮರ್ದಿದೇವನನ್ನು "ರೂಪಕ–ನಿರೂಪಣಾ–ನೈಪುಣ್ಯೈಕಪಾತ್ರಂ" (ರೂಪಕಗಳ ನಿರೂಪಣೆಯ ನೈಪುಣ್ಯದಲ್ಲಿ ಅದ್ವಿತೀಯನು) ಮತ್ತು "ವಾಗಧಿದೇವತಾ ಭಗವತಿ ಪುಂಭಾವಮಭ್ಯಾಗತಾ" (ಸರಸ್ವತಿಯೇ ಪುರುಷತ್ವವನ್ನು ಪಡೆದು ಬಂದಿದ್ದಾಳೆ) ಎಂದು ಹೊಗಳಿ, ಎಲ್ಲರೂ ಸಜ್ಜಾಗಿರಲು ನಾಟಕವನ್ನು ಆರಂಭಿಸಬಹುದು ಎನ್ನುತ್ತಾನೆ. ನೇಪಥ್ಯದಲ್ಲಿ "ಚೋರನಾದ ಕತ್ತಲಿನಿಂದ ಅಪಹರಿಸಲ್ಪಟ್ಟ ತನ್ನ ಸಂಪತ್ತಿಯನ್ನು ಪುನಃ ಪಡೆಯಲು ಆಕಾಶವೆಂಬ ಲಕ್ಷ್ಮಿಯು ಸೂರ್ಯನ ಹಿಂದೆ ಅನುಸರಿಸುತ್ತಾಳೆ" ಎಂದು ಕಥೆಯ ಸೂಚನೆಯು ಕೇಳಿಬರುತ್ತದೆ. ಇದರಿಂದ ಪ್ರಸ್ತಾವನೆಯು ಸಮಾಪ್ತವಾಗುತ್ತದೆ.

ನಾಟಕದ ಮುಖ್ಯಭಾಗದಲ್ಲಿ, ಕಪಟಕೇಲಿ ಎಂಬ ಮಹಿಳೆಯು ಬೆಳಗಿನ ಜಾವ ಎದ್ದು, ತಾನು ಮದಿರೆಯನ್ನು ಕುಡಿದ ಕಾರಣ ರಾತ್ರಿಯು ಬೇಗ ಕಳೆಯಿತೆಂದು ಸಂತೋಷಗೊಳ್ಳುತ್ತಾಳೆ.[1] "ಇವಳ ಚೌರ್ಯದಿಂದ ಮನೆಯಲ್ಲಿ ಜಗಳ ಆಗುತ್ತಿದೆ. ಇದನ್ನು ಜ್ಞಾನಿಯಿಂದಲೇ ಬೆಳಕಿಗೆ ತರುತ್ತೇನೆ" ಎಂದು ತಿಳಿಸಿ, ಅಲ್ಲೇ ಸಮೀಪದಲ್ಲಿದ್ದ ಜೀರ್ಣೋದ್ಯಾನದಲ್ಲಿ ವಾಸಿಸುತ್ತಿದ್ದ ಜ್ಞಾನರಾಶಿ ಎಂಬ ಗುರುವಿನ ಬಳಿಗೆ ಹೋಗಲು ನಿರ್ಧರಿಸುತ್ತಾಳೆ.[2] ತನ್ನ ಸೇವಕನಾದ ಮುದ್ಗರಕನು ನಿದ್ರೆ ಎಂಬ ಹೆಣ್ಣು ಹಾವಿನಿಂದ ಕಚ್ಚಲ್ಪಟ್ಟಿರಲು ("बाढ खलु एष दष्टो निद्दोरग्या") ಈ ಕಪಟಕೇಲಿಯು ಅವನಿಗೆ ಮದಿರೆಯನ್ನು ಕೊಟ್ಟು ಎಬ್ಬಿಸುತ್ತಾಳೆ. "ತಾವು

---

[1] ಈ ರೂಪಕದ ಒಂದು ಪುಟವು ಪುಸ್ತಕದಲ್ಲಿ ಕಾಣುವುದಿಲ್ಲ. ಹಾಗೆಯೇ ಪ್ರಾಕೃತ ಮಾತುಗಳಿಗೆ ಟಿಪ್ಪಣಿಯಾಗಿರುವ ಸಂಸ್ಕೃತ ಛಾಯೆಯೂ ಒಂದು ಪುಟದಲ್ಲಿ ಕಾಣುವುದಿಲ್ಲ.

[2] ಪ್ರಾಯಃ ಇಲ್ಲಿ ತನ್ನ ಮಗಳಾದ ಮದನಸುಂದರಿಯಿಂದ ಚೌರ್ಯವಾಯಿತೆಂದು ಇವಳು ಸಂಶಯ ಪಡುತ್ತಾಳೆಂದು ಕಾಣುತ್ತದೆ. ಪುಟ ಲಭ್ಯವಿಲ್ಲದ ಕಾರಣ ವಿವರ ತಿಳಿದುಬಂದಿಲ್ಲ.

ಅಲ್ಲಿಯವರೆಗೂ ಸಂಗ್ರಹಿಸಿದ ಹಣವನ್ನೆಲ್ಲಾ ಕಳ್ಳರು ಅಪಹರಿಸಿದ್ದು, ಅದಕ್ಕಾಗಿ ಹುಡುಕೋಣ" ಎನ್ನುತ್ತಾಳೆ. ಮುದ್ಗರಕನೋ "ಅಮ್ಮ, ಕಳ್ಳತನವಾದದ್ದಕ್ಕೆ ನನಗೆ ಬೇಸರವಿಲ್ಲ. ಆದರೆ ನಿನ್ನನ್ನೂ ಯಾರೋ ಮೋಸ ಮಾಡಲು ಸಾಧ್ಯವಾಯಿತು" ಎಂಬುದು ವಿಷಾದದ ಸಂಗತಿ. 'ನ ಖಲು ಅಗ್ನಿ: ಕೇನಾಪಿ ದಗ್ಧ: ಶ್ರೂಯತೆ' (ಬೆಂಕಿಯನ್ನು ಯಾರಿಂದಲೂ ಸುಡಲು ಸಾಧ್ಯವಿಲ್ಲವಷ್ಟೆ)" ಎಂದು ಮರುಗುತ್ತಾನೆ. ಅವಳು ಕೋಪಗೊಂಡು ಅವನಿಗೆ ಹೊಡೆಯುತ್ತಾಳೆ. ಪ್ರತೀಕಾರ ಮಾಡಬೇಕೆಂಬುದನ್ನು ಮದಿರಾ–ಮಹೋತ್ಸವದಲ್ಲಿ ಮರೆಯಬೇಕು ಎಂದು ಅವನಿಗೆ ತಿಳಿಸಿ, ಇಬ್ಬರೂ ಉದ್ಯಾನಕ್ಕೆ ಬರುತ್ತಾರೆ. ಇವೆಲ್ಲಾ ಪ್ರೇಕ್ಷಕರಿಗೆ ರಂಜಕವಾಗಿರುತ್ತದೆ.

ನಂತರ ಮುದ್ಗರಕನು ಅಲ್ಲಿರುವ ವಸಂತವೈಭವವನ್ನು ಕಂಡು, "ವಸಂತನೂ ಕಳ್ಳನಂತೆ ಕುಂದಪುಷ್ಪದ ಬಳ್ಳಿಯಿಂದ ಹೂವುಗಳನ್ನು ಕದ್ದಿದ್ದಾನೆ" ಎನ್ನುತ್ತಾನೆ. ಹಣವನ್ನು ಕಳೆದುಕೊಂಡ ಕಾರಣ, ತನಗೆ ಯಾವ ವಸಂತನೂ ಕಾಣುತ್ತಿಲ್ಲ ಎಂದು ಕಪಟಕೇಲಿಯು ದು:ಖಿಸುತ್ತಾಳೆ. ಮುದ್ಗರಕನಿಗೆ 'ಜ್ಞಾನರಾಶಿ' ಎಂಬ ಸಂನ್ಯಾಸಿಯನ್ನು ಹುಡುಕಲು ತಿಳಿಸುತ್ತಾಳೆ.

ಇತ್ತ ಮಠದ ಪರಿಸರದಲ್ಲಿ ಜ್ಞಾನರಾಶಿ ಎಂಬ ಸಂನ್ಯಾಸಿಯು ತನ್ನ ಶಿಷ್ಯನಾದ ಕೌಂಡಿನ್ಯನಿಗೆ ಅಧ್ಯಾಪನ ಮಾಡುತ್ತಿರುವ ದೃಶ್ಯ. ಇಲ್ಲಿ ತೀರ ಮಂದಮತಿಯಾದ ಶಿಷ್ಯನು ಹೇಗೆ ವಿದ್ಯೆಯನ್ನು ಕಲೆಯುತ್ತಾನೆ ಎಂದು ಕವಿಯು ನಿರೂಪಿಸಿದ್ದಾನೆ. ಮೊದಲು ಅವನು ಗುರುವನ್ನು 'ಜ್ಞಾನರಾಶಿ' ಎಂದೇ ಹೆಸರನ್ನು ಹೇಳಿ ಕರೆಯುತ್ತಾನೆ. ಅದಕ್ಕೆ ಗುರುವು ನಿಂದಿಸಲು, "ಹಾಗಾದರೆ ಗುರುವಾದ (ಭಾರವಾದ) ಪರ್ವತಗಳನ್ನು ಹೇಗೆ ಹೆಸರಿಸಬಹುದು" ಎನ್ನುತ್ತಾನೆ. "ಎರಡೂ ಶ್ಲೋಕಗಳು ಕಂಠಗತವಾಗಿವೆಯಾ" ಎಂದು ಗುರುವು ಪ್ರಶ್ನಿಸಲು, "ಉದರಗತವಾಗಿವೆ" ಎಂದು ಉತ್ತರಿಸುತ್ತಾನೆ ."ಧ್ಯೇಯೋ ನಾರಾಯಣ: ಸದಾ" ಎಂಬುದಕ್ಕೆ "ಧ್ಯೇಯೋ ನಾರೀಜನ: ಸದಾ" ಎಂದೂ, "ನಮಸ್ತೆ ಪುಂಡರೀಕಾಕ್ಷ" ಎಂಬುದಕ್ಕೆ "ನಮಸ್ತೆ ಪಾಂಡುರೈಕಾಕ್ಷ" ಎಂದು ಗುರುವನ್ನೇ ಉಪಹಾಸ ಮಾಡುವ ರೀತಿ ಶ್ಲೋಕಗಳನ್ನು ಹೇಳುತ್ತಾನೆ. ಪುನಃ ಗುರುವು ಅವನನ್ನು ಬೈದು, ಹೊಡೆಯಲು ಹೋದಾಗ, "ಗುರುವನ್ನೂ ಮೀರಿಸುವ ಶಿಷ್ಯನು ನಾನಾದ್ದರಿಂದ ನನ್ನನ್ನು ನೀವು ಸಹಿಸುತ್ತಿಲ್ಲ. ನಾನು ಹೊರಡುತ್ತೇನೆ" ಎಂದು ಪ್ರತ್ಯುತ್ತರ ನೀಡುತ್ತಾನೆ ಕೌಂಡಿನ್ಯ. ಕೊನೆಗೆ, "ನಿಜವಾಗಲೂ ನನ್ನನ್ನು ಅರಿತವನು ಇವನು" ಎಂದು ಗುರುವೇ ಗ್ರಹಿಸಿ, ಅವನನ್ನು ಸಮಾಧಾನ ಮಾಡಿ, ಪುನಃ ಪಾಠವನ್ನು ಹೇಳುತ್ತಾನೆ. ಹೀಗೊಂದು ಪ್ರಹಸನದಲ್ಲಿ ಹಾಸ್ಯಮಯವಾದ ದೃಶ್ಯವು ಕಾಣುತ್ತದೆ. ಸರಿಯಾಗಿ ಜ್ಞಾನವಿಲ್ಲದವನು ಜ್ಞಾನರಾಶಿ ಎಂಬ ಹೆಸರನ್ನು ಹೊಂದಿದ್ದನು, ಅವನು ಕಪಟ ವಿದ್ಯೆಗಳನ್ನೇ ಅರಿತಿದ್ದನೆಂದೂ, ಗುರುವಿನ ಬಂಡವಾಳವಿಲ್ಲದ ಬಡಾಯಿಯನ್ನು ಶಿಷ್ಯನು ಅರಿತಿದ್ದನೆಂದು ಪ್ರೇಕ್ಷಕರಿಗೆ ತಿಳಿಯುತ್ತದೆ.

ಗುರುಶಿಷ್ಯರ ಸಂವಾದದಲ್ಲಿ ಕೌಂಡಿನ್ಯನು "ಈ ಶ್ಲೋಕಗಳೆಲ್ಲ ಕಠಿಣ, ನನಗೆ ಬೇರೆಯವರ ಹಣವು ಸ್ವಾಧೀನವಾಗುವ 'ಕೇವಲೀವಿದ್ಯೆಯನ್ನು' ಬೋಧಿಸಿ ಎಂದು ಕೇಳಿಕೊಳ್ಳುತ್ತಾನೆ. "ಆ ವಿದ್ಯೆಯು ಶ್ರೇಯಸ್ಕರವಲ್ಲ, ಅದು ಕುಲಕ್ಕೆ ಶತ್ರುಪ್ರಾಯವಾದದ್ದು" ಎಂದು ಶಿಷ್ಯನಿಗೆ ತಿಳಿಸಿದರೂ, ಮನಸ್ಸಿನಲ್ಲಿ "ನೀನು ಅದನ್ನು ಕಲಿಯಲು ಯೋಗ್ಯನಲ್ಲ" ಎಂದು ಗುರುವು ನಗುವನು. ಆದರೂ "ಯಾರು ಧನದ ವಿಷಯ ಕೇಳುವರೋ, ಅವರ ಪ್ರಶ್ನೆಯಲ್ಲೇ ಉತ್ತರ ಹುಡುಕಬೇಕು. ಏನಾದರೂ ಕಾರ್ಯವು ಸಿದ್ಧಿಸಿದರೆ, ನಾನು ಅದನ್ನು ಮುಂಚಿತವಾಗೇ ತಿಳಿಸಿದ್ದೆ ಅನ್ನಬೇಕು. ವೃಥಾ ಹೆಚ್ಚು ಹೆಚ್ಚಾಗಿ ಸಾಕ್ಷಿಗಳ ಬಗ್ಗೆ ಹೇಳಬೇಕು. ನೀವೇ ಸರಿಯಾಗಿ ಪ್ರಶ್ನೆಯನ್ನು ಕೇಳಿಲ್ಲ. ನಿಮ್ಮ ದೋಷದಿಂದಲೇ ಇದು ಫಲಿಸಿಲ್ಲ ಅಥವಾ ಭ್ರಮೆಗೆ ಒಳಗಾದೆ." ಹೀಗೆ ಈ ಕೇವಲೀವಿದ್ಯೆ ಬಾರದಿದ್ದರೂ ಜನರನ್ನು ವಂಚಿಸಬಹುದು ಎಂದು ಗುರುವು ಉಪದೇಶ ನೀಡುವನು. ಅಷ್ಟರಲ್ಲಿ, ಕಪಟಕೇಲೀ ಮತ್ತು ಮುದ್ಗರಕ ಅಲ್ಲಿಗೆ ಬರಲು, ಗುರುವು ತಕ್ಷಣ ತನ್ನ ಸಿದ್ಧಿಗಳ ಬಗ್ಗೆ ಹೊಗಳಿಕೊಂಡು, "ತಾನು ಯಾರದ್ದಾದರೂ ಕಳೆದುಹೋದ ಹಣವನ್ನು ಅವರಿಗೆ ತಲುಪಿಸುತ್ತೇನೆ" ಎನ್ನುತ್ತಾನೆ.

ಇದನ್ನು ಕೇಳಿ ಸಂತುಷ್ಟಗೊಂಡ ಕಪಟಕೇಲಿಯು ತನ್ನ ಕಳೆದುಹೋದದದ್ದನ್ನು ಇವನು ತಿಳಿಸಬೇಕೆಂದು ಕೋರುವಳು. ಜ್ಞಾನರಾಶಿಯು ಯಾವುದೋ ಗ್ರಂಥವನ್ನು ತರುವಂತೆ ಶಿಷ್ಯನಿಗೆ ಆಜ್ಞಾಪಿಸುತ್ತಾನೆ. ಗುರುವಿಗಿಂತ ಚಾಣಾಕ್ಷನಾದ ಶಿಷ್ಯನು, ಅದನ್ನು ಸುವರ್ಣ ಮತ್ತು ರತ್ನಗಳಿಂದಲೇ ಪೂಜಿಸಬೇಕೆಂದು ಮುದ್ಗರಕನಿಗೆ ತಿಳಿಸಿ, ಅವನ ಉಂಗುರವನ್ನು ತೆಗೆದುಕೊಳ್ಳುತ್ತಾನೆ. ಗುರುವು ಗ್ರಂಥವನ್ನು ಓದಿದಂತೆ ಅಭಿನಯಿಸಿ, ಸುಳ್ಳಾಗಿ ಗ್ರಹನಕ್ಷತ್ರಗಳ ಬಗ್ಗೆ ವಿವರಿಸಿ, ಹಣವು ಸಿಗುವುದಾಗಿ ತಿಳಿಸುವನು. ಮನೆಯವರ ಹೆಸರುಗಳನ್ನೆಲ್ಲಾ ಕೇಳಿ, ಭ್ರಮೆಯಿಂದ "ಕಪಟಕೇಲಿಯೇ ಕಳ್ಳಿ" ಎನ್ನುತ್ತಾನೆ. ಹಣವನ್ನು ಕಳೆದುಕೊಂಡಿದ್ದವಳ ಹೆಸರೇ ಕಪಟಕೇಲಿ ಎಂದು ಅರಿವಾದ ಮೇಲೆ, ತನ್ನ ತಪ್ಪನ್ನು ಮುಚ್ಚಿಕೊಳ್ಳಲು, ಬೇರೆಯವರಿಗೆ ಸಂಶಯ ಬರಿಸಲು ತಾನು ಹಾಗೆ ಹೇಳಿದೆನೆಂದು ತಿಳಿಸಿ ಕಪಟಕೇಲಿ, ಮುದ್ಗರರನ್ನೂ ಮನೆಗೆ ಕಳುಹಿಸುತ್ತಾನೆ. ಉದ್ಯಾನದ ಪರಿಸರದ ಎರಡನೇ ಅಂಕದಲ್ಲಿ, ಉಂಗುರವನ್ನು ಸಂತೋಷದಿಂದ ಧರಿಸಿದ ಮೇಲೆ, ಗುರುವು, ಯಾರೋ ಕಲಾಕರಂಡಕ ಎಂಬ ಜೂಜುಕೋರನು ಇವನಿಗೆ ಜಪವನ್ನು ಮಾಡಲು ತಿಳಿಸಿರುವುದನ್ನು ಸ್ಮರಿಸಿಕೊಳ್ಳುತ್ತಾನೆ. ಆ ಕಲಾಕರಂಡಕನು ಜೂಜಿನಲ್ಲಿ ಎಲ್ಲವನ್ನೂ ಕಳೆದುಕೊಂಡಿರುತ್ತಾನೆ. ಆದರೆ ಮದನಸುಂದರಿ ಎಂಬ ಕಪಟಕೇಲಿಯ ಮಗಳಾದ ಗಣಿಕೆಯನ್ನು ಪ್ರೀತಿಸುತ್ತಿರುತ್ತಾನೆ. ಯತಾರ್ಥದಲ್ಲಿ ಮದನಸುಂದರಿಯು ತನ್ನ ಮನೆಯಿಂದಲೇ ಹಣವನ್ನು ಕದ್ದು, ಅದನ್ನು ಕಲಾಕರಂಡಕನಿಗೆ ಕಳುಹಿಸಿ; ಅವನ ಪ್ರತೀಕ್ಷೆಯಲ್ಲಿ ಮದನಸುಂದರಿಯು ಉದ್ಯಾನದಲ್ಲಿ ಪರಿತಪಿಸುತ್ತಿರುತ್ತಾಳೆ. ಪ್ರಾಕೃತದಲ್ಲೇ ಮಾತಾಡುವ ಅವಳು, ಸಂಸ್ಕೃತದಲ್ಲೂ ಒಂದು ಶ್ಲೋಕವನ್ನು ಹೇಳುತ್ತಾಳೆ (2ನೇ ಅಂಕ, 3ನೇ ಶ್ಲೋಕ). ಇತ್ತ ಮದನಸುಂದರಿಯನ್ನು ನೋಡಿ, ಗುರುವಿಗೆ ಕಾಮಜ್ವರವು ಬಂದು, ಅವಳನ್ನು ವಶೀಕರಿಸಿಕೊಳ್ಳಲು ಮಂತ್ರಪ್ರಯೋಗವನ್ನು ಮಾಡುತ್ತಾನೆ. ಆದರೆ ಶಿಷ್ಯನ ಅಸೂಯೆ ಮತ್ತು ದ್ರೋಹದ ಬುದ್ಧಿಯಿಂದ ಮದನಸುಂದರಿಯು ಆಕರ್ಷಿತಳಾಗದೆ, ಅವಳ ತಾಯಿಯಾದ ಕಪಟಕೇಲಿಯು ಗುರುವಿಗೆ ಆಕರ್ಷಿತಳಾಗುತ್ತಾಳೆ. ಇದೊಂದು ಪರಿಹಾಸದ ಪ್ರಸಂಗವಾಗಿ ಸಭಿಕರಿಗೆ ಆನಂದವನ್ನು ನೀಡುತ್ತದೆ. ಆ ವೃದ್ಧೆಯ ಶೃಂಗಾರದ ಅನುಭಾವಗಳನ್ನು ಆರನೇ ಶ್ಲೋಕದಲ್ಲಿ ಕವಿಯು ಸೊಗಸಾಗಿ ವರ್ಣಿಸಿದ್ದಾನೆ. ಗುರುವು ಅವಳಿಗೆ ನಮಸ್ಕರಿಸಿ, "ಅಂಬಾ" ಎಂದು ಸಂಬೋಧಿಸಿದರೆ, ಅವಳು "ನಿತ್ಯ ಕಾಮನನ್ನು ಸೇವಿಸಿದರೆ, ಕಾಮಜನಕನಾದ ಹರಿಯು ಸಂತೋಷಗೊಳ್ಳುತ್ತಾನೆ" ಎಂದು ಅವನನ್ನು ಸಮಾಧಾನ ಪಡಿಸುತ್ತಾಳೆ (9ನೇ ಶ್ಲೋಕ). ಕಡೆಗೆ ಗುರುವು ಅವಳನ್ನು ಹೊಡೆಯಲು ದಂಡವನ್ನು ತೆಗೆದುಕೊಂಡಾಗ, ಕಪಟಕೇಲಿಯು ತನ್ನ ಸೇವಕರಾದ ಕೋಕಿಲ ಮತ್ತು ಪಾರಾವತರನ್ನು ಕರೆಯುತ್ತಾಳೆ. ಅವರಿಬ್ಬರೂ ಗುರುವಿನ ಕೈಯಲ್ಲಿ ಕಪಟಕೇಲಿಯ ಉಂಗುರವನ್ನು ನೋಡಿ, ಇವನ ಮೇಲೆ ಕೋಪಗೊಂಡು ಕೊಲ್ಲಲು ಹೊರಡುತ್ತಾರೆ. ಆದರೆ ಕಪಟಕೇಲಿಯ ಮತ್ತು ಕೌಂಡಿನ್ಯನ ಮಾತುಗಳಿಂದ ಪ್ರಭಾವಿತರಾಗಿ ಗುರುವಿನಲ್ಲಿ ಕ್ಷಮಾಪಣೆ ಕೇಳುತ್ತಾರೆ. ಗುರುವು ಅವರಿಗೆ 'ಲಾಂಗಲೀ ರಸ'ವನ್ನು ಕೊಟ್ಟು, ಅದನ್ನು ಕಣ್ಣಿಗೆ ಲೇಪಿಸಿಕೊಳ್ಳುವುದರಿಂದ "ನಿಧನ(ಸಾವು) ಅಥವಾ ನಿಧಾನ(ನಿಧಿ) ಸಿಗುವುದು" ಎಂದು ತಿಳಿಸುತ್ತಾನೆ. ಕೋಕಿಲನು "ನಿಧನ ಮತ್ತು ನಿಧಾನಗಳ ಮಧ್ಯೆ ಯಾವುದು ಗುರು" (ಭಾರ, ಹೆಚ್ಚು) ಎಂದು ಕೇಳಲು, ಜ್ಞಾನರಾಶಿಯು ಜಾಣತನದಿಂದ "ನಿಧನದಲ್ಲಿ ಒಂದು ಮಾತ್ರೆ ಅಕ್ಷರ ಕಡಿಮೆ ಇದ್ದರೂ, ಎಲ್ಲ ದು:ಖಗಳಿಗೂ ಸಮಾಧಾನ ಹೇಳುವ ನಿಧನವೇ (ಸಾವೇ)ಶ್ರೇಷ್ಠ" ಎಂದು ವೇದಾಂತ ಮಾತಾಡುತ್ತಾನೆ. ಅವರಿಗೆಲ್ಲ ಈ ಅಂಜನವನ್ನು ಲೇಪಿಸಿದ ಬಳಿಕ ಅದು ವಿಷದಿಂದ ಕೂಡಿದ್ದೆಂದೂ, ಶಿಷ್ಯನು ಪ್ರಮಾದದಿಂದ ತಂದುಕೊಟ್ಟಿದ್ದಾನೆ, ಎಂದು ಗುರುವಿಗೆ ತಿಳಿಯುತ್ತದೆ. ಈ ವಿಷಯದಿಂದ ಕೋಪಗೊಂಡ ಕೋಕಿಲ ಮತ್ತು ಪಾರಾವತರು ಗುರು ಮತ್ತು ಶಿಷ್ಯ –ಇಬ್ಬರ ಕಣ್ಣಿಗೂ ಆ ಅಂಜನವನ್ನು ಬಳೆಯುತ್ತಾರೆ. ಹೀಗೆ ಕಪಟಕೇಲಿಯನ್ನೂ ಒಳಗೊಂಡಂತೆ ಎಲ್ಲರೂ ಅಂಜನದ ಪ್ರಭಾವದಿಂದ ಕಣ್ಣುಕಾಣದೆ ಒಬ್ಬರ ಮೇಲೆ ಮತ್ತೊಬ್ಬರು ಬಿದ್ದೇಳುವುದೂ ಆಗಿ, ಪರಿಹಾಸದ ಪ್ರಸಂಗವಾಗುತ್ತದೆ.

ಕೊನೆಯ ದೃಶ್ಯದಲ್ಲಿ ಮದನಸುಂದರಿ ಮತ್ತು ಕಲಾಕರಂಡಕರಿದ್ದಲ್ಲಿ ಎಲ್ಲರೂ ಹೋಗಿ, ಕಣ್ಣುಗಳನ್ನು ತೊಳೆದುಕೊಂಡು ಸ್ವಸ್ಥರಾಗುತ್ತಾರೆ. ಕಲಾಕರಂಡಕನು ಜೂಜಿನಲ್ಲಿ ದ್ಯೂತಕರರನ್ನೆಲ್ಲಾ ಗೆದ್ದು, ಮದನಸುಂದರಿಯನ್ನು ಪಡೆದು, ಗುರುಗಳಾದ ಜ್ಞಾನನಿಧಿಗಳನ್ನು 'ಜಗದ್ಗುರು' ಎಂದು ಸಂಬೋಧಿಸಿ, ಅವನ ಆಶೀರ್ವಾದದೊಂದಿಗೆ ಕಪಟಕೇಲಿಯ ಪರಿವಾರದೊಂದಿಗೆ ಆನಂದದಿಂದ ಇರುತ್ತಾನೆ. ಅಲ್ಲಿಗೆ ಕವಿಯು ಭರತವಾಕ್ಯದಲ್ಲಿ "ರಾಜರು ಚೆನ್ನಾಗಿ ಆಳಲಿ, ಮೋಡಗಳು ಮಳೆಗರೆಯಲಿ, ಲೋಕವು ಶೋಕದಿಂದ ದೂರವಾಗಿ ಶಂಕರನ ಧ್ಯಾನದಲ್ಲಿ ಲೋಕವು ಧನ್ಯತೆಯನ್ನು ಪಡೆಯಲಿ" ಎಂದು ಆಶಿಸುತ್ತಾನೆ.

ವಿಶ್ಲೇಷಣೆ : ಪ್ರಹಸನ ಎಂಬ ಹೆಸರೇ ಸೂಚಿಸುವಂತೆ, ಸಾಮಾನ್ಯ ಜನರ ಮನೋರಂಜನೆಯ ವಸ್ತುವು ಇಲ್ಲಿದೆ. ಒಂದೇ ಅಧಮ ಪಾತ್ರವನ್ನು ಮುಖ್ಯಪಾತ್ರವನ್ನಾಗಿ ಮಾಡಿಕೊಂಡು, ನೂತನವಾದ ಕಥಾವಸ್ತುವನ್ನು ಹೆಣೆದಿರುವುದು ಇಲ್ಲಿ ಪ್ರಶಂಸನೀಯ. ಈ ಪ್ರಹಸನದ ನಾಂದಿಪದ್ಯದಲ್ಲಿ ಕವಿಯು ಹಾಸ್ಯರಸಕ್ಕೆ ಅಧಿದೇವತೆಯೂ, ಪ್ರಮಥ ಗಣಗಳಿಗೆ ನಾಯಕನೂ ಆದ ಬಾಲಗಣೇಶನ[1] ಚೇಷ್ಟೆಯನ್ನು ವರ್ಣಿಸಿ ಅದರಿಂದ ಮುದಗೊಂಡ ಶಿವನು "ನಿಮ್ಮೆಲ್ಲರನ್ನು ಕಾಪಾಡಲಿ" ಎಂದು ಆಶೀರ್ವಾದಪೂರ್ವಕ ಮಂಗಳವನ್ನು ಮಾಡುತ್ತಾನೆ. "ಚಂದ್ರನ ಕಿರಣಗಳು ಶಿವನ ಶಿರಸ್ಸಿನ ಮೇಲೆ ಹರಿಯುವ ಗಂಗೆಯ ಅನೇಕ ಧಾರೆಗಳಂತೆ ಎಲ್ಲೆಡೆಯೂ ಹರಡಿವೆ. ಆ ಕಿರಣಗಳನ್ನು ನೋಡಿ ಮದಗೊಂಡು ಕೋಪೋದ್ರಿಕ್ತನಾದ ಗಣಪತಿಯು ತನ್ನ ಸೊಂಡಿಲಿನಿಂದ ನಿರಂತರವಾಗಿ ದೂರಮಾಡಲು ಪ್ರಯತ್ನಿಸುತ್ತಾ ವಿಫಲನಾದದ್ದನ್ನು ನೋಡಿ ನಗುತ್ತಿರುವ ಶಿವನು ನಿಮ್ಮನ್ನು ಕಾಪಾಡಲಿ" ಎಂದು ಹೇಳುತ್ತಾ, ರೂಪಕದ ಮುಖ್ಯವಾದ ರಸವನ್ನು ಮೊದಲನೇ ಶ್ಲೋಕದಲ್ಲಿ ಕವಿಯು ಸೂಚಿಸುತ್ತಾನೆ. ಎರಡನೇ ನಾಂದಿ ಪದ್ಯದಲ್ಲಿ "ಶಿವನ ನಗುವು ಪಾರ್ವತಿಗೆ ಸಂಬದ್ಧವಾದದ್ದು. ಶಿವನು ಅನೇಕ ಭುಜಗಳನ್ನೂ, ಅನೇಕ ಕಣ್ಣುಗಳನ್ನೂ, ಅನೇಕ ಮುಖಗಳನ್ನೂ ಹೊಂದಿದವನು. ಇದರಿಂದ ನೀನು ಬಹುಪತ್ನೀಕನಾಗಿರುವುದು ಸರಿಯೇ" ಎಂದು ಪ್ರಶ್ನಿಸುತ್ತಲೇ "ಶೃಂಗಾರ ಚೇಷ್ಟೆಯಲ್ಲಿ ಕೋಪಗೊಂಡರೂ 'ನಿನಗೆ ನಾನು ಹೇಗೆ ತಾನೆ ಸರಿಸಮಳು' ಎಂದು ಪ್ರಶ್ನಿಸಿದ ಪಾರ್ವತಿಯನ್ನು ಕಂಡು, ನಕ್ಕ ಪರಶಿವನು ನಿಮ್ಮನ್ನು ಕಾಪಾಡಲಿ" ಎಂದು ವಂದಿಸಿದ್ದಾನೆ.

ಈ ಪ್ರಹಸನವು ಸಂಪೂರ್ಣವಾಗಿ ಲೋಕಧರ್ಮಿಯಾಗಿದ್ದರೂ, ಸ್ವಗತ ಮತ್ತು ಜನಾಂತಿಕ ಎಂಬ ನಾಟ್ಯಧರ್ಮಿಯ ಪ್ರಯೋಗವೂ ಕಾಣುತ್ತದೆ. ರೂಪಕದ ಬಹುಪಾಲು ಶೌರಸೇನಿ ಪ್ರಾಕೃತದಲ್ಲಿದ್ದು, ಕೇವಲ ಗುರು ಮತ್ತು ಕಲಾಕರಂಡಕರ ಮಾತು ಸಂಸ್ಕೃತದಲ್ಲಿದೆ. ಮದನಸುಂದರಿ ಮತ್ತು ಕಲಾಕರಂಡಕರ ಕಿಂಚಿತ್ ಹಾಸ್ಯಮಯ ಶೃಂಗಾರವನ್ನು ಕಾಣಬಹುದು. ವೀಥ್ಯಂಗವಾದ ಅವಲಗಿತವನ್ನು[2] ಇಲ್ಲಿ ಕಾಣಬಹುದು. ಪ್ರಹಸನದ ಅಂಶಗಳಾದ ಅನೃತ (ಸುಳ್ಳು), ಪ್ರಪಂಚ (ಸುಮ್ಮನೆ ಹೊಗಳುವುದು), ವಿಭ್ರಾಂತಿ (ಒಬ್ಬರನ್ನು ಮತ್ತೊಬ್ಬರಾಗಿ ಭ್ರಮಿಸುವುದು) ಇತ್ಯಾದಿಗಳೆಲ್ಲಾ ಸಹಜವಾಗಿ ತೋರಿಕೊಂಡಿವೆ. ವೇದಾಂತತತ್ತ್ವಗಳನ್ನು ಗುರುವಿನ ಮಾತುಗಳಲ್ಲಿ ಹೇಳಿಸಿ ವ್ಯಕ್ತಿತ್ವದಲ್ಲಿರುವ ವೈರುಧ್ಯ-ವಿಪರ್ಯಾಸವನ್ನು ಕಾಣಿಸಿರುವುದೂ ಸೊಗಸಾಗಿದೆ.[3] ಪಾತ್ರಗಳ ಚೇಷ್ಟೆಗಳು ಸಮಾಜದ ಪ್ರತಿಬಿಂಬವಾಗಿದ್ದು, ಸಾಮಾನ್ಯರು ಸ್ಪಂದಿಸಲು ಹಾದಿ ಮಾಡಿಕೊಡುತ್ತದೆ.

---

[1] ಸಾಹಿತ್ಯದರ್ಪಣದಲ್ಲಿ ಹಾಸ್ಯರಸಕ್ಕೆ ಅಧಿದೇವತೆ ಶಿವನ ಮಗ. ಮೂರನೇ ಪರಿಚ್ಛೇದ, ಶ್ಲೋಕ 214.

[2] ಹಿಂದೆ ಮಾಡಿದ ನಿರ್ಣಯ/ಕಾರ್ಯವನ್ನು ವಿಭ್ರಮದಿಂದ ದೂಷಿಸುವುದು ಅಥವಾ ತ್ಯಜಿಸುವುದನ್ನು ಅವಲಗಿತ ಎನ್ನುತ್ತಾರೆ. ಉದಾಹರಣೆಗೆ: ಕಪಟಕೇಲಿಯು "ನಾನು ನಿನ್ನೆ ಹಣವನ್ನೆಲ್ಲಾ ಕಳೆದುಕೊಂಡೆ" ಎಂದಾಗ, ಶಿಷ್ಯನಾದ ಕೌಂಡಿನ್ಯನು, "ಆದರೆ ನಮ್ಮ ಗುರುಗಳು ನಿನ್ನೆ ಮಠದಲ್ಲೇ ಇದ್ದರಲ್ಲ" ಎನ್ನುತ್ತಾನೆ. ಅರ್ಥಸಂಬಂಧವಿಲ್ಲವೆಂದು ಮೇಲ್ನೋಟಕ್ಕೆ ಅನಿಸಿದರೂ ಒಂದಕ್ಕೊಂದು ಮಾತುಗಳು ಹೊಂದಿ ಬರುವಂತೆಯೇ ಇದೆ.

[3] जरामृत्युव्याधिव्यसनघटनाग्रैक हृदयो(1,25) ಎಂಬ ಶ್ಲೋಕದಲ್ಲಿ ಮುಪ್ಪು, ರೋಗ, ಮೃತ್ಯು, ಇತ್ಯಾದಿಗಳು ಪ್ರತಿನಿಮಿಷವೂ ವರ್ಧಿಸುವ ಈ ದೇಹಕ್ಕೇಕೆ ಅಲಂಕಾರ? ಹೊತ್ತಿ ಉರಿಯುತ್ತಿರುವ ಮನೆಯಲ್ಲಿ ಯಾರು ತಾನೇ ಕೊಡವನ್ನು ಕಟ್ಟುತ್ತಾನೆ? – ಎಂಬಿತ್ಯಾದಿ ಮಾತುಗಳಿವೆ.

ಉಪಸಂಹಾರ

